ಶನಿವಾರ, ನವೆಂಬರ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 324 | ಪುಟ 18
www.prajavani.net
prajavani.net prajavani prajavani prajavani

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೆಲಸಗಳ ನಡುವೆ ಹೆಣ್ಣು ಗಂಡೆಂಬ ಗೋಡೆ ಬೇಡ



ಚರ್ಚೆ: ಚಾಂಪಿಯನ್ಸ್ ಟ್ರೋಫಿ: ಭಾರತ ಕ್ರಿಕೆಟ್ ತಂಡ ಪಾಕಿಸ್ತಾನದಲ್ಲಿ ಆಡಬೇಕೇ, ಬೇಡವೇ?

ಮಣಿಪುರಕ್ಕೆ ಹೆಚ್ಚುವರಿಯಾಗಿ ಸಿಆರ್‌ಪಿಎಫ್‌ನ 70 ತುಕಡಿ 10
ಛತ್ತೀಸಗಢ: ಹತ್ತು ನಕ್ಸಲರ ಹತ್ಯೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,117	23,907	₹81,210 (ಬೆಂಗಳೂರು)	₹95,600 (ಬೆಂಗಳೂರು)	84.41

ಅದಾನಿ ವಿರುದ್ಧ ಸೆಬಿ ತನಿಖೆ?

ಅಮೆರಿಕ ಕೋರ್ಟ್‌ನಲ್ಲಿ ಆರೋಪ ಪಟ್ಟಿ • ಷೇರುಪೇಟೆ ನಿಯಮಾವಳಿ ಉಲ್ಲಂಘನೆ ಪರಿಶೀಲನೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಯ ವಹಿವಾಟಿಗೆ ಸಂಬಂಧಿಸಿದಂತೆ ರೂಪಿಸಿರುವ ನಿಯಮಾವಳಿಗಳನ್ನು ಅದಾನಿ ಸಮೂಹವು ಉಲ್ಲಂಘಿಸಿದೆಯೇ ಎಂಬ ಬಗ್ಗೆ ಸತ್ಯಶೋಧನೆ ನಡೆಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮುಂದಾಗಿದೆ.

ಅಮೆರಿಕದ ನ್ಯಾಯಾಂಗ ಇಲಾಖೆ ಮತ್ತು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ), ಉದ್ಯಮಿ ಗೌತಮ್ ಅದಾನಿ ವಿರುದ್ಧ ಲಂಚದ ಆರೋಪ ಮಾಡಿದೆ. ಈ ಪ್ರಕರಣದಲ್ಲಿ ಭಾರತೀಯ ಷೇರುಪೇಟೆಯ ನಿಯಮಾವಳಿಗಳನ್ನು ಉಲ್ಲಂಘಿಸ-ಲಾಗಿದೆಯೇ ಎನ್ನುವ ಕುರಿತು ಪರಿಶೀಲಿಸಿ ವಿವರಣೆ ನೀಡುವಂತೆ ಷೇರು ವಿನಿಮಯ ಕೇಂದ್ರಗಳ ಅಧಿಕಾರಿಗಳಿಗೆ ಸೆಬಿ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕದ ನ್ಯಾಯಾಂಗ ಇಲಾಖೆಯ ಮುಂದೆ ಅದಾನಿ ಗ್ರೀನ್ ಎನರ್ಜಿ ಕಂಪನಿಯು ಸೂಕ್ತ ಪುರಾವೆಗಳನ್ನು ನೀಡುವಲ್ಲಿ ವಿಫಲವಾಗಿದೆಯೇ ಎಂಬ ಬಗ್ಗೆಯೂ ಕೂಲಂಕಷವಾಗಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ ಎಂದು ಹೇಳಿವೆ.



ಈ ಸತ್ಯಶೋಧನಾ ಪ್ರಕ್ರಿಯೆಯು ಎರಡು ವಾರದವರೆಗೆ ನಡೆಯಲಿದೆ. ಆ ಬಳಿಕ ಸೆಬಿಯು ಅದಾನಿ ಗ್ರೀನ್ ಎನರ್ಜಿ ವಿರುದ್ಧ ಔಪಚಾರಿಕವಾಗಿ ತನಿಖೆ ಆರಂಭಿಸುವ ಸಾಧ್ಯತೆಯಿದೆ ಎಂದು ತಿಳಿಸಿವೆ.

11ನೇ ಪುಟ ನೋಡಿ

ಸೆಬಿ ಅಧಿಕಾರ ಎಷ್ಟು?

ಷೇರುಪೇಟೆಯಲ್ಲಿ ನೋಂದಾಯಿತ ಹಾಗೂ ನೋಂದಾಯಿತವಲ್ಲದ ಕಂಪನಿಗಳೊಟ್ಟಿಗೆ ನಡೆಸಿರುವ ವಹಿವಾಟಿನ ಉಲ್ಲಂಘನೆ ಹಾಗೂ ಲಿಸ್ಟಿಂಗ್ ನಿಯಮಗಳ ಅನು-ಸರಣೆಯಲ್ಲಿ ನಿರ್ಲಕ್ಷ್ಯ ತೋರುವುದಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವ ಅಧಿಕಾರವನ್ನು ಸೆಬಿ ಹೊಂದಿದೆ.

ಈ ಬಗ್ಗೆ ಮುಂಬೈ ಷೇರು ವಿನಿಮಯ ಕೇಂದ್ರ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದಿಂದ ಸಲ್ಲಿಕೆಯಾಗುವ ದೂರಿನ ಮೇರೆಗೆ ತನಿಖೆ ನಡೆಸುತ್ತದೆ.

ಅದಾನಿ ಸಮೂಹದ ವಿರುದ್ಧ ಈಗಾಗಲೇ ಪೂರ್ಣಗೊಂಡಿರುವ ತನಿಖೆಗಳ ಬಗ್ಗೆ ಸೆಬಿಯು ಯಾವುದೇ ಮಾಹಿತಿಯನ್ನು ಪ್ರಕಟಿಸಿಲ್ಲ. ನಿಯ-ಮಾವಳಿಗಳನ್ನು ಉಲ್ಲಂಘಿಸುವ ಕಂಪನಿಗಳನ್ನು ಷೇರುಪೇಟೆ ವಹಿವಾಟಿನಿಂದ ನಿರ್ಬಂಧಿಸುವ ಹಾಗೂ ದಂಡ ವಿಧಿಸುವ ಅಧಿಕಾರ ಅದಕ್ಕಿದೆ.

ಕೇಂದ್ರ ಸೂಚಿಸಿದರೆ ಕ್ರಮ: ಡಿಕೆಶಿ




ಬೆಂಗಳೂರು: 'ಅದಾನಿ ಸಮೂಹವು ರಾಜ್ಯದಲ್ಲಿ ₹20 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಿದೆ. ಕೇಂದ್ರ ಸರ್ಕಾರ ತನಿಖೆ ನಡೆಸಿ, ಕ್ರಮಕ್ಕೆ ಸೂಚಿಸಿದರೆ ಆ ಕಂಪನಿ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ರಾಜ್ಯದಲ್ಲಿರುವ ಅದಾನಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ತಾಕತ್ತು ರಾಜ್ಯ ಸರ್ಕಾರಕ್ಕೆ ಇದೆಯೇ' ಎಂದು ಬಿಜೆಪಿ ನಾಯಕರು ಪ್ರಶ್ನಿಸಿದ್ದಾರಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅದಾನಿ ವಿರುದ್ಧ ಕೇಂದ್ರ ಸರ್ಕಾರ ತನಿಖೆ ಆರಂಭಿಸಿ, ಮೊದಲು ಕ್ರಮ ಕೈಗೊಳ್ಳಲಿ' ಎಂದರು.

'ಇಷ್ಟು ದಿನ ಬಿಜೆಪಿ ನಾಯಕರೇ ಅದಾನಿಯನ್ನು ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಎಷ್ಟು ದಿನ ಅದಾನಿ ಅವರನ್ನು ರಕ್ಷಣೆ ಮಾಡುತ್ತಾರೆ? ಈಗಲಾದರೂ ಅವರನ್ನು ಬಂಧಿಸಿ, ದೇಶದ ಗೌರವ ಉಳಿಸಬೇಕು. ಕಾನೂನು ಕ್ರಮಕ್ಕೆ ಒಳಪಡಿಸಬೇಕು' ಎಂದು ಅವರು ಆಗ್ರಹಿಸಿದರು. 'ಪಾರದರ್ಶಕವಾಗಿ ನಡೆಯುವ ಯೋಜನೆಗಳ ಬಗ್ಗೆ ರಾಜ್ಯ ಸರ್ಕಾರ ಆಕ್ಷೇಪ ಮಾಡುವುದಿಲ್ಲ' ಎಂದರು.

ಅಧ್ಯಯನ ಬಳಿಕ ನಿರ್ಧಾರ: ನಾಯ್ಡು



ಅಮರಾವತಿ/ಹೈದರಾಬಾದ್: 'ಈ ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರ್ಕಾರ ಹಾಗೂ ಅದಾನಿ ಸಮೂಹದ ವಿರುದ್ಧ ಕೇಳಿಬಂದಿರುವ ಲಂಚದ ಆರೋಪಕ್ಕೆ ಸಂಬಂಧಿಸಿ ಅಮೆರಿಕದ ಕೋರ್ಟ್‌ಗೆ ಸಲ್ಲಿಕೆಯಾಗಿರುವ 'ಆರೋಪಪಟ್ಟಿ' ಕುರಿತು ಸರ್ಕಾರ ಅಧ್ಯಯನ ನಡೆಸಲಿದೆ. ವಿದ್ಯುತ್ ಖರೀದಿ ಒಪ್ಪಂದದಲ್ಲಿ ಅಕ್ರಮವಾಗಿದ್ದು ಕಂಡು ಬಂದಲ್ಲಿ ಕ್ರಮ ಜರುಗಿಸ-ಲಾಗುವುದು' ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಶುಕ್ರವಾರ ಹೇಳಿದ್ದಾರೆ.

11ನೇ ಪುಟ ನೋಡಿ

ಮಹಾರಾಷ್ಟ್ರ–ಜಾರ್ಖಂಡ್: ಮತ ಎಣಿಕೆಗೆ ಕ್ಷಣಗಣನೆ

ಕುತೂಹಲಕ್ಕೆ ಇಂದು ತೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆ ಚುನಾವಣೆಗಳ ಮತ ಎಣಿಕೆ ಶನಿವಾರ (ನ.23) ನಡೆಯಲಿದೆ.

ಲೋಕಸಭಾ ಚುನಾವಣೆಯಲ್ಲಿ ಎದುರಿಸಿದ ಆಘಾತದಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಚೇತರಿಸಿಕೊಳ್ಳಲಿದೆಯೇ ಅಥವಾ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟ ತನ್ನ ಸಾಧನೆಯನ್ನು ಉತ್ತಮಪಡಿಸಿಕೊಳ್ಳ-ಲಿದೆಯೇ ಎಂಬುದು ಈ ಫಲಿತಾಂಶದಿಂದ ಗೊತ್ತಾಗಲಿದೆ.

ಮತ ಎಣಿಕೆ ಕಾರ್ಯ ಬೆಳಿಗ್ಗೆ 8ಕ್ಕೆ ಆರಂಭವಾಗಲಿದ್ದು, ಯಾವ ಪಾಳಯ ಸರಳ ಬಹುಮತದತ್ತ ಸಾಗುತ್ತಿದೆ ಎಂಬುದು ಮಧ್ಯಾಹ್ನದ ವೇಳೆಗೆ ಬಹುತೇಕ ನಿಚ್ಚಳವಾಗಲಿದೆ.

ಇದೇ ವೇಳೆ, 48 ವಿಧಾನಸಭಾ ಕ್ಷೇತ್ರಗಳು ಹಾಗೂ 2 ಲೋಕಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಗಳ ಮತ ಎಣಿಕೆ ಕೂಡ ಶನಿವಾರ ನಡೆಯಲಿದೆ. ಈ ಉಪಚುನಾವಣೆಯ ಫಲಿತಾಂಶವು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ನಾಯಕತ್ವದ ಮೇಲೂ ಪರಿಣಾಮ ಬೀರಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

11ನೇ ಪುಟ ನೋಡಿ

ಉಪಚುನಾವಣೆ: ಯಾರಿಗೆ ಸಿಹಿ?

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್, ಮೈತ್ರಿ ಪಕ್ಷಗಳಾದ ಬಿಜೆಪಿ–ಜೆಡಿಎಸ್‌ಗೆ ಪ್ರತಿಷ್ಠೆಯಾಗಿದ್ದ ಸಂಡೂರು, ಶಿಗ್ಗಾವಿ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಮತಗಳ ಎಣಿಕೆ ಕಾರ್ಯ ನ. 23ರಂದು ನಡೆಯಲಿದ್ದು, ಮೂರೂ ಪಕ್ಷಗಳ ಸಾಮರ್ಥ್ಯ ಏನೆಂಬುದು ಗೊತ್ತಾಗಲಿದೆ.

ಮೂರೂ ಕ್ಷೇತ್ರಗಳಿಗೆ ನ. 13ರಂದು ಮತದಾನ ನಡೆದಿತ್ತು. ಆಯಾ ಕ್ಷೇತ್ರ ವ್ಯಾಪ್ತಿಯ ಜಿಲ್ಲಾ ಕೇಂದ್ರಗಳಲ್ಲಿ ಮತ ಎಣಿಕೆ ಕಾರ್ಯ ಬೆಳಿಗ್ಗೆ 8ರಿಂದ ಆರಂಭವಾಗಲಿದೆ. ಎಲ್ಲ ಕೇಂದ್ರಗಳಲ್ಲಿಯೂ ಮತ ಎಣಿಕೆಗೆ ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇವಿಎಂ ಯಂತ್ರಗಳಲ್ಲಿ ಚಲಾವಣೆಯಾದ ಮತಗಳ ಎಣಿಕೆಗೂ ಮೊದಲು ಅಂಚೆ ಮತಗಳ ಎಣಿಕೆ ಕಾರ್ಯ ನೆರವೇರಲಿದೆ. ಕಡಿಮೆ ಅಭ್ಯರ್ಥಿಗಳಿರುವ ಸಂಡೂರು, ಶಿಗ್ಗಾವಿ ಕ್ಷೇತ್ರದ ಫಲಿತಾಂಶ ಬಹುಬೇಗ ದೊರಕಬಹುದು. ಅತಿ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸಿದ್ದ ಚನ್ನಪಟ್ಟಣ ಕ್ಷೇತ್ರದ ಫಲಿತಾಂಶ ಮಧ್ಯಾಹ್ನದ ವೇಳೆಗೆ ಸಿಗುವ ನಿರೀಕ್ಷೆ ಇದೆ.



ಶಿಗ್ಗಾವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆಗೆ 14 ಟೇಬಲ್‌ಗಳ ವ್ಯವಸ್ಥೆ-ಯಾಗಿದ್ದರೆ, ಚನ್ನಪಟ್ಟಣ ಕ್ಷೇತ್ರದ ಎಣಿಕೆ ಕಾರ್ಯಕ್ಕೆ 15 ಟೇಬಲ್‌ಗಳ ವ್ಯವಸ್ಥೆಯಾಗಿದೆ. ಶಿಗ್ಗಾವಿ ಕೇಂದ್ರದಲ್ಲಿ 57, ಸಂಡೂರಿನಲ್ಲಿ 62 ಹಾಗೂ ಚನ್ನಪಟ್ಟಣದಲ್ಲಿ 93 ಸಿಬ್ಬಂದಿ ಮತ ಎಣಿಕೆ ಕಾರ್ಯ ನಡೆಸಲಿದ್ದಾರೆ.

11ನೇ ಪುಟ ನೋಡಿ

ರಾಜ್ಯವ್ಯಾಪಿ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ವಕ್ಫ್ ನೋಟಿಸ್

ಬೆಂಗಳೂರು: ರೈತರ ಜಮೀನುಗಳಿಗೆ ವಕ್ಫ್ ನೋಟಿಸ್ ನೀಡಿರುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 'ನಮ್ಮ ಭೂಮಿ ನಮ್ಮ ಹಕ್ಕು' ಹೆಸರಿನಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು, ರಾಯಚೂರು, ಕೊಪ್ಪಳ, ಮಂಡ್ಯ, ಮೈಸೂರು, ಬೀದರ್, ಕಲಬುರಗಿ, ಮಂಗಳೂರು, ಧಾರವಾಡ, ದಾವಣಗೆರೆ ಸೇರಿ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿ, ವಕ್ಫ್ ಮಂಡಳಿಯನ್ನು ರದ್ದುಪಡಿಸಬೇಕು, ರೈತರ ಜಮೀನನ್ನು ವಕ್ಫ್ ಆಸ್ತಿ ಎಂದು ನಮೂದು ಮಾಡಿರುವುದನ್ನು ರೈತರ ಹೆಸರಿಗೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು. ಒಂಬತ್ತು ಜಿಲ್ಲೆಗಳಲ್ಲಿ ಗುರುವಾರ ಪ್ರತಿಭಟನೆ ನಡೆದಿತ್ತು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ವಿರೋಧಪಕ್ಷದ ನಾಯಕ ಆರ್. ಅಶೋಕ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ಶುಕ್ರವಾರ ಬೆಳಗ್ಗಿನಿಂದ ಸಂಜೆಯವರೆಗೆ ಪ್ರತಿಭಟನೆ ನಡೆಯಿತು. ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ಶ್ರೀರಾಮಸೇನೆ ಕಾರ್ಯಕರ್ತರು ಚಾಮರಾಜಪೇಟೆಯಲ್ಲಿರುವ ಸಚಿವ ಜಮೀರ್ ಅಹಮ್ಮದ್ ಖಾನ್ ಕಚೇರಿಗೆ ಮುತ್ತಿಗೆ ಹಾಕಲು ಹೊರಟಾಗ ಪೊಲೀಸರು ಅವರನ್ನು ತಡೆದು ವಶಕ್ಕೆ ತೆಗೆದುಕೊಂಡರು.

ಮಂಡ್ಯದಲ್ಲಿ ನಡೆದ ಪ್ರತಿಭಟನೆ ವೇಳೆ ಮಾತನಾಡಿದ ಮಾಜಿ ಸಂಸದೆ ಸುಮಲತಾ, 'ರೈತರ ಕೃಷಿ ಭೂಮಿ, ಮಠ ಮತ್ತು ದೇವಸ್ಥಾನಗಳ ಜಮೀನು ಕಬಳಿಸುವ ಪ್ರಯತ್ನ ನಡೆದಿದೆ. ಈಗಲೇ ಎಚ್ಚೆತ್ತುಕೊಳ್ಳದೇ ಇದ್ದರೆ ಬಾಂಗ್ಲಾದೇಶದ ಪರಿಸ್ಥಿತಿ ನಮ್ಮಲ್ಲೂ ಬರುತ್ತದೆ' ಎಂದು ಎಚ್ಚರಿಕೆ ನೀಡಿದರು.

ಮೈಸೂರಿನಲ್ಲಿ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ರಘು ಕೌಟಿಲ್ಯ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

10ನೇ ಪುಟ ನೋಡಿ

ಜನರಿಗೆ ಉಳಿದಿದ್ದು ಬಂದೂಕು ಸದ್ದು, ರಕ್ತದ ಕಲೆ ಮಾತ್ರ

ಕಾಡಂಚಿನ ಅತಂತ್ರ ಬದುಕು

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಕುದುರೆಮುಖ ರಾಷ್ಟ್ರೀಯ ಉದ್ಯಾನದ ಹೆಸರಿನಲ್ಲಿ ಕಾಡಂಚಿನ ಜನರನ್ನು ಒಕ್ಕಲೆಬ್ಬಿ-ಸುವ ಪ್ರಯತ್ನ ಶುರುವಾಗಿ ನಾಲ್ಕೈದು ದಶಕಗಳೇ ಕಳೆದಿವೆ. ಅತಂತ್ರ ಸ್ಥಿತಿಯ ನಡುವೆ ಕಾಡಿನ ಜನರ ಬದುಕು ಅಕ್ಷರಶಃ ಮೂರಾಬಟ್ಟೆಯಾಗಿದೆ. ಪುನರ್ವಸತಿಯೂ ಇಲ್ಲ, ನೆಮ್ಮದಿಯೂ ಇಲ್ಲ, ಉಳಿದದ್ದು ಬಂದೂಕಿನ ಸದ್ದು, ರಕ್ತದ ಕಲೆಗಳು ಮಾತ್ರ...



ಕುದುರೆಮುಖ ರಾಷ್ಟ್ರೀಯ ಉದ್ಯಾನದ ಒಳಗಿರುವ ಗಿರಿಜನರ ಜೋಪಡಿ

ಕುದುರೆಮುಖ ಸುತ್ತಮುತ್ತಲ ಗುಡ್ಡಗಳನ್ನು ಬ್ರಿಟಿಷ್ ಆಡಳಿತದ 1914ರಿಂದ 1916ರ ಅವಧಿಯಲ್ಲಿ ಮೀಸಲು ಅರಣ್ಯ ಮತ್ತು ಅಭಯಾರಣ್ಯ ಎಂದು ಘೋಷಣೆ ಮಾಡಲಾಗಿತ್ತು. ಅದು ಕಾಡಾಗಿಯೇ ಮುಂದುವರಿದಿತ್ತು. 1987ರಲ್ಲಿ ರಾಷ್ಟ್ರೀಯ ಉದ್ಯಾನ ಎಂದು ಘೋಷಣೆ ಮಾಡಲಾಯಿತು. ಘೋಷಿತ ಪ್ರದೇಶವಲ್ಲದೆ, ಗುಡ್ಡಗಳ ನಡುವೆ ಕಂದಾಯ ಜಾಗವನ್ನು ಪರಿಸರ ಸೂಕ್ಷ್ಮ ವಲಯ (ಇಎಸ್‌ಝಡ್) ಎಂದು ಗುರುತಿಸಿ ಅಲ್ಲಿನ ಗಿರಿಜನರನ್ನು ಒಕ್ಕಲೆ-ಬ್ಬಿಸುವ ಕಾರ್ಯ ಆರಂಭವಾಯಿತು.

ಕಾಡಿನಿಂದ ಒಕ್ಕಲೆಬ್ಬಿಸುವ ವಿರುದ್ಧ ನಿರಂತರವಾಗಿ ಹೋರಾಟ ನಡೆದವು. ಪೊಲೀಸ್ ಮತ್ತು ಅರಣ್ಯ ಇಲಾಖೆ ಹಾಕುತ್ತಿದ್ದ ಮೊಕದ್ದಮೆಗಳಿಂದ ಬೇಸತ್ತು ಕೆಲವರು ಬಂದೂಕು ಹಿಡಿದು ನಕ್ಸಲ್ ಚಳವಳಿ ಸೇರಿಕೊಂಡರು. ಮಲೆನಾಡಿನ ಹಸಿರ ನೆಲದಲ್ಲಿ ರಕ್ತಸಿಕ್ತ ಕೆಂಪು ಹಾದಿಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ಘೋಷಣೆ ಅಡಿಗಲ್ಲು ಹಾಕಿತು.

6ನೇ ಪುಟ ನೋಡಿ

ಟೊಮೆಟೊ ವೈನ್ ತಯಾರಿಕೆ



ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಯಲ್ಲಿನ ದರ ಏರಿಳಿತದಿಂದ ಟೊಮೆಟೊ ಬೆಳೆಗಾರರು ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ, ಟೊಮೆಟೊದಿಂದ ವೈನ್ ತಯಾರಿಕೆ ಸೇರಿದಂತೆ ಹೆಚ್ಚಿನ ಮೌಲ್ಯವರ್ಧನೆ ಮೂಲಕ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ. 12

ಚುನಾವಣಾ ಫಲಿತಾಂಶದ ಕ್ಷಣ ಕ್ಷಣದ ಮಾಹಿತಿಗಾಗಿ Prajavani.net ನೋಡಿ

₹10 ಲಕ್ಷ ಲಂಚ

'ಲೋಕಾ' ಬಲೆಗೆ ಬುಡಾ ಆಯುಕ್ತ

ಪ್ರಜಾವಾಣಿ ವಾರ್ತೆ



ಶ್ರೀಕಾಂತ

ಬೀದರ್: ಕೃಷಿಯೇತರ ಜಮೀನಿನ (ಎನ್.ಎ) ನಿವೇಶನಗಳ ಮಾರಾಟದ ಅನುಮತಿಗಾಗಿ ₹10 ಲಕ್ಷ ನಗದು ಲಂಚ ಪಡೆಯು-ತ್ತಿದ್ದಾಗ ಇಲ್ಲಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ಆಯುಕ್ತ ಸೇರಿದಂತೆ ಮೂವರು ಶುಕ್ರವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಪ್ರಾಧಿಕಾರದ ಆಯುಕ್ತ ಶ್ರೀಕಾಂತ ಚಿಮಕೋಡೆ, ಸದಸ್ಯ ಚಂದ್ರಕಾಂತ ರೆಡ್ಡಿ ಹಾಗೂ ಇವರ ಆಪ್ತ ಸಿದ್ದು ಹೂಗಾರ ಎಂಬಾತನನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



Eleenova™
Inspiring Emotions

ಎಲೀನೋವಾ ಬಳಸಿ ನಿಮ್ಮ ಅಡುಗೆ ಮನೆಯನ್ನು ಆಧುನಿಕರಿಸಿ.

ಅತ್ಯಂತ ಹೆಚ್ಚಿನ ಕಾಳಜಿ ಮತ್ತು ಅತ್ಯುತ್ತಮ ಸಾಮಗ್ರಿಗಳನ್ನು ಬಳಸಿ ಎಲೀನೋವಾ ಉತ್ಪನ್ನಗಳನ್ನು ರೂಪಿಸಲಾಗಿದೆ.
ಪ್ರತಿ ಉತ್ಪನ್ನವನ್ನೂ ಆಹ್ಲಾದಕರ ಮತ್ತು ಆನಂದಿಸಬಹುದಾದ ಅನುಭವವನ್ನು
ಬಳಕೆದಾರರಿಗೆ ಒದಗಿಸಲು ವಿನ್ಯಾಸ ಮಾಡಲಾಗಿದೆ.

ಎಕ್ಸ್‌ಕ್ಲೂಸಿವ್ ಎಲೀನೋವಾ ಆಫರ್ಸ್

ಪಡೆಯಿರಿ 30-40% ರಿಯಾಯಿತಿ ಇತರ ಉತ್ಪನ್ನಗಳ ಮೇಲೆ*



ನಿಮ್ಮ ಮೆಚ್ಚಿನ ಉತ್ಪನ್ನಗಳ ಮೇಲೆ ಆಕರ್ಷಕ ಉದ್ಘಾಟನೆ ಕೊಡುಗೆಗಳನ್ನು ಪಡೆಯಿರಿ.

BUY



Reflex Gas Stove 3 Burner (1 Unit)
MRP ₹ **7,345.00***

GET



Induction Cooktop Reflection 2000 W (1Unit) MRP ₹ 5,195.00*
Optima Electric Kettle 1.7 Litre (1Unit) MRP ₹ 1,595.00*
Total worth
₹ **6,790.00*** **FREE**

BUY



Eleemix Mixer Grinder 750 W (1Unit)
MRP ₹ **5,795.00***

GET



Harmony Rice Cooker 1.8 Litres (1Unit)
MRP ₹ **3,895.00*** **FREE**

BUY



Induction Cooktop Reflection - 2000 W (1Unit)
MRP ₹ **5,195.00***

GET Non-Stick Cookware range



Aspire Frypan 24 Cm (1Unit) MRP ₹ 1,190.00*
Aspire Flat Tawa 28 Cm (1Unit) MRP ₹ 1,375.00*
Aspire Kadhai with Lid 24 Cm (1Unit) MRP ₹ 1,650.00*
Total worth
₹ **4,215.00*** **FREE**

BUY



Crown Sandwich Maker (1Unit)
MRP ₹ **1,895.00***

GET



Optima Electric Kettle - 1.7 Litres (1Unit)
MRP ₹ **1,595.00*** **FREE**

Available on Flipkart amazon

Follow us on: eleenova.official Eleenova @Eleenova For more details call Customer Care No.: 8951648999 or visit: https://eleenova.com | E-mail us at customercare@eleenova.com

Scan for Digital Catalogue.

AVAILABLE AT Bengaluru | **Rajaji Nagar:** R S Mart Ph: 7483058644, 6363602929, Mahalakshmi Metal House Ph: 23355994, Dhanlakshmi K W Ph: 6366574574, N.M.K Traders Ph: 23152319, Sri Shiva Entp Ph: 9900002044, Vardhaman International Ph: 41228155, Jayalakshmi K W Ph: 9844755146. **Jayanagar:** Sarathy Ph: 9742191852, Vishaal's Ph: 9964197120, Kitchen Mart Ph: 9986937662, Anjana Super Store Ph: 9886515253, Arvinda Ph: 9448988092, M.K Ahmed Bazar Ph: 9108537006. **S R Nagar:** Uttam Agencies Ph: 9900323616. **Srirampura:** Arihant Enterprises Ph:7899633338. **Bank Colony:** Vardhaman Ind Ph: 9538444680, Vikas Entp Ph: 8660403591. **Banshankari:** Chamundi Industries Ph: 26712633, Patel Kitchen app Ph:9972522691, Patel Agencies Ph:9079061706. **Begur:** Maruthi HA Ph: 9448583884. **Bilekahalli:** Shree Pooja HA Ph:9036919084. **Baglur:** Elite H A Ph: 9591127839. **Gayathri Nagar:** J K Steel Center Ph: 9844111350, 23320853. **DLF:** New Ambika HA Ph: 9740953176. **DVG Road:** United Metal Emp Ph:6360243903. **Malleshwaram:** Hanuman Home Appl Ph: 9886021084, Deviprasad HA Ph: 23343411, Bright Novelty Ph: 9886708871. **Avenue Rd:** Puckraj & Son's Ph: 9448771841, B M Agencies Ph: 9886617028. **Basveshwar Ngr:** Mahaveer Home App Ph: 9845288857, Aadinath K G Ph: 8553583206, Modern Colln Ph: 8095758444, Maharaja Steel Center Ph: 9448666177. **BVK Iyenger Rd:** Jain Wire Emporium Ph: 41249274, Crockery world Ph: 22385567. **Babusapalya:** Maa Ambika St House Ph:9449658517, Karnataka H A Ph:8058625463. **Srinagar:** Vidya Entp Ph: 9449988650. **Giri Nagar:** M K Kitchen Gallery Ph: 9945979708, Balaji H A Ph: 9035731706. **Ganga Nagar:** Patel Ind Ph: 8050899296, Salem Ind Ph:9880795414. **ISRO Layout:** Bhumi K W Ph:9916830850. **J P Nagar:** Surya K W Ph: 9035511832. **Kamanahlli:** H M Traders Ph:9482941757, Ramdev St Center Ph: 7259575732, Poornima Metals Ph: 8970049577. **Kathriguppe:** M K Metal Mart Ph: 9035779199. **Kasturi Nagar:** Ramdev H A Ph:9886602521, Maruthi K W Ph: 8660038354. **Hanuamnth Nagar:** Kamal HA Ph: 9886671219, Home Studio Ph: 9945933111. **Hormavu:** Mamtha H A Ph: 8880050050. **Hosakerehalli:** Varda Glass & Crockeries Ph:9980541111. **Pennya:** Sanjay Electronics Ph: 8660327249, Sri Maruthi Stores Ph: 9731111516. **T Dasarahalli:** R K Home Appl: 9845675729. **RR Nagar:** Pavan K W Ph: 9739207043, Milan K W Ph:9980324134, 9632811218. **Thanisandra:** Venkateshwar Ele & Appl Ph:7760841698. **Chamrajpet:** Vadiraj Stores Ph: 9844018819. **Chandra layout:** Pavan K W Ph: 8618028319, Chamunda K W Ph: 9886679900, Raj Guru K W Ph: 8660611187. **Konekunte Cross:** Mahalakshmi Ele and Electronics Ph: 8123203588. **Kengeri:** Sri Sai Traders Ph: 9740888314. **Kaggadaspura:** New Bheru HA Ph: 9448680738, Sri Bhagwathi HA Ph: 9590575427, Bajrang H A Ph: 9449526463, Ramdev H A Ph: 9035175860, Maa Ambe H A Ph:8884198322. **Kothnur:** Amber Mega Store Ph:8590267088. **Hessargatha:** Sri Shiva Enter Ph: 99000002044, Vinayaka Traders Ph: 9902084567. **HMT Layout:** Sri Kalleshwar Traders Ph: 8892102737. **HRBR Layout:** Bhavani H A Ph:9845916164, B G chimney Ph: 7022973015. **Magadi Road:** Hema EnterprisePh: 9964010739, Parisharam Entp Ph: 7026387251, Kundan Electronics Ph: 9448040338, S N Home World Ph: 9880096355, Rathana General Store Ph: 9972866857. **Mathikere:** Maharaja Agencies Ph: 9448306520, M Bhawarlal Inc Ph: 9844223316, Mathaji H A Ph; 7019185987, Patel Metal Ind Ph: 9986894923. **Nagarthpet:** Marudhar HA Ph: 9945444454, Bhagathi Metals Ph: 42047730, Mahadev Distributors Ph: 41514943, Million Marketing Ph:9844038038, Ramdev Metals Ph: 41323295, Shubham Home App Ph: 9448674150, Bhagavathi Spare Parts Ph: 9513992993, Rajendra Appl Ph:9036848312, Mahaipal Entp ph:9448688807, Vardhaman International Ph: 41228155, **New Tippasandra:** Pawar Home Appl Ph: 9980517021, Milan Home App Ph: 9916696153. **Mahadevpura:** B G chimney Ph: 7022973012. **Mallathalli:** Radhe Krishan Entp Ph:9739198531. **Ulsoor:** Aishwaraya Pranam home Needs Ph: 9902788429. **Udaya Nagar:** Mother Ind H A Ph: 9036189765. **Venkatapura:** Pooja Kitchen Gallery Ph: 8904858089. **Halsuru Gate:** Jainam Marketing Ph: 9036783828. **T C Palya:** Karnataka H A Ph: 6363064024, Ideal Super mart Ph: 9740718531. **V V Puram:** Vardhaman International Ph: 41228155, Million Marketing Ph: 9113637791. **Vidyarnpura:** Prakash Kitchen world Ph:7019993167. **Vijaynagar:** Mahendra's Ph: 9986102112, Vijaylakshmi K W Ph: 9845022284, Maruthi H A Ph: 9844086981. **Yelhanka:** Mutha Electricals & Home Appl Ph: 22971920, Sai Kitchen World Ph: 9632811797.

*Terms and conditons apply

AUTHORISED DISTRIBUTOR: Bengaluru: Rathana's Sales: - 9916694949, 9980090566, **Sri Shiva Enterprises:** 9900002044. For Trade enquiries Contact: Santosh C-8884416915, Pradeep DV-9620473111
Registered Office: Teknoedge Home Appliances: No: 1821/A, 24th Main Road, HSR Layout 2nd Sector, Bengaluru, Karnataka, India - 560102.

**The prices stated above represent the MRP of the product (inclusive of taxes). Discounts are offered on MRP only. No two offers can be clubbed together. Offers on select model until stocks last. Offers valid across select stores only. Offers valid in the Karnataka state only. Eleenova logo is the registered trademark of Teknoedge home appliances. For MRP and other detailed terms and conditions, visit your nearest Eleenova's dealer outlets.*

ಖಾಸಗಿ ವಿಡಿಯೊ ಹರಿಬಿಡುವ ಬೆದರಿಕೆ: ಮಹಿಳೆ ಸೇರಿ ಮೂವರ ಸೆರೆ

ಪ್ರಾಧ್ಯಾಪಕನಿಗೆ ₹2.25 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಿಡಿಯೊ ಹಾಗೂ ಫೋಟೊವನ್ನು ಜಾಲತಾಣದಲ್ಲಿ ಹರಿಯ ಬಿಡುವುದಾಗಿ ಬೆದರಿಸಿ ನಗರದ ಪ್ರಾಧ್ಯಾಪಕರೊಬ್ಬರಿಂದ ₹2.25 ಕೋಟಿ ನಗದು ಸುಲಿಗೆ ಮಾಡಿದ್ದ ಆರೋಪದಡಿ ಮಹಿಳೆ ಸೇರಿದಂತೆ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

46 ವರ್ಷದ ಸಂತ್ರಸ್ತ ವ್ಯಕ್ತಿ ನೀಡಿದ ದೂರಿನ ಆಧಾರದಲ್ಲಿ ಆರೋಪಿಗಳಾದ ಆರ್‌.ಟಿ. ನಗರದ ತಬಸ್ಸುಮ್ ಬೇಗಂ (38), ಅವರ ಸಹೋದರ ಅಜೀಂ ಉದ್ದೀನ್ (41), ಅಭಿಷೇಕ್ ಅಲಿಯಾಸ್ ಪೊಲೀಸ್ ಅಭಿಷೇಕ್ ಎಂಬುವವರನ್ನು ಬಂಧಿಸಲಾಗಿದೆ.

ಆರೋಪಿಗಳ ವಿರುದ್ಧ ಸುಲಿಗೆ, ವಂಚನೆ ಹಾಗೂ ಜೀವ ಬೆದರಿಕೆ ಆರೋಪಗಳಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ. ಮತ್ತೊಬ್ಬ ಆರೋಪಿ ಆನಂದ್ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರಿನ ವಿವರ: ‘2018ರಲ್ಲಿ ಆರ್‌.ಟಿ. ನಗರದ ಗ್ರೂಪ್ ಎಕ್ಸ್ ಫಿಟ್ನೆಸ್ ಸೆಂಟರ್‌ಗೆ ದೈಹಿಕ ಕಸರತ್ತು ಮಾಡಲು


ಅಜೀಂ ಉದ್ದೀನ್


ಅಭಿಷೇಕ್


ತಬ್ಸುಮ್

ತೆರಳುತ್ತಿದ್ದ ವೇಳೆ ಮಾಲೀಕ ಅಜೀಂ ಉದ್ದೀನ್‌ನ ಸಹೋದರಿ ತಬಸ್ಸುಮ್ ಬೇಗಂ ಪರಿಚಯವಾಗಿತ್ತು. ಇಬ್ಬರ ನಡುವೆ ಆತ್ಮೀಯತೆ ಬೆಳೆದು ಸಂಬಂಧ ಏರ್ಪಟ್ಟಿತ್ತು. ತನಗೆ ಮದುವೆ ಆಗಿಲ್ಲ ಎಂದು ಹೇಳಿದ್ದ ತಬುಸ್ಸುಂ, ಮಗುವೊಂದನ್ನು ದತ್ತು ಪಡೆದಿರುವುದಾಗಿ ಹೇಳಿದ್ದಳು. ಮಗು ಪಾಲನೆ ಹಾಗೂ ಉನ್ನತ ಶಿಕ್ಷಣದ ಹೆಸರಿನಲ್ಲಿ ನನ್ನಿಂದ ಹಣ ಪಡೆದುಕೊಂಡಿದ್ದಳು’ ಎಂದು ಸಂತ್ರಸ್ತ ಪ್ರಾಧ್ಯಾಪಕ ದೂರಿನಲ್ಲಿ ತಿಳಿಸಿದ್ದಾರೆ.

‘ಕೆಲ ದಿನಗಳ ಬಳಿಕ ತಬಸ್ಸುಮ್ ವಿವಾಹಿತೆ ಎಂಬ ವಿಚಾರ ಗೊತ್ತಾಯಿತು. ಈ ವಿಚಾರ ಪ್ರಶ್ನಿಸಿದಾಗ ಆಕೆಯ ಜತೆಗಿದ್ದ ಖಾಸಗಿ ಫೋಟೊ ಹಾಗೂ

ಅಪರಾಧ ಸುದ್ದಿ

ವಿಡಿಯೊವನ್ನು ನನ್ನ ಮೊಬೈಲ್‌ಗೆ ಕಳುಹಿಸಿ, ಅವುಗಳನ್ನು ನನ್ನ ಕುಟುಂಬಸ್ಥರಿಗೆ ಕಳಿಸುವುದಾಗಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡುವುದಾಗಿ ಬೆದರಿಕೆ ಹಾಕಿದಳು. ತಬಸ್ಸುಮ್, ಆಕೆಯ ಸಹೋದರ ಅಜೀಂ ಉದ್ದೀನ್ ಮತ್ತು ಪೊಲೀಸ್ ಮತ್ತು ವಕೀಲರೆಂದು ಪರಿಚಯಿಸಿಕೊಂಡು ಕರೆ ಮಾಡುತ್ತಿದ್ದ ಆನಂದ್ ಹಾಗೂ ಅಭಿಷೇಕ್ ಸೇರಿಕೊಂಡು ಹಂತ ಹಂತವಾಗಿ ಒಟ್ಟು ₹2.25 ಕೋಟಿ ವಸೂಲಿ ಮಾಡಿದ್ದಾರೆ. ಆರೋಪಿಗಳಿಗೆ ಹಣ ನೀಡಲು ಕೋಟ್ಯಂತರ ರೂಪಾಯಿ ಸಾಲ ಮಾಡಿದ್ದು, ಆರ್ಥಿಕ ಸಂಕಷ್ಟದಲ್ಲಿದ್ದೇನೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ಆರು ದಿನ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಆರಂಭದಲ್ಲಿ ಉದ್ಯಮ ಆರಂಭಿಸಲು ಪ್ರಾಧ್ಯಾಪಕನಿಂದ ಹಣ ಪಡೆದುಕೊಳ್ಳಲಾಗಿದೆ. ನಂತರ ಖಾಸಗಿ ವಿಡಿಯೊ, ಫೋಟೊ ಕಳುಹಿಸಿ, ಹನಿಟ್ರ್ಯಾಪ್ ಮಾಡಿ, ಹಣ ವಸೂಲು ಮಾಡಲಾಗಿದೆ. ₹3 ಕೋಟಿಗೂ ಅಧಿಕ ಸುಲಿಗೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಆರೋಪಿಗಳು ಇತರರಿಗೂ ವಂಚನೆ ಮಾಡಿದ್ದಾರೆಯೇ ಎಂಬುದರ ಬಗ್ಗೆಯೂ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ

ಲಂಚ: ಬಿಬಿಎಂಪಿ ವೈದ್ಯಾಧಿಕಾರಿ ಬಂಧನ

ಬೆಂಗಳೂರು: ಬಿಲ್ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ₹30 ಸಾವಿರ ಲಂಚ ಪಡೆಯುತ್ತಿದ್ದಾಗ ಬಿಬಿಎಂಪಿಯ ವೈದ್ಯಾಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಬಿಬಿಎಂಪಿಯ ಗೋವಿಂದರಾಜನಗರ ವಾರ್ಡ್ ವ್ಯಾಪ್ತಿಯಲ್ಲಿ ಫಾಗಿಂಗ್ ಕೆಲಸ ಮಾಡಿದ್ದ ಗುತ್ತಿಗೆದಾರ ಬಾಲಾಜಿ ಅವರಿಗೆ ಬಿಲ್ ಪಾವತಿ ಬಾಕಿ ಇತ್ತು. ಬಿಲ್ ಪಾವತಿಸಲು ವಾರ್ಡ್‌ನ ವೈದ್ಯಾಧಿಕಾರಿ ರಾಜೇಂದ್ರ (59) ಅವರು ₹30 ಸಾವಿರ ಲಂಚ ಕೇಳಿದ್ದರು. ಈ ಸಂಬಂಧ ಬಾಲಾಜಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.



ತನಿಖಾಧಿಕಾರಿ ಸೂಚಿಸಿದ್ದಂತೆ ಬಾಲಾಜಿ, ಶುಕ್ರವಾರ ರಾಜೇಂದ್ರ ಅವರಿಗೆ ಕಚೇರಿ ಬಳಿಯಲ್ಲೇ ಲಂಚದ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರ ತಂಡವು, ವೈದ್ಯಾಧಿಕಾರಿಯನ್ನು ಲಂಚದ ಹಣದ ಸಮೇತ ಬಂಧಿಸಿತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಜಿಲ್ಲಾ ಘಟಕ–2ರ ಎಸ್‌ಪಿ ಕೋನ ವಂಶಿಕೃಷ್ಣ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಸತೀಶ್ ಎಂ.ಎಚ್. ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ವಿಜಯ್‌ಕೃಷ್ಣ, ಬಾಲಾಜಿ ಬಾಬು, ನಾರಾಯಣ ಎ. ಸ್ವಾಮಿ, ಶಂರಪ್ಪ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ತ್ರಿವಳಿ ತಲಾಖ್ ಆರೋಪ: ಪತಿ ಸೆರೆ

ಮಂಗಳೂರು: ಪತ್ನಿಗೆ ಮಾನಸಿಕ, ದೈಹಿಕ ಕಿರುಕುಳದ ಜತೆಗೆ ತ್ರಿವಳಿ ತಲಾಖ್ ನೀಡಿರುವ ಆರೋಪದ ಮೇಲೆ ಪತಿಯನ್ನು ಇಲ್ಲಿನ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉಳ್ಳಾಲ ಸಮ್ಮರ್ ಸ್ಯಾಂಡ್ ಸಮೀಪದ ನಿವಾಸಿ ಮೊಹಮ್ಮದ್ ದಿಲ್ಫಾಜ್ ಬಂಧಿತ ಆರೋಪಿ. ಆತನ ಪತ್ನಿ ಉಳ್ಳಾಲ ಮಾಸ್ತಿಕಟ್ಟೆಯ ಹೀನಾ ಫಾತಿಮಾ ಗುರುವಾರ ನೀಡಿದ ದೂರಿನ ಮೇಲೆ ಮುಸ್ಲಿಂ ಮಹಿಳೆಯರ ವಿವಾಹ ಹಕ್ಕುಗಳ ಸಂರಕ್ಷಣೆ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

‘2019ರಲ್ಲಿ ನಮ್ಮ ಮದುವೆ ಆಗಿದ್ದು, ಆಗ ನನ್ನ ತಂದೆ 22 ಪವನ್ ಚಿನ್ನ, ₹50 ಸಾವಿರ ನಗದು ನೀಡಿದ್ದರು. ಕೈತುಂಬಾ ವರದಕ್ಷಿಣೆ ನೀಡಿಲ್ಲವೆಂದು ದಿಲ್ಫಾಜ್ ತಂದೆ ಉಮರಬ್ಬ ಕೂಡ ಆಗಾಗ ಮಾನಸಿಕ ಕಿರುಕುಳ ನೀಡುತ್ತಿದ್ದರು’ ಎಂದು ಹೀನಾ ಇಬ್ಬರ ವಿರುದ್ಧವೂ ದೂರು ನೀಡಿದ್ದಾರೆ.



318 ಕೆ.ಜಿ ಗಾಂಜಾ ಪೂರೈಕೆ: ಮೂವರ ಬಂಧನ

ಹೊಸ ವರ್ಷಾಚರಣೆಗಾಗಿ ರಾಜಧಾನಿಗೆ ಸರಬರಾಜು: ₹3.25 ಕೋಟಿ ಮೌಲ್ಯದ ಗಾಂಜಾ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆಗಾಗಿ ನಗರಕ್ಕೆ ಗಾಂಜಾ ಸರಬರಾಜು ಮಾಡುತ್ತಿದ್ದ ದಂಪತಿ ಸೇರಿ ಮೂವರನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿ, ₹3.25 ಕೋಟಿ ಮೌಲ್ಯದ 318 ಕೆ.ಜಿ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಕೇರಳದ ಅಚ್ಯುತ್ ಸಂತೋಷ್, ನಗರದ ಜಮೀರ್ ಖಾನ್ ಹಾಗೂ ಆತನ ಪತ್ನಿ ರೇಷ್ಮಾ ಎಂಬುವವರನ್ನು ಬಂಧಿಸಿ ಇನ್ನೊವಾ ಕಾರು, ಮೂರು ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ.

‘ಒಡಿಶಾ ಹಾಗೂ ಆಂಧ್ರ ಪ್ರದೇಶದ ಗಡಿ ಭಾಗಗಳಿಂದ ಗಾಂಜಾ ಖರೀದಿಸಿ ಕಾರಿನ ಮೂಲಕ ನಗರಕ್ಕೆ ತರಲಾಗುತ್ತಿತ್ತು. ಪ್ರಮುಖ ಆರೋಪಿಯಾಗಿರುವ ಅಚ್ಯುತ್ ವಿರುದ್ಧ ಕೇರಳದ ವಿವಿಧ ಠಾಣೆಗಳಲ್ಲಿ ಮಾದಕ ವಸ್ತು ಸರಬರಾಜು, ದರೋಡೆ, ಕೊಲೆ ಯತ್ನ ಮಾತ್ರವಲ್ಲದೇ ಮೂರು ಬಾರಿ ಗೂಂಡಾ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿದ್ದವು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.



ಪೊಲೀಸರು ವಶಪಡಿಸಿಕೊಂಡಿರುವ ಗಾಂಜಾ

‘ಕೆಲ ದಿನಗಳ ಹಿಂದೆ ನಗರಕ್ಕೆ ಬಂದಿದ್ದ ಅಚ್ಯುತ್, ಸ್ಥಳೀಯ ಕಾರು ಚಾಲಕನಾಗಿದ್ದ ಜಮೀರ್‌ನನ್ನು ಪರಿಚಯಿಸಿಕೊಂಡಿದ್ದ. ನಂತರ ಜಮೀರ್ ಹಾಗೂ ಆತನ ಪತ್ನಿಯನ್ನು ಪುಸಲಾಯಿಸಿ ಗಾಂಜಾ ಮಾರಾಟದ ಕೃತ್ಯಕ್ಕೆ ಬಳಸಿಕೊಂಡಿದ್ದ. ಮೂವರೂ ಆಂಧ್ರಪ್ರದೇಶ, ಒಡಿಶಾ ಗಡಿ ಭಾಗಗಳಿಗೆ ತೆರಳಿ ಗಾಂಜಾ ಖರೀದಿಸಿ ತಂದಿದ್ದರು’ ಎಂದು ಹೇಳಿದರು.

ಇಬ್ಬರ ಬಂಧನ: ಮತ್ತೊಂದು ಪ್ರಕರಣದಲ್ಲಿ ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬೆಟ್ಟದಾಸನಪುರದಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿ, 2 ಕೆ.ಜಿ. 560 ಗ್ರಾಂ. ಗಾಂಜಾ, ಒಂದು ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ನಾಗರಿಕರಿಗೆ ಕಡಿಮೆ ಬೆಲೆಗೆ ಗಾಂಜಾ ಮಾರಾಟ ಮಾಡುತ್ತಿರುವುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

₹3 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ

ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್‌ಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರು ವಿದೇಶಿ ಡ್ರಗ್ಸ್ ಪೆಡ್ಲರ್ ಗಳನ್ನು ಸಿಸಿಬಿಯ ಮಾದಕದ್ರವ್ಯ ನಿಗ್ರಹ ದಳದ ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಮಿಖಾಯಿಲ್ ಐಗ್ಬೆರೆ (35) ಹಾಗೂ ಅಗ್ವು ಇಜೆಕೈಲ್ ಒಸಿತಾ (32) ಎಂಬುವರನ್ನು ಬಂಧಿಸಿ, ₹3 ಕೋಟಿ ಮೌಲ್ಯದ ವಿವಿಧ ಮಾದರಿಯ ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಐದು ವರ್ಷಗಳ ಹಿಂದೆ ವೈದ್ಯಕೀಯ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿಗಳು, ಸೋಲದೇವನಹಳ್ಳಿಯ ಮನೆಯೊಂದರಲ್ಲಿ ವಾಸವಿದ್ದರು. ಮುಂಬೈನಿಂದ ನಗರಕ್ಕೆ ಮಾದಕ ವಸ್ತು ತರಿಸಿಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಿರುವ ಕುರಿತು


ವಶಪಡಿಸಿಕೊಂಡಿರುವ ಮಾದಕ ವಸ್ತು

ಮಾಹಿತಿ ಪಡೆದ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದರು. ದಾಳಿ ವೇಳೆ, 1 ಕೆ.ಜಿ 520 ಗ್ರಾಂ. ಎಂಡಿಎಂಎ ಕ್ರಿಸ್ಟಲ್ಸ್, 202 ಗ್ರಾಂ. ಕೊಕೇನ್, 12 ಗ್ರಾಂ. ಎಂಡಿಎಂಎ ಎಕ್ಸ್‌ಟೆಸಿ ಮಾತ್ರೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃತ್ಯಕ್ಕೆ ಬಳಸಿದ್ದ ಎರಡು ಮೊಬೈಲ್ ಫೋನ್, ಒಂದು ಎಲೆಕ್ಟ್ರಾನಿಕ್ ತೂಕದ ಯಂತ್ರ ವಶ ಪಡಿಸಿಕೊಳ್ಳಲಾಗಿದೆ. ಮುಂಬೈ, ದೆಹಲಿಯಲ್ಲಿ ನೆಲೆಸಿರುವ


ಮಿಖಾಯಿಲ್ ಐಗ್ಬೆರೆ


ಅಗ್ವು ಇಜೆಕೈಲ್ ಒಸಿತಾ

ಆಫ್ರಿಕಾ ಮೂಲದ ಪರಿಚಿತರಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿ ಮಾಡಿ ಒಂದು ಗ್ರಾಂ.ಗೆ ₹12 ಸಾವಿರದಿಂದ ₹15 ಸಾವಿರದವರೆಗೆ ಕಾಲೇಜು ವಿದ್ಯಾರ್ಥಿಗಳು, ಐ.ಟಿ.– ಬಿ.ಟಿ. ಉದ್ಯೋಗಿಗಳಿಗೆ ಮಾರಾಟ ಮಾಡಿ ಹಣ ಸಂಪಾದನೆಯಲ್ಲಿ ತೊಡಗಿರುವುದು ಗೊತ್ತಾಗಿದೆ. ಆರೋಪಿಗಳ ವಿರುದ್ಧ ಈಗಾಗಲೇ ಮುಂಬೈ ಮತ್ತು ಹೈದರಾಬಾದ್ ನಗರಗಳಲ್ಲಿ ಎನ್‌ಡಿಪಿಎಸ್ ಪ್ರಕರಣ ದಾಖಲಾಗಿದ್ದು, ಜಾಮೀನಿನ ಮೇಲೆ ಹೊರ ಬಂದಿದ್ದರು. ಈಗ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ ಎಂದರು.

ಕೋಚಿಂಗ್ ಸೆಂಟರ್ ಮಾಲೀಕ ಶರತ್ ಆತ್ಮಹತ್ಯೆ

ದಾವಣಗೆರೆ: ನಗರದ ಎಸ್‌.ಎಸ್. ಬಡಾವಣೆಯ ನಿವಾಸಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ‘ಕಾಪರ್ ಏಜ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್’ನ ಮಾಲೀಕ ಶರತ್ ಜಿ.ಎನ್. (35) ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಶರತ್ ಅವರು ಹಲವು ಬಾರಿ ಐಎಎಸ್, ಕೆಎಎಸ್ ಪರೀಕ್ಷೆ ಬರೆದಿದ್ದರು. ಆ ಬಳಿಕ ಸ್ವಂತ ತರಬೇತಿ ಕೇಂದ್ರ ಆರಂಭಿಸಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಮೂಲಕ ಹೆಸರು ಗಳಿಸಿದ್ದರು. ವಿವಿಧ ಜಿಲ್ಲೆಗಳಲ್ಲಿ ಇವರ ಸಂಸ್ಥೆಯ ಶಾಖೆಗಳಿವೆ.

ಅವಿವಾಹಿತರಾಗಿದ್ದ ಶರತ್, ತಂದೆ – ತಾಯಿ ಕಾರ್ಯಕ್ರಮಕ್ಕೆಂದು ಹೊರಗಡೆ ಹೋಗಿದ್ದಾಗ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಐಎಎಸ್, ಐಪಿಎಸ್‌ನಲ್ಲಿ ನಿರೀಕ್ಷಿತ ಯಶಸ್ಸು ದೊರೆಯದ ಬಗ್ಗೆ ಕೊರಗಿತ್ತು. ಅದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪಾಲಕರು ತಿಳಿಸಿದ್ದಾರೆ. ಮನೆಯಲ್ಲಿ ಡೆತ್‌ನೋಟ್ ಪತ್ತೆಯಾಗಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಯಿತು.

ಹೊತ್ತಿ ಉರಿದ ಎಲೆಕ್ಟ್ರಿಕ್ ದ್ವಿಚಕ್ರ ವಾಹನ

ಮಾಗಡಿ: ತಾಲ್ಲೂಕಿನ ಕಲ್ಯಾ ಗ್ರಾಮದಲ್ಲಿ ಶುಕ್ರವಾರ ಅಂಗಡಿ ಮುಂದೆ ನಿಲ್ಲಿಸಿದ್ದ ಎಲೆಕ್ಟ್ರಿಕ್ ದ್ವಿಚಕ್ರ ವಾಹನಕ್ಕೆ ಏಕಾಏಕಿ ಬೆಂಕಿ ತಗುಲಿದೆ. ವಾಹನ ಬಹುತೇಕ ಸುಟ್ಟು ಕರಕಲಾಗಿದೆ. ಮಾಗಡಿಯಲ್ಲಿ ದ್ವಿಚಕ್ರ ವಾಹನಕ್ಕೆ ಬೆಂಕಿ ಹೊತ್ತಿಕೊಂಡ ಎರಡನೇ ಪ್ರಕರಣವಿದು.

ಈ ಎಲೆಕ್ಟ್ರಿಕ್ ವಾಹನ ಜಯಣ್ಣ ಎಂಬುವರಿಗೆ ಸೇರಿದ್ದಾಗಿದೆ. ಈ ಕುರಿತು ಪ್ರತಿಕ್ರಿಯಿಸಿದ ಅವರು, ‘ಒಂದೂವರೆ ವರ್ಷದ ಹಿಂದೆ ಬೆಂಗಳೂರಿನಲ್ಲಿ ವಾಹನ ಖರೀದಿಸಿದ್ದೆ. ಶುಕ್ರವಾರ ಮಧ್ಯಾಹ್ನ ಧ್ವನಿ ವರ್ಧಕ ಅಂಗಡಿ ಮುಂದೆ ನಿಲ್ಲಿಸಿದ್ದಾಗ ಬೆಂಕಿ ಹೊತ್ತಿಕೊಂಡಿದೆ. ದ್ವಿಚಕ್ರ ವಾಹನ ಶೇ75ರಷ್ಟು ಸುಟ್ಟು ಹೋಗಿದೆ’ ಎಂದರು. ‘₹90 ಸಾವಿರ ಹಣ ಕೊಟ್ಟು ಖರೀದಿಸಿದ ವಾಹನ ಸುಟ್ಟು ಕರಕಲಾಗಿದೆ. ಕಂಪನಿಯವರೇ ಈ ವಾಹನ ದುರಸ್ತಿ ಮಾಡಿಕೊಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಎಲೆಕ್ಟ್ರಿಕ್ ವಾಹನ ಬಳಸುವುದಿಲ್ಲ’ ಎಂದು ಹೇಳಿದರು.

ಕೌಟುಂಬಿಕ ಕಲಹ: ಕೊಲೆ ಬಳಿಕ ತಾನೂ ಆತ್ಮಹತ್ಯೆಗೆ ಯತ್ನ

ಕತ್ತು ಹಿಸುಕಿ ಮಕ್ಕಳ ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತಿದ್ದ ಮಹಿಳೆಯೊಬ್ಬರು ತನ್ನಿಬ್ಬರು ಮಕ್ಕಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದಬಳಿಕ ತಾನೂ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಸುಬ್ರಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಶುಭಂ ಸಾಹು (7) ಹಾಗೂ ಶಿಯಾ ಸಾಹು (3) ಕೊಲೆಯಾದ ಮಕ್ಕಳು. ಆತ್ಮಹತ್ಯೆಗೆ ಯತ್ನಿಸಿದ್ದ ತಾಯಿ ಮಮತಾ ಸಾಹು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಎಂಟು ತಿಂಗಳಿನಿಂದ ಜಾರ್ಖಂಡ್‌ನ ಮಮತಾ ಸಾಹು ಮತ್ತು ಸುನಿಲ್ ಸಾಹು ದಂಪತಿ ಸುಬ್ರಮಣ್ಯಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಆಟೊ ಚಾಲಕನಾಗಿರುವ ಸುನಿಲ್, ಬೇರೆ ಯುವತಿ ಜತೆ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದರು. ಈ ವಿಚಾರಕ್ಕೆ



ದಂಪತಿ ಮಧ್ಯೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಗುರುವಾರ ಸಂಜೆಯೂ ಸಹ ಗಲಾಟೆ ನಡೆದಿತ್ತು. ಮಮತಾ ಸ್ವಗ್ರಾಮಕ್ಕೆ ತೆರಳಲು ಸಿದ್ಧವಾಗಿದ್ದರು. ಪತಿ ಕೆಲಸಕ್ಕೆ ತೆರಳಿದ್ದ ವೇಳೆ ತನ್ನ ಮಕ್ಕಳಿಬ್ಬರನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಘಟನೆ ಬಳಿಕ ಸೆಲ್ಫಿ ಫೋಟೊ ಜತೆಗೆ ‘ತಪ್ಪಾಗಿದೆ, ನನ್ನನ್ನು ಕ್ಷಮಿಸು’ ಎಂಬ ಸಂದೇಶವನ್ನು ಮಮತಾ ಅವರು ಪತಿ ಮೊಬೈಲ್‌ಗೆ ಕಳುಹಿಸಿದ್ದರು. ನಂತರ ಚಾಕು ತೆಗೆದುಕೊಂಡು ತಾನೂ ಸಹ ಕತ್ತು ಕೊಯ್ದುಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ಸಂದೇಶ ನೋಡಿ ಪತಿ ಮನೆಗೆ ಬರುವಷ್ಟರಲ್ಲಿ ಮಕ್ಕಳಿಬ್ಬರೂ ಮೃತಪಟ್ಟಿದ್ದರು. ನಂತರ ಆತ್ಮಹತ್ಯೆಗೆ ಯತ್ನಿಸಿದ್ದ ಮಮತಾಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದು ಹೇಳಿದ್ದಾರೆ.

‘ಪತಿಯಿಂದಲೇ ಮಕ್ಕಳ ಕೊಲೆ ನಡೆದಿದೆ ಎಂದು ಮಮತಾ ಆರೋಪಿಸಿದ್ದಾಳೆ. ಘಟನೆ ನಡೆದ ಸಂದರ್ಭದಲ್ಲಿ ಆಕೆಯ ಪತಿ ಮನೆಯಲ್ಲಿ ಇರಲಿಲ್ಲ ಎಂಬ ಮಾಹಿತಿ ಲಭಿಸಿದೆ. ಮೃತ ಮಕ್ಕಳ ತಂದೆ ನೀಡಿರುವ ದೂರಿನ ಅನ್ವಯ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ದಂಪತಿಯ ಆರೋಪ, ಪ್ರತ್ಯಾರೋಪಗಳ ಕುರಿತೂ ತನಿಖೆ ನಡೆಸಲಾಗುತ್ತಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದ್ದಾರೆ.

ಕಾಲೇಜು ವಿದ್ಯಾರ್ಥಿ ಆತ್ಮಹತ್ಯೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಕಾಲೇಜೊಂದರ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರಿನ ರವಿ ಕುಮಾರ್ ಅವರ ಪುತ್ರ, ಅಂತಿಮ ವರ್ಷದ ಬಿಬಿಎಂನಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡವ ಎಂದು ಪೊಲೀಸರು ತಿಳಿಸಿದ್ದಾರೆ.

ಹಾಸ್ಟೆಲ್ ಕೊಠಡಿಯ ಕಿಟಕಿಯ ಸರಳಿಗೆ ಬೆಡ್‌ಶೀಟ್ ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ‘ನನ್ನ ಸಾವಿಗೆ ನಾನೇ ಕಾರಣ’ ಎಂದು ಡೆತ್ ನೋಟ್ ಬರೆದಿಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಆತನ ಮೊಬೈಲನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಶುಕ್ರವಾರ ಶವವನ್ನು ಹೆತ್ತವರಿಗೆ ಹಸ್ತಾಂತರಿಸಲಾಗಿದೆ. ಮೂಡುಬಿದಿರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ತಂದೆಗೆ ಮೂತ್ರಪಿಂಡ ದಾನ ಮಾಡಿದ ಪುತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದ 61 ವರ್ಷದ ವ್ಯಕ್ತಿಗೆ ಮಗನೇ ಒಂದು ಮೂತ್ರಪಿಂಡವನ್ನು ದಾನ ಮಾಡಿದ್ದು, ಇಲ್ಲಿನ ಫೋರ್ಟಿಸ್ ಆಸ್ಪತ್ರೆಯ ವೈದ್ಯರು ರೋಬೋಟ್ ತಂತ್ರಜ್ಞಾನದ ನೆರವಿನಿಂದ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಈ ಪ್ರಕರಣದ ಕುರಿತು ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ರೋಬೋಟಿಕ್ ಶಸ್ತ್ರಚಿಕಿತ್ಸೆ ವಿಭಾಗದ ನಿರ್ದೇಶಕ ಡಾ.ಮೋಹನ್ ಕೇಶವಮೂರ್ತಿ, 'ಆಸ್ಪತ್ರೆಗೆ ಬಂದ ವ್ಯಕ್ತಿ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದು, 6-7 ತಿಂಗಳಿಂದ ಕೊನೆಯ ಹಂತದ ಮೂತ್ರಪಿಂಡ ಕಾಯಿಲೆಗೆ ಒಳಗಾಗಿದ್ದರು. ಇವರು 130 ಕೆ.ಜಿ. ತೂಕ ಹೊಂದಿದ್ದರಿಂದ ಸ್ಥೂಲಕಾಯ ಸಮಸ್ಯೆಯಿಂದಲೂ ಬಳಲುತ್ತಿದ್ದರು. ಮೂತ್ರಪಿಂಡದ ಕಾರ್ಯನಿರ್ವಹಣೆಗೆ ನಿಯಮಿತವಾಗಿ ಹಿಮೋಡಯಾಲಿಸಿಸ್ ಅವಲಂಬಿಸಿದ್ದರು. ಅಧಿಕ ರಕ್ತದೊತ್ತಡ ಇವರ ಆರೋಗ್ಯ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತ್ತು' ಎಂದು ತಿಳಿಸಿದರು.

'ಸ್ಥೂಲಕಾಯದ ಕಾರಣ ಮೂತ್ರಪಿಂಡ ಕಸಿ ಅಪಾಯವೆಂದು ಹಲವು ಆಸ್ಪತ್ರೆಗಳು ನಿರಾಕರಿಸಿದ್ದವು. ಫೋರ್ಟಿಸ್ ಆಸ್ಪತ್ರೆಗೆ ಬಂದ ಬಳಿಕ ವೈದ್ಯಕೀಯ ಮೌಲ್ಯಮಾಪನ ನಡೆಸಿ, ರೋಬೋಟ್ ತಂತ್ರಜ್ಞಾನದ ನೆರವಿನಿಂದ ಮೂತ್ರಪಿಂಡ ಕಸಿ ಸಾಧ್ಯವೆಂದು ನಿರ್ಧರಿಸಲಾಯಿತು. ಅವರ 23 ವರ್ಷದ ಮಗ ತನ್ನ ಮೂತ್ರಪಿಂಡವನ್ನೇ ದಾನ ಮಾಡಲು ಮುಂದಾದರು. ತಂದೆ ಹಾಗೂ ಮಗನ ಮೂತ್ರಪಿಂಡ ಹೊಂದಾಣಿಕೆಯಾದ ಕಾರಣ ರೋಬೋಟ್ ತಂತ್ರಜ್ಞಾನದ ಸಹಾಯದಿಂದ ಕಸಿ ಮಾಡಲಾಯಿತು' ಎಂದರು.

'ಎರಡೂವರೆ ಗಂಟೆ ಅವಧಿಯಲ್ಲಿ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಇದಾದ 72 ಗಂಟೆಗಳಲ್ಲಿ ಅವರ ಮೂತ್ರಪಿಂಡ ಕಾರ್ಯನಿರ್ವಹಣೆ ಸಹಜ ಸ್ಥಿತಿಗೆ ಮರಳಿತು' ಎಂದರು.

ಡಿ.18ರಿಂದ 'ಸಮವಸ್ತ್ರ ಮೇಳ'

ಬೆಂಗಳೂರು: ಮಹಾರಾಷ್ಟ್ರದ ಸೋಲಾಪುರ ಗಾರ್ಮೆಂಟ್ ಮ್ಯಾನುಫ್ಯಾಕ್ಚರ್ ಅಸೋಸಿಯೇಷನ್ '8ನೇ ಸಮವಸ್ತ್ರ ಮೇಳ'ವನ್ನು ಅರಮನೆ ಮೈದಾನದ ಶೃಂಗಾರ ಗಾರ್ಡನ್‌ನಲ್ಲಿ ಡಿಸೆಂಬರ್ 18 ರಿಂದ 21ರವರೆಗೆ ಆಯೋಜಿಸಲಾಗಿದೆ.

ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಮತ್ತು ಸೊಲ್ಲಾಪುರದ ಶಾಸಕ ಸುಭಾಷ್ ದೇಶಮುಖ್ ಮೇಳದಲ್ಲಿ ಉಪಸ್ಥಿತರಿರುತ್ತಾರೆ. ಒಂದೇ ಸೂರಿನಡಿ 1,200 ಬ್ರ್ಯಾಂಡ್‌ಗಳು ಮತ್ತು 10 ಸಾವಿರ ಸಮವಸ್ತ್ರ ವಿನ್ಯಾಸಗಳು ಪ್ರದರ್ಶನಗೊಳ್ಳಲಿವೆ ಎಂದು ಮೇಳದ ಅಧ್ಯಕ್ಷ ಸುನೀಲ್ ಗಂಗ್ಜಿ ತಿಳಿಸಿದ್ದಾರೆ.

ವಾಣಿಜ್ಯೋದ್ಯಮಿಗಳು ಮತ್ತು ಕಾರ್ಪೊರೇಟ್ ಗ್ರಾಹಕರು ಪ್ರದರ್ಶನದಲ್ಲಿ ಪಾಲ್ಗೊಳ್ಳುವಂತೆ ಅಸೋಸಿಯೇಷನ್ ಮನವಿ ಮಾಡಿದೆ.

'ಈಜಿಪುರ ಮೇಲ್ಸೇತುವೆ ಪರೀಕ್ಷೆ ನಂತರ ಕಾಮಗಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈಜಿಪುರ ಮೇಲ್ಸೇತುವೆ ಕಾಮಗಾರಿಯಲ್ಲಿ ಈಗಾಗಲೇ ನಿರ್ಮಾಣವಾಗಿರುವ ಎಲ್ಲ ಸೆಗ್ಮೆಂಟ್‌ಗಳ ಅಳವಡಿಕೆಗೆ ಮುನ್ನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ತಜ್ಞರ ಸೂಚನೆಯಂತೆ ಪರೀಕ್ಷೆ ನಡೆಸಲಾಗುತ್ತದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದ್ದಾರೆ.

'ಮೇಲ್ಸೇತುವೆಯಲ್ಲಿ ಅಳವಡಿಸಲಾಗಿದ್ದ ಸೆಗ್ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಅದನ್ನು ತೆರವುಗೊಳಿಸಿ, ಹೊಸ ಸೆಗ್ಮೆಂಟ್ ಅನ್ನು ಮರುಜೋಡಣೆ ಮಾಡಲಾಗುತ್ತಿದೆ. ಬಿರುಕುಬಿಟ್ಟಿದ್ದ ಸೆಗ್ಮೆಂಟ್ ಅನ್ನು ತೆರವುಗೊಳಿಸುವ ಸಂದರ್ಭದಲ್ಲಿ ಅದಕ್ಕೆ ಜೋಡಣೆಯಾಗಿದ್ದ ಇನ್ನೊಂದು ಸೆಗ್ಮೆಂಟ್ ಅನ್ನೂ ಕೆಳಗಿಳಿಸಲಾಗಿದೆ. ಕ್ಯಾಸ್ಟಿಂಗ್ ಘಟಕದಲ್ಲಿ [illegible] ಸರಿಯಾಗಿ ನಿರ್ವಹಣೆ ಮಾಡದ್ದರಿಂದ ಸೆಗ್ಮೆಂಟ್‌ನೊಂದರ ಕೆಳಗಿನ ಸ್ಲ್ಯಾಬ್ ಭಾಗದಲ್ಲಿ ಬಿರುಕು ಉಂಟಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಆರಂಭಿಕ ಹಂತದಲ್ಲಿ ಗುತ್ತಿಗೆದಾರರಾಗಿದ್ದ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಕಂಪನಿ ನಿರ್ಮಾಣ ಮಾಡಿದ್ದ ಸೆಗ್ಮೆಂಟ್‌ಗಳು ಇವಾಗಿದ್ದು, ಅವುಗಳ ಪರೀಕ್ಷೆಗಳಿಗೆ ಒಳಪಡಿಸಿ, ಗುಣಮಟ್ಟ ಖಾತರಿಪಡಿಸಿಕೊಂಡ ನಂತರವಷ್ಟೇ ಮೇಲ್ಸೇತುವೆಯಲ್ಲಿ ಅಳವಡಿಸಲು ಹೊಸ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿಲ್ಲ' ಎಂದಿದ್ದಾರೆ.

ಸಮಿತಿ ಭೇಟಿ: ವಿಧಾನಸಭೆ ಅಂದಾಜುಗಳ ಸಮಿತಿ ಅಧ್ಯಕ್ಷ ಹಂಪನಗೌಡ ಬಾದರ್ಲಿ ನೇತೃತ್ವದಲ್ಲಿ ಸದಸ್ಯರು ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಶುಕ್ರವಾರ ವೀಕ್ಷಿಸಿದರು. ಮೇಲ್ಸೇತುವೆಯಲ್ಲಿ ಅಳವಡಿಸುವ ಸಂದರ್ಭದಲ್ಲೇ ಸೆಗ್ಮೆಂಟ್‌ನಲ್ಲಿ ಬಿರುಕು ಕಾಣಿಸಿಕೊಂಡಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು.

'ಜನರ ಸುರಕ್ಷತೆ ಅತ್ಯಂತ ಮುಖ್ಯವಾಗಿದ್ದು, ಇಂತಹ ಅತಂತ್ರ ಸ್ಥಿತಿ ನಿರ್ಮಾಣವಾಗಲು ಕಾರಣರಾದವರಿಂದ ಮಾಹಿತಿ ಪಡೆಯಲು ನಿರ್ಧರಿಸಲಾಗಿದೆ. ಈ ಮೇಲ್ಸೇತುವೆ ಕಾಮಗಾರಿಯಲ್ಲಿ ಕಾರ್ಯನಿರ್ವಹಿಸಿದ್ದ ಹಿಂದಿನ ಮುಖ್ಯ ಎಂಜಿನಿಯರ್, ಈಗಿನ ಮುಖ್ಯ ಎಂಜಿನಿಯರ್ ಸೇರಿದಂತೆ ಎಲ್ಲರೂ ಮಾಹಿತಿ ಒದಗಿಸಬೇಕು ಎಂಬುದಾಗಿ ಸೂಚಿಸಲಾಗಿದೆ' ಎಂದು ಹಂಪನಗೌಡ ಅವರು ತಿಳಿಸಿದರು.

ನಗರದಲ್ಲಿ ಹೆಚ್ಚುತ್ತಿದೆ ಚಳಿ, ಮಂಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ವಾತಾವರಣದಲ್ಲಿನ ಉಷ್ಣಾಂಶ ಕುಸಿತವಾಗುತ್ತಿದ್ದು, ಬೆಳಿಗ್ಗೆ ಹಾಗೂ ರಾತ್ರಿಯ ಅವಧಿಯಲ್ಲಿ ಚಳಿ ಹೆಚ್ಚಳವಾಗುತ್ತಿದೆ.

ಹವಾಮಾನ ಇಲಾಖೆಯ ಪ್ರಕಾರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 17.4 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಮುಂಜಾನೆ ಹಾಗೂ ಸಂಜೆಯ ಅವಧಿಯಲ್ಲಿ ಉಷ್ಣಾಂಶ ಮತ್ತಷ್ಟು ತಗ್ಗುತ್ತಿರುವ ಪರಿಣಾಮ ಈ ಅವಧಿಯಲ್ಲಿ ಚಳಿ ಹೆಚ್ಚುತ್ತಿದೆ.

ಕೆಲ ದಿನಗಳಿಂದ ಮುಂಜಾನೆ ಮಂಜು ಕೂಡ ಕಾಣಿಸಿಕೊಳ್ಳುತ್ತಿದೆ. ಇದರಿಂದಾಗಿಯೂ ಚಳಿ ಹೆಚ್ಚುತ್ತಿದೆ. ಇಲಾಖೆಯ ಪ್ರಕಾರ, ಕಳೆದೊಂದು ವಾರದಿಂದ ಸರಾಸರಿ ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ನಾಲ್ಕು ದಿನಗಳಿಂದ ಕನಿಷ್ಠ ಉಷ್ಣಾಂಶ ಇಳಿಮುಖ ಮಾಡಿದೆ.

ಮುಂದಿನ ನಾಲ್ಕು ದಿನಗಳು ಗರಿಷ್ಠ ಉಷ್ಣಾಂಶ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 17ರಿಂದ 18 ಡಿಗ್ರಿ ಸೆಲ್ಸಿಯಸ್ ಇರಲಿದೆ. ಮುಂಜಾನೆ ಮೋಡ ಕವಿದ ವಾತಾವರಣ ಇರಲಿದ್ದು, ಚಳಿ ಮತ್ತು ಮಂಜು ಕಾಣಿಸಿಕೊಳ್ಳಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

'ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಚಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಅಧಿಕ ಪ್ರಮಾಣದಲ್ಲಿ ಮಳೆಯಾಗಿರುವುದೇ ಇದಕ್ಕೆ ಕಾರಣ. ಮುಂದಿನ ವಾರದಿಂದ ಚಳಿ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ಗುಭ/ಗುನಿ) ವಿಭಾಗ, ಯಲಹಂಕ ವಲಯ, ರೂಂ.ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ, ಎನ್.ಆರ್.ವೃತ್ತ, ಬೆಂಗಳೂರು–02.

ಸಂ: ಕಾಪಾಅ(ಗುಭ/ಗುನಿ)/ಯಲಹಂಕ/ಟೆಂಡರ್/53/24–25 ದಿನಾಂಕ: 22.11.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ದ್ವಿ–ಲಕೋಟೆ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ/ಗುಣಮಟ್ಟ ನಿಯಂತ್ರಣ ವಿಭಾಗ, ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ), ಇವರು, ಯೋಜನಾ ನಿರ್ವಹಣೆಗಾಗಿ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಕನ್ಸಲ್ಟೆನ್ಸಿ ಸೇವೆಗಳಿಗಾಗಿ ಇದೇ ರೀತಿಯ ಕೆಲಸವನ್ನು ಮಾಡಿರುವ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ** ಈ ಕೆಳಗೆ ತಿಳಿಸಲಾದ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿಯ ಹೆಸರು
1	"ಯಲಹಂಕ ವಿಧಾನಸಭಾ ಕ್ಷೇತ್ರದ ಕೆರೆಗಳ ಸುಧಾರಣೆ" ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆಯ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. **ಯೋಜನಾ ವೆಚ್ಚ:** ರೂ. 200.00 ಲಕ್ಷಗಳು. **ಇಎಂಡಿ:** ರೂ.5,000/–. **ಕಾಲಾವಧಿ:** ಯೋಜನೆ ಪೂರ್ಣಗೊಳ್ಳುವವರೆಗೆ.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **26.11.2024ರಿಂದ.** 2) ಪೂರ್ವಭಾವಿ ಸಭೆಯನ್ನು ದಿನಾಂಕ: **30.11.2024 ಬೆಳಿಗ್ಗೆ 11:30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ (ಗುಭ/ಗುನಿ) ಕಚೇರಿ, ರೂಂ.ಸಂ. 101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ, ಎನ್.ಆರ್.ಚೌಕ, ಬೆಂಗಳೂರು–560002, ಇಲ್ಲಿ ನಡೆಸಲಾಗುವುದು. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **05.12.2024 ರ ಸಂಜೆ 4:00 ಗಂಟೆವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **06.12.2024ರ ಸಂಜೆ 4:30 ಗಂಟೆಗೆ.** 5) ಟೆಂಡರ್‌ನ ಮಾನ್ಯತೆ: ಟೆಂಡರ್‌ಗಳನ್ನು ಸ್ವೀಕರಿಸಿದ ದಿನಾಂಕದಿಂದ 90 ದಿವಸಗಳು.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಗುಭ/ಗುನಿ ವಿಭಾಗ)
ಯಲಹಂಕ ವಲಯ, ಬೃಬೆಂಮಪಾ

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ

ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ
ಮಾನೇಸರ್, ಗುರಗಾಂವ್, ಹರಿಯಾಣ–122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]
ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ ಸಿ–ಪೇಸ್/ಎಸ್‌ಟಿಕೆ–2/248(2)/2024–25/1097 ದಿ:08.10.2024

ಉಲ್ಲೇಖ:

(1) ಕರ್ನಾಟಕ ರಾಜ್ಯದ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕೆಳಕಂಡ (18) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ.ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AB1079559	U72900KA20190PC120359	ಪೈಜಾ ಲ್ಯಾಬ್ಸ್ ಇಂಡಿಯಾ (ಒಪಿಸಿ) ಪ್ರೈವೇಟ್ ಲಿಮಿಟೆಡ್
2	AB0808326	U72900KA2022PTC159903	ಆ್ಯನ್‌ಸ್ಟಾಂಡ್ ಐಟಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
3	AB0329882	U72900KA2022PTC166333	ಸೋನಿಕ್‌ಬೂಮ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
4	AB0600971	U72500KA2022PTC164102	ಎನ್‌ಜಿಅಗಿನೆ ಇಂಟಿಗ್ರೇಟೆಡ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
5	AB1012919	U72900KA2022PTC157719	ಎಫ್‌ಯುವರ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
6	AB0448962	U74999KA2022PTC164075	ಕಾಲರ್‌ಡೆಸ್ಕ್ ಇನ್ಫೋಟೆಕ್ ಎಸ್‌ಒಎಲ್ ಪ್ರೈವೇಟ್ ಲಿಮಿಟೆಡ್
7	AB0423746	U15400KA2021PTC147644	ಎಸ್‌ಎನ್‌ಡೇಸ್ ಗ್ರಾಸರೆಂಟ್ ಪ್ರೈವೇಟ್ ಲಿಮಿಟೆಡ್
8	AB0723660	U72900KA2020PTC142566	ಡೆಲೌನಿಕ್ಸ್ ಡಿಜಿಟಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
9	AA9839989	U74999KA2020PTC136915	ಆಕ್ಮಾ ಅಲಯನ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
10	AB0380016	U74999KA2020PTC134305	ಸುವಾಣಿ ಕನ್ಸಲ್ಟಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
11	AA9988372	U74994KA2020PTC132147	ಸಾರೀರಿಬಾರ್ನ್ ಪ್ರೈವೇಟ್ ಲಿಮಿಟೆಡ್
12	AB0112314	U72900KA2019PTC128935	ಅಮೇಯಸ್ಮಾರ್ಟ್ ಲ್ಯಾಬ್ಸ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
13	AA9975089	U01100KA2018PTC115972	ಎಂಪಿಎಲ್‌ಎಸ್ ಅಗ್ರಿಟೆಕ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್
14	AB0711760	U01113KA2018PTC111595	ಎಜಿಬಾಟ್ ಪ್ರೈವೇಟ್ ಲಿಮಿಟೆಡ್
15	AB0314591	U72200KA2011PTC059851	ಇ–ಆಕ್ಟಿವಿಟೀಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
16	AB0242353	U72200KA2012PTC065058	ಸ್ಟನ್–ಎ–ರೀವ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
17	AB0426455	U74900KA2009PTC049394	ಟ್ರಾನ್ಸೆಂಡೆಂಜ್ ಮಾರ್ಕೆಟಿಕ್ ಕನ್ಸಲ್ಟನ್ಸಿ ಸರ್ವೀಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
18	AB0799096	U40109KA2001PTC028637	ಸನ್‌ಟ್ರಾಕ್ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಹರಿಹರ ಸಾಹೂ
ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0505/2425



'ಬಿಜೆಪಿ ವಿರುದ್ಧ ಮಾನಹಾನಿ ಪ್ರಕರಣ'

ಪ್ರಜಾವಾಣಿ ವಾರ್ತೆ


ಡಿ.ಕೆ ಶಿವಕುಮಾರ್

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳ ಕುರಿತು ಮಹಾರಾಷ್ಟ್ರದಲ್ಲಿ ಸುಳ್ಳು ಪ್ರಚಾರ ನಡೆಸಿದ್ದ ಬಿಜೆಪಿ ವಿರುದ್ಧ ದೂರು ದಾಖಲಿಸಲಾಗುವುದು. ಈಗಾಗಲೇ ಮುಖ್ಯಮಂತ್ರಿ ಈ ವಿಚಾರವಾಗಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಬಿಜೆಪಿ ನಾಯಕರಿಗೆ ಕನಿಷ್ಠ ಪರಿಜ್ಞಾನವೂ ಇಲ್ಲ. ಕರ್ನಾಟಕದಲ್ಲಿನ 'ಗ್ಯಾರಂಟಿ' ಯೋಜನೆಗಳ ಜಾರಿ ಬಗ್ಗೆ ಪರಿಶೀಲನೆ ನಡೆಸಲು ಬಿಜೆಪಿ ನಾಯಕರನ್ನು ಆಹ್ವಾನಿಸಿ, ಜಾಹೀರಾತು ನೀಡಿದ್ದೆವು. ಈಗ ಮಾನಹಾನಿ ಪ್ರಕರಣ ದಾಖಲಿಸಲಾಗುವುದು' ಎಂದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಏಳೆಂಟು ವರ್ಷಗಳಿಂದ ನಿರಂತರವಾಗಿ ಅದಾನಿ ಕಂಪನಿಗಳ ಬಗ್ಗೆ ಗಂಭೀರ ಆರೋಪಗಳನ್ನು ಮಾಡುತ್ತಾ ಬಂದಿದ್ದಾರೆ. ಜನರ ಗಮನ ಸೆಳೆದಿದ್ದಾರೆ. ಈ ವಿಚಾರ ಸಂಸತ್ತಿನಿಂದ ಬೀದಿಗಳವರೆಗೆ ಚರ್ಚೆಯಾದರೂ, ಕೇಂದ್ರ ತನಿಖಾ ಸಂಸ್ಥೆಗಳು ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

'ಗ್ರೀನ್ ಎನರ್ಜಿ' ಯೋಜನೆ ಅಕ್ರಮ ಕುರಿತು ಅಮೆರಿಕದ ನ್ಯಾಯಾಲಯ ಆದೇಶ ನೀಡಿದೆ. ಈ ವಿಚಾರವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು, ವಿರೋಧ ಪಕ್ಷಗಳ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವುದರಲ್ಲೇ ಕೇಂದ್ರ ಸರ್ಕಾರ ತಲ್ಲೀನವಾಗಿದೆ. ಈಗಲಾದರೂ ಅದಾನಿ ಪ್ರಕರಣದತ್ತ ಗಮನಹರಿಸಬೇಕು. ದೇಶದ ಜನಸಾಮಾನ್ಯರು ಅವರ ಕಂಪನಿಗಳ ಮೇಲೆ ಸಾವಿರಾರು ಕೋಟಿ ರೂಪಾಯಿ ಹೂಡಿಕೆ ಮಾಡಿದ್ದಾರೆ. ಜನರ ರಕ್ಷಣೆಗಾಗಿಯಾದರೂ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

'ಸಂಧಿವಾತ: ಮುಂಜಾಗ್ರತೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಧಿವಾತ ಕಾಯಿಲೆ ಬಗ್ಗೆ ಮುಂಜಾಗ್ರತೆ ಅಗತ್ಯವಾಗಿದ್ದು, ಅದರ ಆಧುನಿಕ ಚಿಕಿತ್ಸೆಯ ಬಗ್ಗೆ ಅರಿತುಕೊಳ್ಳುವುದೂ ಮುಖ್ಯ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

ಭಾರತೀಯ ಸಂಧಿವಾತ ವೈದ್ಯರ ಸಂಘಟನೆಯ ವಾರ್ಷಿಕ ರಾಷ್ಟ್ರೀಯ ಸಮ್ಮೇಳನ 'ಐರಾಕಾನ್- 2024' ಉದ್ಘಾಟಿಸಿ ಅವರು ಶುಕ್ರವಾರ ಮಾತನಾಡಿದರು.

ಸಂಧಿವಾತ ಕಾಯಿಲೆ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಇಂತಹ ಸಮ್ಮೇಳನಗಳು ಸಹಕಾರಿ ಎಂದರು.

ಸಮ್ಮೇಳನದಲ್ಲಿ ದೇಶದ ನಾನಾ ಭಾಗಗಳಿಂದ ನಾಲ್ಕು ಸಾವಿರಕ್ಕೂ ಹೆಚ್ಚು ವೈದ್ಯರು ಭಾಗವಹಿಸಿದ್ದರು. ಸಂಧಿವಾತದ ಚಿಕಿತ್ಸೆಗೆ ಹೊಸ ತಾಂತ್ರಿಕತೆ, ಜೈವಿಕ ಔಷಧಿ ಮತ್ತು ರೋಗಿ ಕೇಂದ್ರಿತ ಚಿಕಿತ್ಸಾ ವಿಧಾನಗಳ ಕುರಿತು ಚರ್ಚೆ ನಡೆಸಿದರು.

ಐರಾಕಾನ್ ಮುಖ್ಯಸ್ಥರಾದ ಡಾ. ಚಂದ್ರಶೇಖರ್ ಮತ್ತು ಡಾ. ನಾಗರಾಜ್ ಅವರು ಸಮಾವೇಶದ ಉದ್ದೇಶ, ವೈಶಿಷ್ಟ್ಯಗಳನ್ನು ವಿವರಿಸಿದರು.

ನಿರ್ವಹಣೆ, ಮೂಲಸೌಕರ್ಯ ಕೊರತೆ ಎದುರಿಸುತ್ತಿರುವ ಮಲ್ಲತ್ತಹಳ್ಳಿಯ ಕಲಾಗ್ರಾಮ

ಶಿಥಿಲಗೊಂಡ ಕಟ್ಟಡ, ಅನಾಥವಾದ ಕಲಾಕೃತಿ

• ವರುಣ ಹೆಗಡೆ

ಬೆಂಗಳೂರು: ಕಲಾ ಕುಟೀರಗಳಲ್ಲಿ ಉದ್ಯಾನ ನಿರ್ವಹಣಾ ಸಲಕರಣೆಗಳ ದಾಸ್ತಾನು, ಗಿಡಗಂಟಿಗಳಿಂದ ಆವರಿಸಿಕೊಂಡು ಅನಾಥವಾದ ಕಲಾಕೃತಿಗಳು, ನೀರು ಹಾಗೂ ನಿರ್ವಹಣೆ ಇಲ್ಲದ ಶೌಚಾಲಯ, ಎಲ್ಲೆಂದರಲ್ಲಿ ಕಸದ ರಾಶಿ...

ಇದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ವಹಣೆ ಮಾಡುತ್ತಿರುವ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸ್ಥಿತಿ.

13 ಎಕರೆಯಲ್ಲಿರುವ ಈ ಪ್ರದೇಶವು ಮೂಲಸೌಕರ್ಯಕ್ಕಾಗಿ ಕಾದು ಕುಳಿತಿದೆ. ಯಾವುದೇ ಸರ್ಕಾರ ಈ ಪ್ರದೇಶದ ಅಭಿವೃದ್ಧಿಗೆ ಆದ್ಯತೆ ನೀಡದಿದ್ದರಿಂದ ನಿರ್ಮಾಣಗೊಂಡ ಕಟ್ಟಡಗಳು ಶಿಥಿಲಗೊಂಡರೆ, ನಿರ್ಮಾಣ ಹಂತದ ಕಟ್ಟಡಗಳು ಅನುದಾನದ ಕೊರತೆಯಿಂದ ಪಾಳು ಕೊಂಪೆಯಾಗಿವೆ. ಇದರಿಂದಾಗಿ ಇಲ್ಲಿನ ಸಾಂಸ್ಕೃತಿಕ ಸಮುಚ್ಚಯದಲ್ಲಿ ಪ್ರತಿವರ್ಷ ಬೆರಳಣಿಕೆಯಷ್ಟು ಕಾರ್ಯಕ್ರಮಗಳಷ್ಟೇ ನಡೆಯುತ್ತಿವೆ. ಕಲಾವಿದರಿಗೆ ಉಳಿದುಕೊಳ್ಳಲು ಸೂಕ್ತ ವಸತಿ ಸೌಲಭ್ಯವಿರದ ಪರಿಣಾಮ ಕಲಾ ಶಿಬಿರ, ತರಬೇತಿ ಹಾಗೂ ಪ್ರದರ್ಶನಗಳಿಗೆ ಕೂಡ ಸಮಸ್ಯೆಯಾಗಿದೆ.

ಕಲಾಗ್ರಾಮದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ವಿಭಾಗ, ಶಿಲ್ಪಕಲಾ ಅಕಾಡೆಮಿಯ ಗ್ಯಾಲರಿ, ಬಯಲು ರಂಗಮಂದಿರಗಳು, ಆಡಳಿತ ಕಟ್ಟಡ ಹಾಗೂ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಕಟ್ಟಡ ಇದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗ್ರಾಫಿಕ್ ಸ್ಟುಡಿಯೊದ ಕಟ್ಟಡ ಅನುದಾನದ ಕೊರತೆಯಿಂದ ಪಾಳು ಬಿದ್ದಿದೆ.





ಕಲಾಗ್ರಾಮದಲ್ಲಿರುವ ಕಲಾ ಕುಟೀರದಲ್ಲಿ ಉದ್ಯಾನ ನಿರ್ವಹಣಾ ಸಲಕರಣೆಗಳನ್ನು ದಾಸ್ತಾನು ಮಾಡಿಟ್ಟಿರುವುದು (ಎಡ ಚಿತ್ರ) ಕಲಾಕೃತಿಯ ಬಳಿ ಕಸದ ರಾಶಿ ಹಾಕಿರುವುದು

ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

> **ಕಲಾಗ್ರಾಮದ ಸ್ಥಿತಿಗತಿ ಬಗ್ಗೆ ಸಂಬಂಧಪಟ್ಟ ಅಧಿಕಾರಿಯಿಂದ ವರದಿ ಪಡೆದು, ಸುಧಾರಣೆಗೆ ಕ್ರಮ ವಹಿಸಲಾಗುವುದು**
> **ಧರಣೀದೇವಿ ಮಾಲಗತ್ತಿ**
> ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಸಾಹಿತಿಗಳು, ಕಲಾವಿದರು ಹಾಗೂ ಶಿಲ್ಪಿಗಳಿಗೆ ಚಟುವಟಿಕೆಗಳನ್ನು ನಡೆಸಲು ನಿರ್ಮಿಸಲಾಗಿದ್ದ ಕಲಾ ಕುಟೀರಗಳಿಗೆ ಬೀಗ ಬಿದ್ದಿದ್ದು, ನಿರ್ವಹಣೆ ಇಲ್ಲದೆಯೇ ಕಿಟಕಿಗಳು ಹಾಳಾಗಿವೆ. ಕೆಲ ಕಿಟಕಿಗಳ ಬಾಗಿಲುಗಳು ಕಿತ್ತು ಹೋಗಿವೆ. ಇದರಿಂದಾಗಿ ಕಲಾ ಕುಟೀರಗಳು ಕಲಾವಿದರಿಗೆ ನಿರುಪಯುಕ್ತವಾಗಿ, ಕತ್ತಿ, ಗುದ್ದಲಿಯಂತಹ ವಿವಿಧ ಸಾಮಗ್ರಿಗಳ ದಾಸ್ತಾನು ಕೇಂದ್ರಗಳಾಗಿವೆ.

ಮರೆಯಾದ ಕಲಾಕೃತಿ: ಶಿಲ್ಪ ಕಲಾ ಶಿಬಿರ ಸೇರಿ ವಿವಿಧ ಸಂದರ್ಭಗಳಲ್ಲಿ ಶಿಲ್ಪಿಗಳು ಸಿದ್ಧಪಡಿಸಿದ ಕಲಾಕೃತಿಗಳು ಎಲ್ಲೆಂದರಲ್ಲಿ ಬಿದ್ದಿವೆ. ಕೆಲವು ಕಲಾಕೃತಿಗಳು ಕಸದ ರಾಶಿಯಿಂದ, ಇನ್ನೂ ಕೆಲವು ಕಲಾಕೃತಿಗಳು ಗಿಡಗಂಟಿಗಳಿಂದ ಮರೆಯಾಗಿವೆ. ಕಲಾಕೃತಿಗಳನ್ನು ಇಡಲು ಸೂಕ್ತ ವ್ಯವಸ್ಥೆ ಮಾಡದಿದ್ದರಿಂದ ಭಗ್ನಾವಶೇಷದಂತೆ ಸಾಂಸ್ಕೃತಿಕ ಸಮುಚ್ಚಯದ ಸುತ್ತಮುತ್ತ ಕಾಣಸಿಗುತ್ತವೆ.

‘ಮೂಲಸೌಕರ್ಯ ಕೊರತೆಯಿಂದ ಕಲಾಗ್ರಾಮದಲ್ಲಿ ಕಲಾ ಶಿಬಿರ ಹಾಗೂ ಪ್ರದರ್ಶನಗಳು ನಡೆಸಲು ಸಾಧ್ಯವಾಗುತ್ತಿಲ್ಲ. ಈ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿದಲ್ಲಿ ಜನರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅಭಿವೃದ್ಧಿಗೆ ಸರ್ಕಾರ ಅಗತ್ಯ ಅನುದಾನ ನೀಡಿ, ಕಲಾ ಚಟುವಟಿಕೆಗಳಿಗೆ ಅವಕಾಶ ನೀಡಬೇಕು’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಲಾವಿದರೊಬ್ಬರು ಆಗ್ರಹಿಸಿದರು.

ರಂಗಮಂದಿರದಲ್ಲಿ ನಡೆಯದ ಪ್ರದರ್ಶನ

ಕಲಾಗ್ರಾಮದಲ್ಲಿನ ಬಯಲು ರಂಗಮಂದಿರದಲ್ಲಿ ಕೆಲ ವರ್ಷಗಳಿಂದ ಯಾವುದೇ ಪ್ರದರ್ಶನ ನಡೆದಿಲ್ಲ. ಇಲಾಖೆಯೂ ಈ ರಂಗಮಂದಿರವನ್ನು ನಿರ್ವಹಣೆ ಮಾಡಿಲ್ಲ.

ರಂಗಮಂದಿರದ ನಿರ್ವಹಣಾ ಕೊಠಡಿಯ ಗೋಡೆಗಳು ಶಿಥಿಲಗೊಂಡಿವೆ. ಪ್ರೇಕ್ಷಕರಿಗಾಗಿ ನಿರ್ಮಿಸಲಾಗಿದ್ದ ನೆಲಹಾಸಿನ ನಡುವೆ ಹುಲ್ಲಿನ ಗಿಡಗಳು ಬೆಳೆದಿವೆ. ಪ್ರದರ್ಶನ ನೀಡುವ ವೇದಿಕೆಯ ಗೋಡೆಗಳನ್ನು ಮರದ ಕೊಂಬೆಗಳು ಆವರಿಸಿಕೊಂಡಿವೆ. 2020ರಲ್ಲಿ ಎನ್‌ಎಸ್‌ಡಿ ವಿದ್ಯಾರ್ಥಿಗಳು ಇಲ್ಲಿ ‘ಮಲೆಗಳಲ್ಲಿ ಮದುಮಗಳು’ ನಾಟಕವನ್ನು ಪ್ರದರ್ಶಿಸಿದ್ದರು. ಆ ವೇಳೆ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಬಳಿಕ ಯಾವುದೇ ಪ್ರದರ್ಶನ ಈ ವೇದಿಕೆಯಲ್ಲಿ ನಡೆದಿಲ್ಲ.

ನೀರು, ಶೌಚಾಲಯ ಸಮಸ್ಯೆ

ಇಲ್ಲಿನ ಶೌಚಾಲಯಗಳು ನಿರ್ವಹಣೆ ಕೊರತೆಯಿಂದ ಶಿಥಿಲಗೊಂಡು, ಪಾಳು ಬಿದ್ದಿವೆ. ನೀರು ಬರದಿದ್ದರಿಂದ ಬಳಕೆಗೆ ಯೋಗ್ಯವಾಗಿಲ್ಲ. ಇದರಿಂದಾಗಿ ನಾಯಿಗಳ ವಾಸಸ್ಥಾನವಾಗಿದೆ. ರಾಷ್ಟ್ರೀಯ ನಾಟಕ ಶಾಲೆ ವಿದ್ಯಾರ್ಥಿಗಳು ಹಿಂದೆ ವಾಸವಿದ್ದ ವಸತಿ ಗೃಹಗಳಿಗೆ ಹಲವು ದಿನಗಳಿಂದ ಬೀಗ ಹಾಕಲಾಗಿದೆ. ಅವುಗಳ ಸುತ್ತ ಗಿಡಗಂಟಿಗಳು ಬೆಳೆದಿವೆ.

ಸಾಂಸ್ಕೃತಿಕ ಸಮುಚ್ಚಯದಲ್ಲಿರುವ ಕುಡಿಯ ನೀರಿನ ಶುದ್ಧೀಕರಣ ಯಂತ್ರ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿ ಕಾರ್ಯಕ್ರಮ ಆಯೋಜಕರು ಹೊರಗಡೆಯಿಂದ ನೀರಿನ ಕ್ಯಾನ್‌ಗಳನ್ನು ತರಿಸಿಕೊಳ್ಳಬೇಕಾಗಿದೆ. ಈ ಕಟ್ಟಡದ ಲಿಫ್ಟ್‌ಗಳೂ ಕಾರ್ಯನಿರ್ವಹಿಸುತ್ತಿಲ್ಲ.

ಕನ್ನಡದಲ್ಲೂ ಎಂಜಿನಿಯರಿಂಗ್ ಪಠ್ಯ ಪುಸ್ತಕಗಳು ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರಸಕ್ತ ವರ್ಷದಿಂದಲೇ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳನ್ನೂ ನೀಡುತ್ತಿದೆ.

ಎಂಜಿನಿಯರಿಂಗ್‌ನಲ್ಲಿನ ಎಲ್ಲಾ ಶಾಖೆಗಳಿಗೆ ಮತ್ತು ಎಲ್ಲಾ ಶೀರ್ಷಿಕೆಗಳಿಗೆ ಮೊದಲ ಹಾಗೂ ಎರಡನೇ ಸೆಮಿಸ್ಟರ್‌ನ ಕನ್ನಡ ಆವೃತ್ತಿಯ ಅನುವಾದಿತ ಪುಸ್ತಕಗಳು ಸಿದ್ಧವಾಗಿದ್ದು, ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಶೀಘ್ರದಲ್ಲೇ ಅಪ್‌ಲೋಡ್ ಮಾಡಲಾಗುತ್ತಿದೆ.

ಗ್ರಾಮೀಣ ಮತ್ತು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಈ ಪುಸ್ತಕಗಳು ಸಹಾಯ ಮಾಡಲಿವೆ. ಮುಂದಿನ ಶೈಕ್ಷಣಿಕ ಸಾಲಿನಿಂದ ಮೂರು ಮತ್ತು ನಾಲ್ಕನೇ ಸೆಮಿಸ್ಟರ್‌ಗಳಿಗೂ ಕನ್ನಡಕ್ಕೆ ಅನುವಾದಿಸಿದ ಪುಸ್ತಗಳು ಲಭ್ಯವಾಗಲಿವೆ. ವೆಚ್ಚ ಅಧಿಕವಾಗುವ ಕಾರಣ ಹೆಚ್ಚಿನ ಪುಸ್ತಕಗಳನ್ನು ಮುದ್ರಣ ಮಾಡುತ್ತಿಲ್ಲ. ಅಗತ್ಯವಿದ್ದವರು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಾಧ್ಯಾಪಕರಿಗಷ್ಟೇ ಮುದ್ರಿತ ಪುಸ್ತಕಗಳನ್ನು ಒದಗಿಸಲಾಗುವುದು ಎಂದು ಕುಲಪತಿ ವಿದ್ಯಾಶಂಕರ್ ತಿಳಿಸಿದರು.

2020-21ನೇ ಶೈಕ್ಷಣಿಕ ವರ್ಷದಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಾರಂಭವಾದ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಒಲವು ತೋರಿರಲಿಲ್ಲ. ಈಗ ಕನ್ನಡ ಭಾಷಾಂತರದ ಪುಸ್ತಕಗಳನ್ನು ಒದಗಿಸುವ ಮೂಲಕ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ.

ವಿಮಾನ ನಿರ್ವಹಣೆ ಕೋರ್ಸ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಾಗರಿಕ ವಿಮಾನಯಾನ ನಿರ್ದೇಶನಾಲಯದ (ಡಿಜಿಸಿಎ) ಅನುಮೋದಿತ ಎರಡು ವರ್ಷದ ವಿಮಾನ ನಿರ್ವಹಣೆ ಎಂಜಿನಿಯರಿಂಗ್ (ಎಎಂಇ) ಪ್ರಯಾಣ ಪತ್ರ ಕೋರ್ಸ್ ಅನ್ನು ಬೆಂಗಳೂರು ವಿಮಾನ ನಿಲ್ದಾಣ ಹಾಗೂ ಏರ್ ಇಂಡಿಯಾ ಸಂಸ್ಥೆ ಆರಂಭಿಸಲಿದೆ.

ತರಬೇತಿ ಕೋರ್ಸ್‌ಗಾಗಿ ಏರ್ ಇಂಡಿಯಾ ಮತ್ತು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ಒಪ್ಪಂದಕ್ಕೆ ಸಹಿ ಹಾಕಿದೆ. ಎಎಂಇ ಕೋರ್ಸ್‌ಗಾಗಿ ಅಗತ್ಯವಿರುವ ತರಗತಿ ಕೊಠಡಿ, ಪ್ರಯೋಗಾಲಯ, ಪ್ರಾಯೋಗಿಕ ತರಬೇತಿಗಾಗಿ ಕೌಶಲ್ಯಾಧಾರಿತ ವೃತ್ತಿಪರ ತರಬೇತುದಾರರನ್ನು ನೇಮಕ ಮಾಡಿಕೊಳ್ಳಲು ಯೋಜನೆ ರೂಪಿಸಲಾಗಿದೆ.

ದೇವನಹಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ 86 ಸಾವಿರ ಅಡಿಯಷ್ಟು ವಿಸ್ತೀರ್ಣದ ಕ್ಯಾಂಪಸ್ ನಿರ್ಮಾಣವಾಗಲಿದೆ. 2026ರ ವೇಳೆಗೆ ಕಾರ್ಯಾರಂಭ ಮಾಡಲಿದೆ. ಈ ಕೋರ್ಸ್ ವಿಮಾನದ ದುರಸ್ತಿ ಹಾಗೂ ನಿರ್ವಹಣೆ ಕುರಿತಾಗಿದೆ.

ವಿಎಒ ಹುದ್ದೆ ಪರೀಕ್ಷೆ: ಕೀ ಉತ್ತರ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿ (ವಿಎಒ) ಹುದ್ದೆಗಳ ನೇಮಕಾತಿಗಾಗಿ ನಡೆಸಿದ್ದ ಲಿಖಿತ ಪರೀಕ್ಷೆಯ ಅಂತಿಮ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಒಂದು ಸಾವಿರ ಹುದ್ದೆಗಳ ನೇಮಕಕ್ಕೆ ಅ.10ರಂದು ಪರೀಕ್ಷೆ ನಡೆಸಲಾಗಿತ್ತು. ಕೀ ಉತ್ತರಗಳಿಗೆ ಬಂದ ಆಕ್ಷೇಪಣೆಗಳನ್ನು ವಿಷಯ ತಜ್ಞರು ಪರಿಶೀಲಿಸಿದ ನಂತರ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಕಾವೇರಿ ಐದನೇ ಹಂತ ಶುರುವಾಗಿ ಒಂದು ತಿಂಗಳು • 110 ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ಅಭಿಯಾನ

ಹೊಸ ಸಂಪರ್ಕ: ನೀರು ಪೂರೈಕೆಯಲ್ಲಿ ವ್ಯತ್ಯಯ

• ಗಾಣಧಾಳು ಶ್ರೀಕಂಠ





ವೀರಭದ್ರೇಶ್ವರ ನಗರದಲ್ಲಿ ಕಾವೇರಿ ನೀರು ಬಂದರೂ ತಪ್ಪದ ಟ್ಯಾಂಕರ್ ನೀರಿನ ಅವಲಂಬನೆ (ಎಡ ಚಿತ್ರ). ಕಾವೇರಿ ನೀರು ಪೂರೈಕೆ ಕೊಳವೆ ಪಕ್ಕದಲ್ಲೇ ಕೇಬಲ್, ಪೈಪುಗಳನ್ನು ಅಳವಡಿಸಿರುವುದು

ಬೆಂಗಳೂರು: ಬಡಾವಣೆಯಲ್ಲಿ ಕೊಳವೆಗಳನ್ನು ಜೋಡಿಸಲಾಗಿದೆ, ಆದರೆ, ಮನೆಗಳಿಗೆ ಸಂಪರ್ಕ ನೀಡಿಲ್ಲ. ಕೆಲವೆಡೆ ಮನೆಗಳಿಗೆ ಸಂಪರ್ಕ ಕೊಟ್ಟಿದ್ದರೂ, ನೀರೇ ಪೂರೈಕೆಯಾಗುತ್ತಿಲ್ಲ. ಇನ್ನೂ ಕೆಲವೆಡೆ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲ. ಒಂದು ಕಡೆ ಜನರು ಶುಲ್ಕ ಪಾವತಿಸುವುದು ಕಷ್ಟ ಎಂದರೆ, ಮತ್ತೊಂದೆಡೆ, ಕಂತಿನ ರೂಪದಲ್ಲಿ ಶುಲ್ಕ ಪಾವತಿಗೆ ಅವಕಾಶ ಕೇಳುತ್ತಿದ್ದಾರೆ...!

ಇದು ಕಾವೇರಿ ಐದನೇ ಹಂತ ಯೋಜನೆಯಡಿ, ಹೊಸದಾಗಿ ನೀರಿನ ಸಂಪರ್ಕ ಪಡೆಯಬೇಕಿರುವ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಲ್ಲಿನ ವಾಸ್ತವದ ಪರಿಸ್ಥಿತಿ.

ನಗರಕ್ಕೆ ಹೆಚ್ಚುವರಿ 775 ದಶಲಕ್ಷ ಲೀಟರ್ ಕುಡಿಯುವ ನೀರು ಪೂರೈಸುವ ಕಾವೇರಿ ಐದನೇ ಹಂತ ಆರಂಭವಾಗಿ ತಿಂಗಳು ಕಳೆದಿದೆ. 110 ಹಳ್ಳಿಗಳಲ್ಲಿ ಹೊಸ ನೀರಿನ ಸಂಪರ್ಕ ಕಲ್ಪಿಸುವ ಅಭಿಯಾನವೂ ಜಲಮಂಡಳಿಯಿಂದ ನಡೆದಿದೆ. ಈಗಾಗಲೇ ಸಂಪರ್ಕ ಕಲ್ಪಿಸಿರುವ ಸುಮಾರು 55 ಸಾವಿರ ಮನೆಗಳಿಗೆ ನೀರು ಪೂರೈಕೆ ಆವರ್ತವನ್ನು ಹೆಚ್ಚಿಸಲಾಗಿದೆ.

‘ಹೊಸ ಸಂಪರ್ಕ ಪಡೆದವರಿಗೂ ತಕ್ಷಣದಿಂದಲೇ ನೀರು ಪೂರೈಕೆ ಆಗುತ್ತದೆ’ ಎಂದು ಜಲಮಂಡಳಿ ಹೇಳುತ್ತಿದೆ. ಆದರೆ, ಕೆ.ಆರ್.ಪುರ ವ್ಯಾಪ್ತಿಯ ಕನಕಪುರ ಸುತ್ತಮುತ್ತಲಿನ ಪ್ರದೇಶಗಳು ಸೇರಿದಂತೆ 110 ಹಳ್ಳಿಗಳ ವ್ಯಾಪ್ತಿಯ ಹಲವು ಕಡೆಗಳಲ್ಲಿ ಹೊಸದಾಗಿ ಸಂಪರ್ಕ ಪಡೆದವರಿಗೆ ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ.

‘ಮನೆಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಆದರೆ, ನೀರು ಪೂರೈಕೆಯಾಗುತ್ತಿಲ್ಲ. ಹಿಂದೆ ನೀರು ಪೂರೈಸುತ್ತಿದ್ದ ಕೊಳವೆ ಬಾವಿಗಳಲ್ಲೂ ನೀರಿಲ್ಲ. ಸದ್ಯ ಟ್ಯಾಂಕರ್ ನೀರು ಆಶ್ರಯಿಸಿದ್ದೇವೆ’ ಎಂದು ಕನಕನಗರ ನಿವಾಸಿ ರಮೇಶ್ ಅಲವತ್ತುಕೊಂಡರು.

ಅಂದ್ರಹಳ್ಳಿ, ದೊಡ್ಡಬಿದರಕಲ್ಲು ಸುತ್ತಮುತ್ತಲಿನ ಪ್ರದೇಶದಲ್ಲಿ ಎರಡು ವರ್ಷಗಳ ಹಿಂದೆ ಕಾವೇರಿ ನೀರಿನ ಕೊಳವೆಗಳನ್ನು ಅಳವಡಿಸಲಾಗಿದೆ. ಈ ಭಾಗದಲ್ಲಿರುವ ಅರ್ಧ ಭಾಗದಷ್ಟು ಮನೆಗಳವರು ಕಾವೇರಿ ನೀರಿನ ಸಂಪರ್ಕವನ್ನೂ ಪಡೆದಿದ್ದಾರೆ. ಆದರೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ಹೀಗಾಗಿ ‘ಕಾವೇರಿ ಬಂದರೂ ಟ್ಯಾಂಕರ್ ನೀರಿಗಾಗಿ ಹಣ ತೆರುವುದು ಇನ್ನೂ ತಪ್ಪಿಲ್ಲ’ ಎಂದು ಜನರು ಬೇಸರ ವ್ಯಕ್ತಪಡಿಸುತ್ತಾರೆ.

‘110 ಹಳ್ಳಿಗಳಲ್ಲಿ ಹೆಚ್ಚಾಗಿ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದವರು, ಕಾರ್ಖಾನೆ ನೌಕರರು, ಕಾರ್ಮಿಕರು, ಗಾರ್ಮೆಂಟ್ಸ್ ಉದ್ಯೋಗಿಗಳಿದ್ದು, ಈ ವರ್ಗದ ಆದಾಯವೂ ಕಡಿಮೆ. ಹೀಗಾಗಿ ಶುಲ್ಕ ಪಾವತಿಸುವುದು ಕಷ್ಟ. ಇದರಿಂದಲೂ ಹೊಸ ಸಂಪರ್ಕ ಪಡೆಯುವವರ ಸಂಖ್ಯೆ ಕಡಿಮೆ ಇದೆ’ ಎನ್ನುವುದು ನಿವಾಸಿಗಳ ಅಭಿಪ್ರಾಯ.

‘ಅಬ್ಬಿಗೆರೆಯ ಒಂದು ಭಾಗದಲ್ಲಿ ಕಾವೇರಿ ನೀರು ಪೂರೈಕೆ ಕೊಳವೆಗಳಲ್ಲಿ 20ಕ್ಕೂ ಹೆಚ್ಚು ಕಡೆ ಸೋರಿಕೆಯಾಗುತ್ತಿದೆ. ರಸ್ತೆಗಳ ದುರಸ್ತಿ ಕೆಲಸವು ನಡೆಯುತ್ತಿರುವುದರಿಂದ ಹೊಸ ನೀರಿನ ಸಂಪರ್ಕ ಕಲ್ಪಿಸುವುದನ್ನು ಈ ಭಾಗದಲ್ಲಿ ಸದ್ಯಕ್ಕೆ ನಿಲ್ಲಿಸಲಾಗಿದೆ’ ಎಂದು ಸ್ಥಳೀಯ ನಿವಾಸಿ ವಿನೋದ್ ತಿಳಿಸಿದರು.

‘ಈಗಾಗಲೇ ಸಂಪರ್ಕ ಕಲ್ಪಿಸಿರುವ ಮನೆಗಳಿಗೆ ನೀರು ಪೂರೈಕೆಯಾಗದೇ ಇರುವುದರಿಂದ, ಹೊಸ ಸಂಪರ್ಕ ಪಡೆಯುವುದಕ್ಕೆ ಜನ ಹಿಂದೇಟು ಹಾಕುತ್ತಿದ್ದಾರೆ. ಚಿಕ್ಕಸಂದ್ರದಲ್ಲಿ ಮುಕ್ಕಾಲು ಭಾಗ ಜನರು ಕೆಲವರಿಗೆ ನೀರು ಬರಲಿ, ನಂತರ ನೋಡೋಣ ಎನ್ನುತ್ತಿದ್ದಾರೆ’ ಎಂದು ಹೇಳುತ್ತಾರೆ ನಿವಾಸಿ ಕಿರಣ್.

(ಪೂರಕ ಮಾಹಿತಿ ಪ್ರಸನ್ನ ಯಾದವ್, ದಾಸರಹಳ್ಳಿ ಶಿವರಾಜ್, ಕೆ.ಆರ್.ಪುರ ಚಿಕ್ಕರಾಮು, ಆರ್.ಆರ್.ನಗರ)

ಕಾವೇರಿ ಕುಡಿಯುವ ನೀರಿನ ಕೊಳವೆಗೆ ಅಕ್ರಮವಾಗಿ ಒಳಚರಂಡಿ ಕೊಳವೆ ಜೋಡಿಸಿ, ಅದು ಒಡೆದು ಹೋಗಿ ಸಮಸ್ಯೆಯಾಗಿದ್ದ ಪ್ರದೇಶದಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಅದನ್ನು ಸರಿಪಡಿಸಲಾಗುತ್ತಿದೆ. ಬೇರೆ ಕಡೆಗಳಲ್ಲಿರುವ ಸಮಸ್ಯೆಗಳನ್ನೂ ಪತ್ತೆ ಮಾಡಿ, ಸರಿಪಡಿಸುವ ಕಾರ್ಯ ನಡೆಯುತ್ತಿದೆ. ಸದ್ಯ 1,596 ಅರ್ಜಿಗಳು ಬಂದಿವೆ. ಹೊಸ ಸಂಪರ್ಕ ಕಲ್ಪಿಸುವ ಕೆಲಸಗಳೂ ಪ್ರಗತಿಯಲ್ಲಿವೆ.

ರಾಮ್‌ಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ

‘ಕಂತಿನಲ್ಲಿ ಪಾವತಿಗೆ ಅವಕಾಶ ಕೊಡಿ’

‘ಕಾವೇರಿ ನೀರಿನ ಶುಲ್ಕ ದುಬಾರಿ. ನಾವು ಗಾರ್ಮೆಂಟ್ಸ್ ಉದ್ಯೋಗಿಗಳು. ವೇತನ ಕಡಿಮೆ. ಒಂದೇ ಬಾರಿಗೆ ಕಾವೇರಿ ನೀರಿನ ಶುಲ್ಕ ಪಾವತಿಸುವುದು ಕಷ್ಟ. ಹಾಗಾಗಿ, ಕಂತಿನ ರೂಪದಲ್ಲಿ ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ’ ಎನ್ನುತ್ತಾರೆ ಅಂದ್ರಹಳ್ಳಿ ವ್ಯಾಪ್ತಿಯ ಕರಿಓಬನಹಳ್ಳಿಯ ರಮ್ಯಾ ಹಾಗೂ ಕೃಷ್ಣೇಗೌಡ.

ಕಾಮಗಾರಿಯಿಂದ ನೀರು ಸೋರಿಕೆ

ಅಂದ್ರಹಳ್ಳಿ, ದೊಡ್ಡಬಿದರಕಲ್ಲು ಸುತ್ತಮುತ್ತಲಿನ ಪ್ರದೇಶದಲ್ಲಿ ಕಾವೇರಿ ಕೊಳವೆ ಮಾರ್ಗದ ಪಕ್ಕದಲ್ಲೇ ಬೆಸ್ಕಾಂನವರು ಭೂಗತ ಕೇಬಲ್‌ಗಳನ್ನು, ಖಾಸಗಿ ಕಂಪನಿಗಳವರು ಫೈಬರ್ ಕೇಬಲ್ ಅಳಡಿಸಲು ರಸ್ತೆ ಅಗೆಯುತ್ತಿದ್ದಾರೆ. ಇದರಿಂದ ಕೆಲವು ಕಡೆ ಕಾವೇರಿ ನೀರು ಪೂರೈಕೆಯ ಕೊಳವೆಗಳಿಗೆ ಹಾನಿ ಆಗಿದೆ. ಅಲ್ಲಲ್ಲಿ ನೀರು ಸೋರಿಕೆಯಾಗುತ್ತಿದೆ. ಇದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿದೆ ಎಂದು ಜಲಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಜಲಕ್ಷಾಮ ಅಧ್ಯಯನಕ್ಕೆ ತಜ್ಞರ ತಂಡ: ಅರಣ್ಯ ಸಚಿವ ಖಂಡ್ರೆ



ಬೆಂಗಳೂರು: ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿನ ಜಲಕ್ಷಾಮ ಅಧ್ಯಯನಕ್ಕೆ ತಜ್ಞರ ತಂಡವನ್ನು ರಚಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

‘ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ನೆವಳಸೆ ಅರಣ್ಯ ವಿಭಾಗದಲ್ಲಿ ಹಳ್ಳಗಳು ಬರಿದಾಗಿರುವ ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಈ ಬಾರಿ ರಾಜ್ಯದಲ್ಲಿ ವಾಡಿಕೆಗಿಂತ ಅತಿ ಹೆಚ್ಚು ಮಳೆಯಾಗಿದೆ. ಆದರೆ, ಫೆಬ್ರುವರಿವರೆಗೆ ತುಂಬಿ ಹರಿಯಬೇಕಾದ ಹಳ್ಳಕೊಳ್ಳಗಳು ನವೆಂಬರ್ ಮುಗಿಯುವುದರ ಒಳಗಾಗಿ ಬತ್ತಿವೆ. ರಾಜ್ಯದ ನೀರಿನ ಸುಸ್ಥಿರತೆ ದೃಷ್ಟಿಯಿಂದ ಇದು ಆಘಾತಕಾರಿ ವಿಚಾರ’ ಎಂದಿದ್ದಾರೆ.

‘ಸಮೃದ್ಧ ಮಳೆಯ ಕಾಲದಲ್ಲೂ ಹಳ್ಳಗಳು ಬರಿದಾಗಿರುವುದು ಮುಂದಿನ ದಿನಗಳ ಜಲಕ್ಷಾಮದ ಸೂಚನೆ. ಈ ಕುರಿತು ಅಧ್ಯಯನ ನಡೆಸಲು ಅರಣ್ಯ, ಪರಿಸರ ಇಲಾಖೆ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಸಹಯೋಗದಲ್ಲಿ ತಜ್ಞರ ತಂಡ ರಚಿಸಬೇಕು. ತಂಡ ಪರಿಶೀಲನೆ ನಡೆಸಿ, ಪರಿಹಾರದ ಮಾರ್ಗೋಪಾಯಗಳನ್ನು ಒಳಗೊಂಡ ವರದಿ ನೀಡಲು ಮೂರು ತಿಂಗಳ ಗಡುವು ನಿಗದಿ ಮಾಡಬೇಕು’ ಎಂದು ಸೂಚಿಸಿದ್ದಾರೆ.

ಯತೀಂದ್ರ ವಿರುದ್ಧ ಕ್ರಮಕ್ಕೆ ಎಜಿಗೆ ಮನವಿ

ಬೆಂಗಳೂರು: ‘ನ್ಯಾಯಾಲಯಗಳು ಕೂಡಾ ಕೇಂದ್ರ ಸರ್ಕಾರದ ಮಾತುಗಳನ್ನು ಕೇಳುವ ಸ್ಥಿತಿ ತಲುಪಿವೆ ಎಂದು ಸಾರ್ವಜನಿಕ ಸಭೆಯಲ್ಲಿ ಆರೋಪ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಲು ಅನುಮತಿ ನೀಡಬೇಕು’ ಎಂದು ಕೋರಿ ವಕೀಲ ವಸಂತ ಕುಮಾರ್ ಅವರು ಅಡ್ವೊಕೇಟ್ ಜನರಲ್ ಅವರಿಗೆ ಮನವಿ ಮಾಡಿದ್ದಾರೆ.

ಈ ಕುರಿತಾದ ಮನವಿಯನ್ನು ಅವರ ಪರ ವಕೀಲೆ ಎಸ್.ಎಂ.ಅನಿತಾ ಪಾಟೀಲ್ ಶುಕ್ರವಾರ ಅಡ್ವೊಕೇಟ್ ಜನರಲ್ ಅವರಿಗೆ ಸಲ್ಲಿಸಿದ್ದಾರೆ. ‘ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆಯಲ್ಲಿ ಇದೇ 13ರಂದು ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಯತೀಂದ್ರ ಸಿದ್ದರಾಮಯ್ಯ, ‘ಕೇಂದ್ರ ಸರ್ಕಾರವು ತನಿಖಾ ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ, ಆದಾಯ ತೆರಿಗೆಯಂತಹ (ಐ.ಟಿ) ತನಿಖಾ ಸಂಸ್ಥೆಗಳನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡಿದೆ. ಕೋರ್ಟ್‌ಗಳು ಕೂಡಾ ಕೇಂದ್ರ ಸರ್ಕಾರದ ಮಾತನ್ನು ಕೇಳುವ ಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪ ಮಾಡಿದ್ದಾರೆ. ಈ ಹೇಳಿಕೆ ನ್ಯಾಯಾಂಗದ ಸ್ವತಂತ್ರತೆಯನ್ನು ಪ್ರಶ್ನಿಸುವಂತಿದೆ. ಆದ್ದರಿಂದ, ಯತೀಂದ್ರ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಲು ಅನುಮತಿ ನೀಡಬೇಕು’ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ನಾಳೆ ಕೆ–ಸೆಟ್, ವಿ.ವಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆ (ಕೆ-ಸೆಟ್) ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಗಳು ನ. 24ರ ಭಾನುವಾರದಂದು ನಡೆಯಲಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

41 ವಿಷಯಗಳಿಗೆ ನಡೆಯುವ ಕೆ-ಸೆಟ್ ಪರೀಕ್ಷೆಯನ್ನು 1.05 ಲಕ್ಷ ಅಭ್ಯರ್ಥಿಗಳು ತೆಗೆದುಕೊಂಡಿದ್ದಾರೆ. ಬೆಂಗಳೂರು, ಬೆಳಗಾವಿ, ಬಳ್ಳಾರಿ, ಬೀದರ್, ದಾವಣಗೆರೆ, ಧಾರವಾಡ, ಕಲಬುರಗಿ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ, ವಿಜಯಪುರ ಸೇರಿದಂತೆ 12 ಜಿಲ್ಲೆಗಳ 252 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯನ್ನು ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ತೆಗೆದುಕೊಂಡಿದ್ದಾರೆ. ಈ ಪರೀಕ್ಷೆ ಬೆಂಗಳೂರು ನಗರದ ಮೂರು ಕೇಂದ್ರಗಳಲ್ಲಿ ನಡೆಯಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಪರೀಕ್ಷೆಗಳು ನಡೆಯಲಿವೆ. ಒಮ್ಮೆಗೇ ಎರಡೂ ಪತ್ರಿಕೆಗಳ (ಪತ್ರಿಕೆ 1 ಮತ್ತು 2) ಪ್ರಶ್ನೆ ಪತ್ರಿಕೆಗಳನ್ನು ನೀಡಲಾಗುತ್ತದೆ.

ಅಭ್ಯರ್ಥಿಗಳು ಮೂರು ಗಂಟೆಯಲ್ಲಿ 100 ಅಂಕಗಳ ಸಾಮಾನ್ಯ ಜ್ಞಾನ ಮತ್ತು 200 ಅಂಕಗಳ ವಿಷಯವಾರು ಪತ್ರಿಕೆಗಳಿಗೆ ಉತ್ತರಿಸಬೇಕು ಎಂದು ಅವರು ಸೂಚನೆ ನೀಡಿದ್ದಾರೆ.



ಮಾರಾಟ... ಬಸವನಗುಡಿಯಲ್ಲಿ ಸೋಮವಾರದಿಂದ ಕಡಲೆಕಾಯಿ ಪರಿಷೆ ಆರಂಭವಾಗಲಿದ್ದು, ಶುಕ್ರವಾರದಿಂದಲೇ ತರಹೇವಾರಿ ಕಡಲೆಕಾಯಿ ಮಾರಾಟ ಶುರುವಾಗಿದೆ

ಟೇಬಲ್ ಟೆನಿಸ್ ಅನರ್ಘ್ಯಾಗೆ ಕಿರೀಟ

ಬೆಂಗಳೂರು: ಅನರ್ಘ್ಯಾ ಮಂಜುನಾಥ್ ಅವರು ಇಲ್ಲಿನ ಕೆನರಾ ಯೂನಿಯನ್‌ನ ಆಶ್ರಯದಲ್ಲಿ ನಡೆಯುತ್ತಿರುವ ಸಿವಿಎಲ್ ಶಾಸ್ತ್ರಿ ಸ್ಮಾರಕ ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಟೂರ್ನಿಯ ಮೊದಲ ದಿನವಾದ ಶುಕ್ರವಾರ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಅನರ್ಘ್ಯಾ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 4-2 (3-11, 9-11, 11-6, 11-8, 11-7, 11-9)ರಿಂದ ತೃಪ್ತಿ ಪುರೋಹಿತ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಅನರ್ಘ್ಯಾ 4-0 (11-5, 11-8, 11-5, 11-7)ಯಿಂದ ಪ್ರೇಕ್ಷಾ ತಿಲಾವತ್ ವಿರುದ್ಧ; ತೃಪ್ತಿ 4-0 (11-6, 11-6, 14-12, 11-9) ಯಿಂದ ಸಹನಾ ಎಚ್. ಮೂರ್ತಿ ಅವರ ವಿರುದ್ಧ ಗೆಲುವು ಸಾಧಿಸಿದ್ದರು.

ಅಂಧರ ಚೆಸ್: ತೆಲಂಗಾಣದ ಆಕಾಶ್‌ಗೆ ಪ್ರಶಸ್ತಿ

ಕಾರವಾರ: ತೆಲಂಗಾಣದ ಆಕಾಶ್ ವಡ್ಲಕೊಂಡ ಹೊನ್ನಾವರದ ಕಾಸರಕೋಡಿನಲ್ಲಿ ಗುರುವಾರ ಮುಕ್ತಾಯಗೊಂಡ ಮೂರು ದಿನಗಳ ರಾಷ್ಟ್ರ ಮಟ್ಟದ ಅಂಧರ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅವರು ಏಳು ಸುತ್ತುಗಳಿಂದ ಆರು ಪಾಯಿಂಟ್ಸ್ ಕಲೆಹಾಕಿದರು.

ರೋಟರಿ ಕ್ಲಬ್ ಆಶ್ರಯದಲ್ಲಿ ಅಖಿಲ ಭಾರತ ಚೆಸ್ ಫೆಡರೇಶನ್ ಸಹಯೋಗದೊಂದಿಗೆ ನಡೆದ ಈ ಚಾಂಪಿಯನ್‌ಷಿಪ್‌ನಲ್ಲಿ ಹತ್ತು ರಾಜ್ಯಗಳ 54 ಮಂದಿ ಭಾಗವಹಿಸಿದ್ದರು. ಮಹಾರಾಷ್ಟ್ರದ ವೇದ ನೀರಜ್ ಪೌರ್ (5.5 ಅಂಕ) ಎರಡನೇ ಸ್ಥಾನ ಪಡೆದರೆ, ತಮಿಳುನಾಡಿನ ಸ್ಯಾಮ್ ಪೇನಿಯಲ್ (5 ಅಂಕ) ಮೂರನೇ ಸ್ಥಾನ ಗಳಿಸಿದರು.

ಭೋವಿ ನಿಗಮದ ಅಕ್ರಮ: ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿಯಾಗಿದ್ದ ಜೀವಾ (35) ಅವರು, ‘ವಿಚಾರಣೆ ನೆಪದಲ್ಲಿ ಸಿಐಡಿ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿ ಪತ್ರ ಬರೆದಿಟ್ಟು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ವಕೀಲಿ ವೃತ್ತಿ ನಡೆಸುತ್ತಿದ್ದ ಆರೋಪಿ, ನಿಗಮದ ಫಲಾನುಭವಿಗಳಿಗೆ ವಿವಿಧ ಸಾಮಗ್ರಿಗಳನ್ನು ಪೂರೈಕೆ ಮಾಡಿದ್ದರು. ಹಾಗಾಗಿ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸಿಐಡಿ ಅಧಿಕಾರಿಗಳು ನೋಟಿಸ್ ಕಳುಹಿಸಿದ್ದರು. ಗುರುವಾರ ವಿಚಾರಣೆಗೆ ಹಾಜರಾಗಿ ಮನೆಗೆ ವಾಪಸ್ ಆಗಿದ್ದರು. ಶುಕ್ರವಾರ ಮನೆಯಲ್ಲೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸಿಐಡಿಯ ತನಿಖಾಧಿಕಾರಿ ಕನಕಲಕ್ಷ್ಮಿ ಅವರು ವಿಚಾರಣೆ ನೆಪದಲ್ಲಿ ಕಿರುಕುಳ ನೀಡಿದ್ದಾರೆ. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಪದ್ಮನಾಭ ನಗರದ ಜೀವಾ ಅವರ ನಿವಾಸದಲ್ಲಿ ದೊರೆತಿರುವ 11 ಪುಟಗಳ ಮರಣ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆತ್ಮಹತ್ಯೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಬನಶಂಕರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ಹಲವು ವರ್ಷಗಳಿಂದ ನಡೆದಿವೆ ಎನ್ನಲಾಗಿರುವ ಅವ್ಯವಹಾರಗಳ ಕುರಿತು ಸಿಐಡಿ ತನಿಖೆ ನಡೆಸುತ್ತಿದೆ. ₹87 ಕೋಟಿಗೂ ಹೆಚ್ಚು ಅಕ್ರಮ ನಡೆದಿರುವುದು ಈವರೆಗಿನ ತನಿಖೆಯಲ್ಲಿ ಪತ್ತೆಯಾಗಿದೆ. ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ, ಬಿ.ಕೆ. ನಾಗರಾಜಪ್ಪ, ಸಿಬ್ಬಂದಿ ಸುಬ್ಬಪ್ಪ ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು.

ನಿಗಮದ ಬ್ಯಾಂಕ್ ಖಾತೆಯಿಂದ ಜೀವಾ ಅವರ ಖಾತೆಗೂ ಹಣ ವರ್ಗಾವಣೆ ಆಗಿರುವುದು ತನಿಖೆಯಲ್ಲಿ ಪತ್ತೆ ಆಗಿತ್ತು. ಈ ಸಂಬಂಧ ತನಿಖೆ ಮುಂದುವರಿಸಿದ್ದ ಸಿಐಡಿ ಅಧಿಕಾರಿಗಳು, ಅವರನ್ನು ವಿಚಾರಣೆ ನಡೆಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

ಬಿಜೆಪಿ ನಾಯಕರಿಂದ ‘ನಮ್ಮ ಭೂಮಿ ನಮ್ಮ ಹಕ್ಕು’ ಪ್ರತಿಭಟನೆ

‘ವಕ್ಫ್ ಮಂಡಳಿ ರದ್ದು ಪಡಿಸಿ, ರೈತರನ್ನು ಉಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಮಂಡಳಿ ರದ್ದು ಮಾಡಬೇಕು ಮತ್ತು ರೈತರ ಜಮೀನಿನ ಪಹಣಿಯಲ್ಲಿ ಬರೆದ ವಕ್ಫ್ ಹೆಸರು ತೆಗೆಸಿ ಹಾಕಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

ರೈತರ ಜಮೀನು, ಮಠ, ಮಂದಿರಗಳು ಮತ್ತು ಸಾರ್ವಜನಿಕರ ಜಮೀನುಗಳನ್ನು ವಕ್ಫ್ ಆಸ್ತಿ ಎಂದು ನಮೂದಿಸಿರುವುದನ್ನು ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಬಿಜೆಪಿ ಹಮ್ಮಿಕೊಂಡಿದ್ದ ‘ನಮ್ಮ ಭೂಮಿ ನಮ್ಮ ಹಕ್ಕು’ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಬೌರಿಂಗ್ ಆಸ್ಪತ್ರೆಯ 2 ಎಕರೆ ಜಮೀನನ್ನೂ ವಕ್ಫ್ ಕಬಳಿಕೆ ಮಾಡಿತ್ತು. ನಾನು ಸಚಿವನಾಗಿದ್ದಾಗ ಆಸ್ಪತ್ರೆಯ ಆಸ್ತಿ ಉಳಿಸಿದ್ದೆ. ವಕ್ಫ್ ಮಂಡಳಿ ಈಗ ತಿಮಿಂಗಿಲದಂತೆ ಜಮೀನು ನುಂಗುತ್ತಿದೆ. ರೈತರು ಕಂಗಾಲಾಗಿ ತಮ್ಮ ದಾಖಲೆ ಪರಿಶೀಲನೆ ಮಾಡುತ್ತಿದ್ದಾರೆ’ ಎಂದರು.

‘ಸಿದ್ದರಾಮಯ್ಯ ಈಗ ಅಹಿಂದ ನಾಯಕರಾಗಿ ಉಳಿದಿಲ್ಲ. ಅವರೀಗ ಮುಸ್ಲಿಮರ ಚಾಂಪಿಯನ್ ಆಗಲು ಮುಂದಾಗಿದ್ದಾರೆ. ಮಂತ್ರಾಲಯ, ವಿಧಾನಸೌಧ, ರೈತರು ಮತ್ತು ಬಡವರ ಜಮೀನು ಉಳಿಸಲು ‘ಸೂಪರ್ ಮ್ಯಾನ್’ ಆಗಿ ಪ್ರಧಾನಿ ಮೋದಿ ಬರಲಿದ್ದಾರೆ. ಅವರು ತರಲಿರುವ ತಿದ್ದುಪಡಿ ಮಸೂದೆಯಿಂದ ಎಲ್ಲವೂ ನಿಯಂತ್ರಣಕ್ಕೆ ಬರಲಿದೆ’ ಎಂದು ಹೇಳಿದರು

ಸಂಸದ ಪಿ.ಸಿ. ಮೋಹನ್, ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ್,ಎಸ್.ಆರ್.ವಿಶ್ವನಾಥ್, ಎನ್. ಮುನಿರತ್ನ, ಸಿ.ಟಿ. ರವಿ ಇದ್ದರು.

‘ಅಂಬೇಡ್ಕರ್ ಕೊಟ್ಟ ಸಂವಿಧಾನದಲ್ಲಿ ವಕ್ಫ್ ಹೆಸರು ಇತ್ತಾ?’

‘ಡಾ.ಬಿ.ಆರ್. ಅಂಬೇಡ್ಕರ್ ಕೊಟ್ಟ ಸಂವಿಧಾನದಲ್ಲಿ ವಕ್ಫ್ ಹೆಸರು ಇತ್ತಾ? ಅದರಲ್ಲಿ ಎಲ್ಲೂ ವಕ್ಫ್ ಹೆಸರು ಇಲ್ಲ. ದುರಾದೃಷ್ಟವೆಂದರೆ ಈಗ ಭಾರತದ ಅರ್ಧ ಭಾಗದಷ್ಟು ಜಮೀನು ವಕ್ಫ್ ಹೆಸರಿನಲ್ಲಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಎಲ್ಲರ ಜಮೀನನ್ನೂ ವಕ್ಫ್ ಕಬಳಿಕೆ ಮಾಡುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

‘ದೇಶಕ್ಕೆ ಸ್ವಾತಂತ್ರ್ಯ ಬಂದ ಆರಂಭಿಕ ದಿನಗಳಲ್ಲಿ ಸುಮಾರು 10 ಸಾವಿರ ವಕ್ಫ್ ಆಸ್ತಿಗಳು ಇದ್ದವು. ಈಗ ವಕ್ಫ್ ಆಸ್ತಿಗಳ ಸಂಖ್ಯೆ 9.5 ಲಕ್ಷಕ್ಕೆ ಏರಿದೆ. 38 ಲಕ್ಷ ಎಕರೆ ಜಮೀನು ವಕ್ಫ್ ಹೆಸರಿಗೆ ವರ್ಗಾವಣೆ ಆಗಿದೆ. ಇದು ಆತಂಕದ ವಿಚಾರ. ಕಾನೂನುಬಾಹಿರವಾಗಿ ಕಾಯ್ದೆಗಳ ಮೂಲಕ ನಮ್ಮ ರೈತರ, ನಮ್ಮ ದೇವಸ್ಥಾನಗಳ, ಮಠಗಳ ಜಮೀನನ್ನು ವಕ್ಫ್ ಎಂದು ಘೋಷಿಸುತ್ತಿರುವುದೇ ನಮ್ಮ ತಕರಾರಿಗೆ ಕಾರಣ’ ಎಂದು ಹೇಳಿದರು.

‘ತಮಿಳುನಾಡಿನ ತಿರುಚಂದುರೈ ಎಂಬ ಇಡೀ ಊರೇ ವಕ್ಫ್ ಆಸ್ತಿ ಎಂದು ಪರಿವರ್ತಿಸಲಾಗಿದೆ. ನಮ್ಮಲ್ಲಿ ಚಾಲುಕ್ಯರು ನಿರ್ಮಿಸಿದ ಸೋಮೇಶ್ವರ ದೇಗುಲ, ಬೀರೇಶ್ವರ ಸ್ವಾಮಿ ದೇವಸ್ಥಾನಗಳನ್ನು ವಕ್ಫ್‌ಗೆ ಸೇರಿಸಲಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಲಿಂಗಾಯತರಿಗೆ ದಾನ ಕೊಟ್ಟ ಜಮೀನನ್ನೂ ವಕ್ಫ್‌ಗೆ ಸೇರಿಸಲಾಗುತ್ತಿದೆ. ಜನ ಎಚ್ಚೆತ್ತುಕೊಳ್ಳಬೇಕು’ ಎಂದು ಕೇಂದ್ರ ಸಚಿವರು ತಿಳಿಸಿದರು.

ಉಡುಪಿ ಅಷ್ಟಮಠದ ಜಾಗ ಹಾಗೂ ಆಳಂದ ತಾಲ್ಲೂಕಿನಲ್ಲಿ ಸಿದ್ದರಾಮಯ್ಯನವರ ಕುಲದೇವರಾದ ಬೀರಲಿಂಗೇಶ್ವರರ ಗುಡಿಯೂ ವಕ್ಫ್‌ಗೆ ಸೇರಿದ್ದು ಎನ್ನುತ್ತಿದ್ದಾರೆ

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

ನಗರದಲ್ಲಿ ಇಂದು

‘ಸಂಗಮ್’ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ಐ.ಬಿ. ವಿಜಯಲಕ್ಷ್ಮಿ, ಎಂ.ಆರ್. ದೊರೆಸ್ವಾಮಿ, ಆಯೋಜನೆ: ಎಸ್‌ಎಸ್‌ಎಂ ಪಬ್ಲಿಕ್ ಸ್ಕೂಲ್, ಸ್ಥಳ: ಒಪೆರಾ ಹೌಸ್, ಗೋಲ್ಡನ್ ಜ್ಯುಬಿಲಿ ಬ್ಲಾಕ್, ಪಿ.ಇ.ಎಸ್. ವಿಶ್ವವಿದ್ಯಾಲಯ, ಬನಶಂಕರಿ 3ನೇ ಹಂತ, ಬೆಳಿಗ್ಗೆ 9.30

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಅಂತರ ಬ್ಯಾಂಕ್ ಸಾಂಸ್ಕೃತಿಕ ಸ್ಪರ್ಧೆ: ಆಯೋಜನೆ ಹಾಗೂ ಸ್ಥಳ: ಕೆನರಾ ಬ್ಯಾಂಕ್ ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಳಿಗ್ಗೆ 9.30ರಿಂದ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಆಶಯ ನುಡಿ: ವಾಸು ಬಿ.ಎ., ರಾಜ್ಯೋತ್ಸವ ನುಡಿ: ಬೆಳಕೆರೆ ಲಿಂಗರಾಜಯ್ಯ, ಅತಿಥಿಗಳು: ಗಣೇಶ್ ರಾವ್ ಕೇಸರ್‌ಕರ್, ಸಂತೋಷ್, ಪ್ರಜ್ಞಾ ಮರಾಠೆ, ಮನೋಜ್ ರಾಗ್ಸಿ, ಧರಣಿ ಪ್ರವೀಣ, ಅಧ್ಯಕ್ಷತೆ: ಸೌಂದರ್ಯ ಪಿ. ಮಂಜಪ್ಪ, ಆಯೋಜನೆ ಹಾಗೂ ಸ್ಥಳ: ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಸೌಂದರ್ಯನಗರ, ಬೆಳಿಗ್ಗೆ 9.30

‘ಅವಂತ್ ಗ್ರೇಡ್’ ರಾಷ್ಟ್ರೀಯ ಸಮ್ಮೇಳನ: ‘ಡಿಜಿಟಲ್ ರೂಪಾಂತರ–ಆಧುನಿಕ ಜಗತ್ತಿನಲ್ಲಿ ಅವಕಾಶಗಳು ಮತ್ತು ಸವಾಲುಗಳು’ ವಿಷಯ ಮಂಡನೆ, ಮುಖ್ಯ ಅತಿಥಿ: ಟಿ.ಜಿ. ಸೀತಾರಾಂ, ಅಧ್ಯಕ್ಷತೆ: ಎನ್.ಆರ್. ಪಂಡಿತ್ ಆರಾಧ್ಯ, ಗೌರವ ಅತಿಥಿ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ಸಂತ ಸಮಾವೇಶ: ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ, ವಚನಾನಂದ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ವಿಶ್ವಪ್ರಿಯ ಸ್ವಾಮೀಜಿ, ಆಯೋಜನೆ: ವಿಶ್ವ ಹಿಂದೂ ಪರಿಷತ್, ಸ್ಥಳ: ವಾಸವಿ ಕನ್ವೆನ್ಷನ್ ಹಾಲ್, ವಿ.ವಿ. ಪುರ, ಬೆಳಿಗ್ಗೆ 10

ಎಐಡಿಸಿಒಸಿ ಬೆಳ್ಳಿ ಮಹೋತ್ಸವ ಸಮಾರಂಭ: ಅತಿಥಿಗಳು: ದಿನೇಶ್ ಗುಂಡೂರಾವ್, ಹರ್ಷ ಗುಪ್ತ, ಆಯೋಜನೆ: ಆಲ್ ಇಂಡಿಯಾ ಡ್ರಗ್ಸ್ ಕಂಟ್ರೋಲ್ ಆಫೀಸರ್ಸ್ ಕಾನ್ಫೆಡರೇಷನ್, ಸ್ಥಳ: ಲಲಿತ್ ಅಶೋಕ್ ಹೋಟೆಲ್, ಕುಮಾರಕೃಪ ರಸ್ತೆ, ಬೆಳಿಗ್ಗೆ 10

‘ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿ’ ತಾಂತ್ರಿಕ ಉಪನ್ಯಾಸ: ಜ್ಞಾನೇಂದ್ರ ಕುಮಾರ್, ಅರ್ಚನಾ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಸೀನಿಯರ್ ಎಂಜಿನಿಯರ್ಸ್ ಫೋರಂ, ಕಮಲಾನಗರ, ಬೆಳಿಗ್ಗೆ 11.30

‘ಸಿ.ವಿ. ರಾಮನ್ ಅವರಿಂದ ನೆಹರೂ ವರೆಗೆ’ ಸರಣಿ ಉಪನ್ಯಾಸ ಮಾಲೆ: ಉದ್ಘಾಟನೆ: ಪಳನಿ, ಅಧ್ಯಕ್ಷತೆ: ನಾ. ಶ್ರೀಧರ್, ಉಪನ್ಯಾಸ: ಎನ್.ಎಸ್. ಕುಮಾರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ ಗಾಂಧಿನಗರ ವಿಧಾನಸಭಾ ಕ್ಷೇತ್ರ ಘಟಕ, ಸ್ಥಳ: ಐಸಾಕ್ ನ್ಯೂಟನ್ ಇಂಗ್ಲಿಷ್ ಪ್ರೌಢಶಾಲೆ, ಕಾಟನ್‌ಪೇಟೆ ಕ್ರಾಸ್, ಮಧ್ಯಾಹ್ನ 2

‘ಪುನರ್ನವ ನಾದಸಿರಿ’ ಸಂಗೀತೋತ್ಸವ ಹಾಗೂ ನಾದ ಸರಸ್ವತಿ ಪ್ರಶಸ್ತಿ **ಪ್ರದಾನ:** ಸಾನ್ನಿಧ್ಯ: ದಿನೇಶ ಗುರೂಜಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಪ್ರಶಸ್ತಿ ಪ್ರದಾನ: ಹೊ.ನ. ರಾಘವೇಂದ್ರ, ಪ್ರಶಸ್ತಿ ಪುರಸ್ಕೃತರು: ಬಿ.ಕೆ. ಸುಮಿತ್ರ, ಆಯೋಜನೆ: ನಿನಾದ ಸಂಸ್ಕೃತಿ ಕಲಾಕೇಂದ್ರ, ಸ್ಥಳ: ಸಂಸ ಬಯಲು ರಮಗಮಂದಿರ, ಜೆ.ಸಿ. ರಸ್ತೆ, ಸಂಜೆ 4



ಬಿ.ಕೆ. ಸುಮಿತ್ರ

‘ಕರ್ನಾಟಕ ಇತಿಹಾಸದ ಪುಟಗಳು ಮತ್ತು ಐತಿಹಾಸಿಕ ತಾಣಗಳತ್ತ ನಮ್ಮ ಪಯಣ...’ ವಿಚಾರ ಸಂಕಿರಣ: ಉದ್ಘಾಟನೆ: ರಾಜೇಂದ್ರ ಕೆ.ವಿ., ವೆಂಕಟೇಶ್ ಎಂ.ವಿ., ಅತಿಥಿಗಳು: ಪ್ರೊ.ಎಸ್. ಚಂದ್ರಶೇಖರ್, ಆರ್. ಶಿವಕುಮಾರ್, ಜಿ.ಕೆ.ಶೆಟ್ಟಿ, ಎಸ್.ಕೆ.ಅರುಣಿ, ಎಸ್.ಜಿ. ಬಿರಾದರ್, ಅಧ್ಯಕ್ಷತೆ: ಆಶಾ ರಾಜೀವ್, ಆಯೋಜನೆ ಹಾಗೂ ಸ್ಥಳ: ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ: ಆಯೋಜನೆ ಹಾಗೂ ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 3

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ನಾಲ್ಕು ಪುಸ್ತಕಗಳ ಬಿಡುಗಡೆ: ಶತಾವಧಾನಿ ಆರ್. ಗಣೇಶ್, ಉಪಸ್ಥಿತಿ: ದಿವಾಕರ ಹೆಗಡೆ, ಎಂ.ಶ್ರೀನಿವಾಸನ್, ಎಚ್.ಆರ್. ವಿಶ್ವಾಸ, ಎಂ.ಜಿ. ವೇದವ್ಯಾಸ್, ಹರಿ ರವಿಕುಮಾರ್, ನಾ. ದಿನೇಶ್ ಹೆಗ್ಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್ತು, ಕೆಂಪೇಗೌಡನಗರ, ಸಂಜೆ 4



ಶತಾವಧಾನಿ ಆರ್. ಗಣೇಶ್

‘ಕನ್ನಡ ಸಂಸ್ಕೃತಿ ಪರ್ವ’ ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಅಧ್ಯಕ್ಷತೆ: ಎಂ.ಎಸ್. ಮೃತ್ಯುಂಜಯ, ಉದ್ಘಾಟನೆ: ಪಿನಾಕಪಾಣಿ, ಮುಖ್ಯ ಅತಿಥಿ: ಲೋಕೇಶ್ ಕುಮಾರ್, ಸ್ಥಳ: ಡಾ.ಜಿ.ಬಿ. ಪರಮಶಿವಯ್ಯ ಸುವರ್ಣ ಮಹೋತ್ಸವ ಸಭಾಂಗಣ, ಆರ್.ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳು, ರಾಜಾಜಿನಗರ, ಸಂಜೆ 4

ಪಿ. ಶೇಷಾದ್ರಿ ಸಿನಿಮಾವಲೋಕನ: ‘ಮೋಹನದಾಸ’ ಚಿತ್ರ ಪ್ರದರ್ಶನ, ‘ಮೂಕಜ್ಜಿಯ ಕನಸುಗಳು’ ಮಾತುಕತೆ: ವಿದ್ಯಾಶಂಕರ್, ಜಿ.ಎಸ್. ಭಾಸ್ಕರ್, ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 4ರಿಂದ

‘ಆಧುನಿಕ ಕನ್ನಡ ರಂಗಭೂಮಿ ದಿನೋತ್ಸವ’ ಸಂವಾದ: ‘ಕನ್ನಡ ರಂಗಭೂಮಿ–ಸಾಧ್ಯತೆ, ಸವಾಲು ಮತ್ತು ಬಿಕ್ಕಟ್ಟುಗಳು’, ವಿಷಯ ಮಂಡನೆ: ಪ್ರಕಾಶ್ ಗರುಡ, ಮಲ್ಲಿಕಾರ್ಜುನ ಕಡಕೋಳ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಸಕ್ಕರಿ ಬಾಳಾಚಾರ್ಯ ಶಾಂತಕವಿ ಟ್ರಸ್ಟ್, ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ ಚಾವಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4


ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ‘ಹಾಡು ಹೊಸ ಹಾಡು’ ಕನ್ನಡ ಪರ ಗೀತೆಗಳ ಗಾಯನ: ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಸ್ಥೆಗಳ ಒಕ್ಕೂಟ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ಪುಸ್ತಕ ಮಳಿಗೆ ಪಟ್ಟಾಂಗ, ಕನ್ನಡ ಲೇಖಕರ ಜತೆ ಮುಕ್ತ ಮಾತುಕತೆ: ಶ್ವೇತಾ ಶ್ರೀವಾತ್ಸವ್, ಸಹನಾ ವಿಜಯಕುಮಾರ್, ಎಂ.ಆರ್. ದತ್ತಾತ್ರಿ, ವಸುಧೇಂದ್ರ, ಜೋಗಿ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಸುಚೇತಾ ಕಲ್ಲೂರಾಯ, ಅತಿಥಿಗಳು: ಪುಷ್ಪಕ ಪ್ರಕಾಶ್, ಅಚ್ಯುತ ರಾವ್ ಪದಕಿ, ನಿಖಿಲಾ ಕಿರಣ್, ಆಯೋಜನೆ: ನಟನಂ ಇನ್‌ಸ್ಟಿಟ್ಯೂಟ್ ಆಫ್ ಡ್ಯಾನ್ಸ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.15

‘ಬೊಂಬೆ ಹಬ್ಬ’ ಮಕ್ಕಳ ಕಿರು ನಾಟಕೋತ್ಸವ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ನಾಟಕಗಳು: ವ್ಯಕ್ತಿತ್ವ, ಜೀವನಕ್ಕೆ ಕನ್ನಡಿ, ಆಯೋಜನೆ ಹಾಗೂ ಸ್ಥಳ: ವಿಜಯನಗರ ಬಿಂಬ, ವಿಜಯನಗರ 2ನೇ ಹಂತ, ಸಂಜೆ 6

ಪಂ. ಅರ್ಜುನಸಾ ನಾಕೋಡ ಸ್ಮರಣಾರ್ಥ ‘ಸ್ಮೃತಿ ಅಹೋರಾತ್ರಿ ಸಂಗೀತೋತ್ಸವ’: ಗಾಯನ–ವಾದನ ಕಛೇರಿ, ‘ಗಾನಬಾನು ಪಂ. ಅರ್ಜುನಸಾ ನಾಕೋಡ ಪ್ರಶಸ್ತಿ’: ಪಂ. ನರಸಿಂಹಲು ವಡವಾಟಿ, ಸನ್ಮಾನ: ಪಂ. ರಘುನಾಥ ನಾಕೋಡ, ಸಂಗೀತ ಕಛೇರಿ: ಪಂ. ಜಯತೀರ್ಥ ಮೇವುಂಡಿ, ಇಶಾನ್ ಘೋಷ್, ಬೃಜೇಶ್ವರ ಮುಖರ್ಜಿ, ಅಶ್ವಿನ್ ಶ್ರೀನಿವಾಸನ್, ಸುಮಾ ಸುಧೀಂದ್ರ, ಪ್ರಕಾಶ್ ಸೊಂಟಕ್ಕಿ, ರೇಣುಕಾ ನಾಕೋಡ, ಆಯೋಜನೆ: ರೇಣುಕಾ ಸಂಗೀತ ಸಭಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9ರಿಂದ



ನರಸಿಂಹಲು ವಡವಾಟಿ

ಗುಡ್ಡಪ್ಪ ಜೋಗಿಗೆ ‘ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ

‘ರಾಜಕೀಯ ಒತ್ತಡದಿಂದ ಮನೆಗಳಿಗೆ ಶ್ರೀರಾಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಒತ್ತಡದಿಂದಾಗಿ ಬುಡಕಟ್ಟು ಸಮುದಾಯದ ಮನೆಗಳು, ಪ್ರದೇಶಗಳಿಗೂ ಶ್ರೀರಾಮ ಬಂದಿದ್ದಾನೆ. ಇದರಿಂದಾಗಿ ಬುಡಕಟ್ಟು ಸಮುದಾಯದವರು ತಮ್ಮ ಮೂಲ ಸಂಸ್ಕೃತಿ, ಮನೆ ದೇವರನ್ನು ಮರೆತು ಬಿಡುತ್ತಿದ್ದಾರೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಕರ್ನಾಟಕ ಜಾನಪದ ಪರಿಷತ್ತು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಿನ್ನರಿ ಜೋಗಿ ಕಲಾವಿದ ಕೆ. ಗುಡ್ಡಪ್ಪ ಜೋಗಿ ಅವರಿಗೆ ‘ನಾಡೋಜ ಎಚ್. ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ.

ಈ ವೇಳೆ ಮಾತನಾಡಿದ ಬಿಳಿಮಲೆ, ‘ಜಾನಪದದ ಮೂಲ ಆಶಯವನ್ನು ಆಮೂಲಾಗ್ರವಾಗಿ ಬದಲಾಯಿಸುವಷ್ಟು ಹಿಂದುತ್ವ ಜನಪ್ರಿಯವಾಗಿದೆ. ಛತ್ತೀಸಗಢ, ಜಾರ್ಖಂಡ್ ಸೇರಿ ವಿವಿಧೆಡೆ ಬುಡಕಟ್ಟು ಸಮುದಾಯದವರು ಮೂಲ ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ. ಈ ಸಮುದಾಯದ ಮನೆಗಳಲ್ಲಿ ಶ್ರೀರಾಮನ ಆರಾಧನೆ ಹಿಂದೆ ಇರಲಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ರಾಜಕೀಯ ಕಾರಣಗಳಿಂದ ಶ್ರೀರಾಮ ಬಂದು ನೆಲೆಸುತ್ತಿದ್ದಾನೆ’ ಎಂದರು.

‘ಜಾನಪದ ಕಲೆಗಳನ್ನು ಉಳಿಸಲು ಹಾಗೂ ಮುಂದಿನ ತಲೆಮಾರಿಗೆ ಕೊಂಡೊಯ್ಯಲು ಕಾರ್ಯಕ್ರಮಗಳನ್ನು ರೂಪಿಸಿ, ಸರ್ಕಾರದ ನೆರವು ಪಡೆಯಬೇಕಿದೆ. ವಿವಿಧ ಪರಿಕರಗಳು ಹಾಳಾಗದಂತೆ ಕಾಪಾಡಿಕೊಳ್ಳಬೇಕಿದೆ. ಜಾನಪದಕ್ಕೆ ಸಂಬಂಧಿಸಿದಂತೆ ಡಿಜಿಟಲೀಕರಣ ಪ್ರಕ್ರಿಯೆ ನಡೆಯಬೇಕು’ ಎಂದು ಸಲಹೆ ನೀಡಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, ‘ಜಾನಪದದಲ್ಲಿ ಉತ್ತಮವಾದ ವಿಚಾರಗಳನ್ನು ಹೇಳಲಾಗಿದೆ. ಸ್ತ್ರೀಯರಿಗೆ ಮೊದಲ ಸ್ಥಾನ ನೀಡಲಾಗಿದೆ. ಜಾನಪದದ ಅಧ್ಯಯನಕ್ಕೆ ಸಮಯವನ್ನು ಮೀಸಲಿಡಬೇಕು. ಜಾನಪದವು ಬದುಕಿಗೆ ಕಾಂತಿಯನ್ನು ನೀಡಲಿದೆ’ ಎಂದು ಹೇಳಿದರು.

ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ, ‘ಜಾನಪದ ಕಲೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲಾಗುತ್ತಿದೆ. ಪರಿಷತ್ತಿಗೆ ಯುನೆಸ್ಕೊ ಮಾನ್ಯತೆ ದೊರೆತಿದೆ. ಕಲೆಯ ಉಳಿವು ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುದಾನ ಒದಗಿಸಬೇಕು’ ಎಂದರು.



ಕಾರ್ಯಕ್ರಮದಲ್ಲಿ ಗುಡ್ಡಪ್ಪ ಜೋಗಿ ಅವರಿಗೆ ‘ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪುರುಷೋತ್ತಮ ಬಿಳಿಮಲೆ, ಜಾನಪದ ಪರಿಷತ್ತಿನ ವ್ಯವಸ್ಥಾಪಕ ಟ್ರಸ್ಟಿ ಆದಿತ್ಯ ನಂಜರಾಜ್, ಹಿ.ಚಿ. ಬೋರಲಿಂಗಯ್ಯ ಮತ್ತು ಹಂ.ಪ. ನಾಗರಾಜಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಜೋಗಿ ಸಮುದಾಯದವರು ರಾಜ್ಯದಲ್ಲಿ 3 ಲಕ್ಷದಷ್ಟಿದ್ದಾರೆ. ಹಲವು ಉಪ ಪಂಗಡಗಳಿವೆ. ಈ ಸಮುದಾಯದವರಿಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಬೇಕು

ಕೆ. ಗುಡ್ಡಪ್ಪ ಜೋಗಿ ಕಿನ್ನರಿ ಜೋಗಿ ಕಲಾವಿದ

ಪ್ರಜಾವಾಣಿ ಶನಿವಾರ, 23 ನವೆಂಬರ್ 2024

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ





ಮಿತಿಗಳನ್ನು ನಿರ್ಮಿಸಿ

ಸಿನಿಮಾ, ಮನರಂಜನೆ, ಜಾಹಿರಾತು ಸೇರಿದಂತೆ ಬಣ್ಣದ ಜಗತ್ತಿನಲ್ಲಿ ಮಹಿಳೆಯರಷ್ಟೇ ಪುರುಷರ ಸಹಭಾಗಿತ್ವವೂ ಮುಖ್ಯ. ತಾಂತ್ರಿಕ ಕಲಾವಿದರು, ಮೇಕಪ್ ಕಲಾವಿದರು ಬಹುತೇಕ ಪುರುಷರೇ ಆಗಿರ್ತಾರೆ. ಎಲ್ಲಾ ಕಡೆ ಅವರನ್ನ ಹೊರಗಿಡುತ್ತ ಹೋಗಲಾಗದು. ದೌರ್ಜನ್ಯಕ್ಕೆ-ಕಿರುಕುಳಕ್ಕೆ ಅವರನ್ನು ದೂರ ಇಡುವುದಲ್ಲ, ಒಳಗೊಳ್ಳುವುದು ಮುಖ್ಯ. ಅವರಿಗೆ ಗೌರವ ಕೊಟ್ಟು, ಗೌರವ ತೆಗೆದುಕೊಳ್ಳುವುದನ್ನ ನಾವು ಕಲಿಬೇಕು. ಅವರೊಂದಿಗೆ ಕೆಲಸ ಮಾಡುವಾಗ ವೃತ್ತಿಪರ ಗಡಿಗಳನ್ನು ನಿರ್ಮಿಸುವುದು ಬಹಳ ಮುಖ್ಯ.

ಪುರುಷರೊಂದಿಗೆ ಕೆಲಸ ಮಾಡುವ ಸಂದರ್ಭ ಇದ್ದಾಗ ನಾನು ಅವರಿಗೆ ಅವರ ಗಡಿಗಳನ್ನು ಸ್ಪಷ್ಟವಾಗಿ ತೋರಿಸುತ್ತೇನೆ. ಅವರ ಪೂರ್ವಾಪರ ತಿಳಿದುಕೊಳ್ಳುತ್ತೇನೆ ಮತ್ತು ಅವರಿಗೆ ಅವರ ಮಿತಿ ಹಾಗೂ ಸ್ಥಾನದ ಅರಿವು ಮೂಡುವಂತೆ ವರ್ತಿಸುತ್ತೇನೆ. ಆಯ್ಕೆಗಳು ನಮ್ಮೆದುರೆ ಇರುವಾಗ ಪಲಾಯನ ಬೇಕಾಗಿಲ್ಲ.

ಪ್ರತಿಭಾ ಸಂಶಿಮಠ

ಕೆಲಸಗಳ ನಡುವೆ ಹೆಣ್ಣು ಗಂಡೆಂಬ ಗೋಡೆ ಬೇಡ

ಮನಸುಗಳು ಬದಲಾಗಲಿ...

ಸುಶೀಲಾ ಡೋಣೂರು

ಮಹಿಳೆಯರ ಬಟ್ಟೆ ಹೊಲಿಯುವ ಟೈಲರಿಂಗ್, ಕೂದಲು ಕತ್ತರಿಸುವ ಸಲೂನ್, ಅವರಿಗೆ ತರಬೇತಿ ನೀಡುವ ಜಿಮ್-ಸ್ವಿಮ್ಮಿಂಗ್‌ನಂತಹ ವೃತ್ತಿಗಳಲ್ಲಿ ಮಹಿಳೆಯರಿಗೆ ಸೇವೆ ನೀಡುವ ಕೆಲಸಗಳಿಂದ ಪುರುಷರನ್ನು ದೂರವಿಡಬೇಕು...

ಇದು ಉತ್ತರ ಪ್ರದೇಶದ ಮಹಿಳಾ ಆಯೋಗ ಸಲ್ಲಿಸಿದ ಪ್ರಸ್ತಾವನೆ. ಇಂತಹ ವೃತ್ತಿಗಳಿಂದ ಪುರುಷರನ್ನು ದೂರ ನಿಲ್ಲಿಸುವ ಮೂಲಕ ಲೈಂಗಿಕ ಕಿರುಕುಳಗಳನ್ನು ತಪ್ಪಿಸಬಹುದು ಎನ್ನುತ್ತದೆ ಆಯೋಗ. ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯುಪಿ ಮಹಿಳಾ ಆಯೋಗ ಸಲ್ಲಿಸಿರುವ ಈ ಪ್ರಸ್ತಾವನೆ ಇದೀಗ ಪರ-ವಿರೋಧ ಚರ್ಚೆಗಳಿಗೆ ಗ್ರಾಸವಾಗಿದೆ.
ಹೆಣ್ಣುಮಕ್ಕಳ ಮೇಲೆ ಲೈಂಗಿಕ ಕ್ರೌರ್ಯ ಎಸಗುವಂತಹ ಹಲವು ಪ್ರಕರಣಗಳು ಇತ್ತೀಚಿಗೆ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ವರದಿಯಾಗಿವೆ. ಮಹಿಳೆಯರ ಅತ್ಯಾಚಾರ, ಕೊಲೆ, ಅಪಹರಣ ಪ್ರಕರಣಗಳಲ್ಲಿ ಉತ್ತರ ಪ್ರದೇಶ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಎನ್‌ಸಿಆರ್‌ಬಿ ಅಂಕಿಅಂಶಗಳು ದೃಢಪಡಿಸಿವೆ. ವಿದ್ಯಾರ್ಥಿನಿಯ ಮೇಲೆ ಶಾಲೆಯ ವಾಹನ ಚಾಲಕ ನಡೆಸಿದ ಅತ್ಯಾಚಾರ, ಮತ್ತೊಬ್ಬ ಬಾಲಕಿಯ ಮೇಲೆ ಟೈಲರ್ ಎಸಗಿದ್ದ ಅತ್ಯಾಚಾರ, ಜಿಮ್‌ನಲ್ಲಿ ತರಬೇತುದಾರನೇ ಮಹಿಳೆಯೊಬ್ಬರನ್ನು ಹತ್ಯೆ ಮಾಡಿದ್ದ ಘಟನೆ... ಇಂತಹ ಪ್ರಕರಣಗಳು ಯುಪಿಯಲ್ಲಿ ವರದಿಯಾಗಿವೆ. ಇಂತಹ ಪ್ರಕರಣಗಳನ್ನು ತಡೆಯಲು ಮಹಿಳೆಯರಿಗೆ ಸೇವೆ ಒದಗಿಸುವ ವೃತ್ತಿಗಳಿಂದ ಪುರುಷರನ್ನು ದೂರ ಇಡಬೇಕು ಎಂದು ಆಯೋಗಕ್ಕೆ ಅನಿಸಿದೆ. ಅಲ್ಲಿನ ಪರಿಸ್ಥಿತಿಗೆ ಇದು ಅಗತ್ಯ ಕೂಡ ಎನ್ನುವವರೂ ಇದ್ದಾರೆ.
ಆದರೆ, ಮಹಿಳೆಯರ ಮೇಲಿನ ಅಪರಾಧ ಕೃತ್ಯಗಳು ಹೆಚ್ಚಲು ಮುಖ್ಯವಾಗಿ ಹೆಣ್ಣನ್ನು ನೋಡುವ ಗಂಡಿನ ಮನಸ್ಥಿತಿ ಹಾಗೂ ದೃಷ್ಟಿಕೋನ ಕಾರಣ. ಮಹಿಳೆಯರ ಮೇಲೆ ದೌರ್ಜನ್ಯ-ಅತ್ಯಾಚಾರಗಳು ಯಾವುದೇ ಒಂದು ವೃತ್ತಿಯಲ್ಲಿರುವವರಿಂದ ಆಗುವಂತದ್ದಲ್ಲ. ಅದೊಂದು ಮನಸ್ಥಿತಿ. ಅಲ್ಲಿ ಬದಲಾವಣೆ ತರಬೇಕು ಎನ್ನುವುದು ಪ್ರಗತಿಪರ ಚಿಂತಕರ ವಾದ.
ಇಂತಹ ಹೇಳಿಕೆ ಮಹಿಳೆಯರಲ್ಲಿ ಅಭದ್ರತೆಯ ಭಾವ ಹುಟ್ಟಿಸುವ ಜೊತೆಗೆ ಆ ವೃತ್ತಿಯಲ್ಲಿರುವ ಪುರುಷರ ಘನತೆಗೂ ಧಕ್ಕೆ ತರುವಂಥದ್ದು ಎನ್ನುತ್ತಾರೆ ಅವರು.
ಪರಿಹಾರ ಬೇಕಾಗಿರುವುದು ಮುಖ್ಯವಾಗಿ ವ್ಯವಸ್ಥೆಯಲ್ಲಿ ಹಾಗೂ ಮನಸ್ಥಿತಿಯಲ್ಲಿ. ಜತೆಗಿರುವ, ಜತೆಗೆ ಕೆಲಸ ಮಾಡುವ, ವ್ಯವಹಾರಗಳಲ್ಲಿ ಸಹಭಾಗಿಗಳಾಗುವ, ಜೊತೆಗೆ ಪ್ರಯಾಣಿಸುವ ಹೆಣ್ಣುಮಕ್ಕಳನ್ನು ಗೌರವದಿಂದ-ಆದರದಿಂದ ಕಾಣುವ ಸಂವೇದನೆಯನ್ನು ಬೆಳೆಸಬೇಕು. ಉದ್ಯೋಗ ಅಥವಾ ವ್ಯವಹಾರದಲ್ಲಿ ತೊಡಗಿರುವ ಹೆಣ್ಣುಮಕ್ಕಳನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಪುರುಷರ ಜೊತೆಗೆ, ಪುರುಷರ ಒಡಗೂಡಿ ಸಮಾಧಾನದಿಂದ, ದೃಢವಾಗಿ ಹಾಗೂ ಸುರಕ್ಷಿತವಾಗಿ ಹೆಣ್ಣುಮಕ್ಕಳು ಕೆಲಸ ಮಾಡುವ ವಾತಾವರಣ ನಿರ್ಮಾಣ ಮಾಡಬೇಕು. ಇದು ಹೆಣ್ಣು ಮತ್ತು ಗಂಡಿನ ನಡುವಿನ ಸಂಪರ್ಕವನ್ನು ಕಡಿತಗೊಳಿಸುವುದರಿಂದ ಆಗುವಂಥದ್ದಲ್ಲ.
ಟೈಲರಿಂಗ್-ಸಲೂನ್‌ನಂತಹ ಸೇವೆಗಳನ್ನು ಮಹಿಳೆಯರು, ಮಹಿಳೆಯರಿಂದಲೇ ಪಡೆಯಬಹುದಾದ ಆಯ್ಕೆಗಳೂ ಲಭ್ಯ ಇವೆ. ಆದ್ದರಿಂದ ಪುರುಷರನ್ನು ಅಂತಹ ವೃತ್ತಿಗಳಿಂದ ಹೊರಗಿಡುವ ಬದಲು, ಮಹಿಳೆಯರ ಸೇವೆ ಮಾಡುವ ವೃತ್ತಿಯಲ್ಲಿರುವವರು, ಮಹಿಳೆಯರೊಂದಿಗೆ ಕೆಲಸ ಮಾಡುವವರು ಮಹಿಳಾ ಸಹೋದ್ಯೋಗಿಗಳೊಂದಿಗೆ, ಮಹಿಳಾ ಗ್ರಾಹಕರೊಂದಿಗೆ ಹೇಗೆ ವರ್ತಿಸಬೇಕು ಎನ್ನುವ ಸಂವೇದನೆಯನ್ನು ಬೆಳೆಸುವುದು ಈಗಿನ ತುರ್ತು.
ಕಚೇರಿಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಬಸ್ಸು-ರೈಲು-ವಿಮಾನ ಪ್ರಯಾಣಗಳಲ್ಲಿ ಮಹಿಳೆಯರನ್ನು ಹೇಗೆ ಕಾಣಬೇಕು, ಹೇಗೆ ನಡೆಸಿಕೊಳ್ಳಬೇಕು ಮತ್ತು ಹೇಗೆ ನಡೆದುಕೊಳ್ಳಬೇಕು ಎನ್ನುವ ಪ್ರಜ್ಞೆಯನ್ನು ಪುರುಷರಲ್ಲಿ ಬೆಳೆಸಬೇಕು. ಅಷ್ಟೇ ಅಲ್ಲ, ಅಗೌರವಕ್ಕೆ, ಅನಾದಾರಕ್ಕೆ, ಕಿರುಕುಳಕ್ಕೆ ಈಡಾಗದಂತೆ ಎಚ್ಚರಿಕೆಯಿಂದ ಇರುವ, ಅಂತಹ ಸಂದರ್ಭ ಬಂದಾಗ ಜೋರಾಗಿ ಪ್ರಶ್ನಿಸುವ, ಪ್ರತಿರೋಧಿಸುವ ಮನೋಬಲವನ್ನು ಬೆಳೆಸಿಕೊಳ್ಳುವುದು ಮಹಿಳೆಯರ ಜವಾಬ್ದಾರಿಯೂ ಹೌದು ಎನ್ನುವ ದನಿಗಳೇ ಹೆಚ್ಚು ಢಾಳಾಗಿ ಕೇಳಿ ಬರುತ್ತಿವೆ.

> ಮಹಿಳೆಯರಿಗೆ ಸೇವೆ ನೀಡುವ ವೃತ್ತಿಗಳಿಂದ ಪುರುಷರನ್ನು ದೂರವಿಡಬೇಕು ಎಂದು ಉತ್ತರ ಪ್ರದೇಶ ಮಹಿಳಾ ಆಯೋಗ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಮನಸು-ಮನಸ್ಥಿತಿ, ಆಲೋಚನೆ-ಗ್ರಹಿಕೆ ಹಾಗೂ ವ್ಯವಸ್ಥೆಗಳಲ್ಲಿ ಬದಲಾವಣೆ ತರುವ ಬದಲು ಕೆಲಸಗಳ ನಡುವೆ ಗೋಡೆ ಕಟ್ಟುವುದು ಪರಿಹಾರವೇ ಎನ್ನುವ ಬಗ್ಗೆ ಇದೀಗ ಪರ-ವಿರೋಧ ಚರ್ಚೆಗಳು ಶುರುವಾಗಿವೆ...



ಆಯೋಗ ಪ್ರಬುದ್ಧತೆಯಿಂದ ನಡೆದುಕೊಳ್ಳಲಿ

ಮಹಿಳೆಯರಿಗೆ ಸೇವೆ ನೀಡುವ ಕೆಲವು ವೃತ್ತಿಗಳಲ್ಲಿ ಪುರುಷರು ಇರಬಾರದು ಎಂದು ಹೇಳಿರುವ ಆಯೋಗವು ಈ ವೃತ್ತಿಗಳಲ್ಲಿ ಪಾರಂಪರಿಕವಾಗಿ ಕೆಲಸ ಮಾಡುತ್ತಿರುವ ಸಭ್ಯ ಪುರುಷರನ್ನೂ ಅನುಮಾನಿಸಿದೆಯಲ್ಲದೆ, ಮತ್ತೇನನ್ನೂ ಸಾಧಿಸಿಲ್ಲ. ಈ ಮೂಲಕ ಈಗಾಗಲೇ ಪುರುಷರಿಗೆ ಮಹಿಳೆಯರಿಗೆಂದು ಇರುವ ಸಿದ್ಧಮಾದರಿಯ ವೃತ್ತಿಗಳನ್ನೂ ಇದು ಪ್ರೋತ್ಸಾಹಿಸುತ್ತಿದೆ. ಸಮಾಜದಲ್ಲಿ ಇನ್ನೂ ತಾರತಮ್ಯವನ್ನು ಹೆಚ್ಚಿಸುವುದಲ್ಲದೆ, ಜೊತೆಗೂಡಿ ನಡೆಯಬೇಕಾದ ಪುರುಷ ಮಹಿಳೆಯರು ಪರಸ್ಪರ ಅನುಮಾನಿಸುವಂತೆ ಮಾಡುತ್ತದೆ. ಮಹಿಳಾ ದೌರ್ಜನ್ಯಕ್ಕೆ ಮೂಲ ಕಾರಣ, ಅದನ್ನು ತಡೆಗಟ್ಟಲ್ಲಿನ ವೈಫಲ್ಯ, ಇವುಗಳನ್ನು ಕುರಿತು ಯೋಚಿಸದೆ, ಮಹಿಳೆಯರಿಗೆ ಸೇವೆ ನೀಡುವ ಕೆಲವು ವೃತ್ತಿಗಳಲ್ಲಿ ಪುರುಷರನ್ನು ನಿಷೇಧಿಸಲು ಸಲಹೆ ನೀಡಿರುವುದರ ಹಿಂದೆ ಕೇವಲ ಸಂಕುಚಿತ ಮನಸ್ಸುಗಳಿವೆ.

ದಶಕಗಳ ಮಹಿಳಾ ಹೋರಾಟದ ಫಲವಾಗಿ ಮಹಿಳಾ ಆಯೋಗದ ರಚನೆಯಾಗಿದ್ದು, ಅದರ ಕಾರ್ಯವೈಖರಿಯ ಬಗ್ಗೆ ಹಲವಾರು ತಕರಾರುಗಳು ಇರುವ ಈ ಹೊತ್ತಿನಲ್ಲಿ ಈ ರೀತಿಯ ಅಸಂಬದ್ಧ ಶಿಫಾರಸುಗಳು ಆಯೋಗದ ಮೇಲಿನ ಭರವಸೆಯನ್ನು ಇನ್ನೂ ಕಡಿಮೆ ಮಾಡುತ್ತವೆ. ಮಹಿಳೆಯರ ಮೇಲಿನ ದೌರ್ಜನ್ಯ ತಡೆ, ಅವರ ಸುರಕ್ಷತೆಗೆಂದೇ ಇರುವ ಆಯೋಗಗಳ ಆಲೋಚನೆ, ಮನಸ್ಥಿತಿ, ಕಾರ್ಯವೈಖರಿ ಬದಲಾಗಬೇಕಿದೆ. ಆಯೋಗ ಪ್ರಬುದ್ಧತೆಯಿಂದ ನಡೆದುಕೊಳ್ಳಲಿ.

ಪ್ರತಿಭಾ ಆರ್
ಅಧ್ಯಕ್ಷರು, ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

ಸಮಸ್ಯಾತ್ಮಕ ಪರಿಹಾರ



ಯುಪಿಯಲ್ಲಿನ ವಾತಾವರಣ ಹಾಗೂ ಅಲ್ಲಿನ ಸಮಸ್ಯೆಗಳ ಸ್ವರೂಪ ಭಿನ್ನಾವಾಗಿರುವುದೇನೋ ಸತ್ಯ. ಆದರೆ ಅವರು ಈಗ ಮಾತನಾಡುತ್ತಿರೋದು ಸಮಸ್ಯಾತ್ಮಕ ಪರಿಹಾರ ಅಂತ ನನಗನಿಸುತ್ತೆ. ಸ್ವಸ್ಥ ಸಮಾಜ ನಿರ್ಮಾಣ ಮಾಡುವ ಆಲೋಚನೆ ಇದಲ್ಲ. ಇದು ಸಾಮಾಜಿಕ ಚಲನೆಗೆ ವಿರುದ್ಧವಾದ ಸಲಹೆ.

ನಮಗೆ ಬೇಕಾಗಿರುವುದು ಸಮಾಜವನ್ನು ಕಟ್ಟುವ, ಮನಸುಗಳನ್ನು ಬೆಸೆಯುವ ಪರಿಹಾರಗಳೆ ಹೊರತು ಸಮಾಜವನ್ನು ಒಡೆಯುವ, ಮನಸುಗಳನ್ನು ಕುಗ್ಗಿಸುವ ಪರಿಹಾರಗಳಲ್ಲ. ಸಮಾಜದಲ್ಲಿ ಹೆಣ್ಣು ಮಕ್ಕಳ ಸ್ಥಾನವನ್ನು ಗೌರವಿಸುವ ಕಾಪಾಡುವ ಬಗ್ಗೆ ಅರಿವು ಮೂಡಿಸುವ ಶೈಕ್ಷಣಿಕ ಪ್ರಯತ್ನಗಳಾಗಬೇಕೆ ಹೊರತು, ಹೀಗೆ ಸಮಾಜವನ್ನು ವಿಭಾಗಿಸುವುದರಿಂದ ಪರಿಹಾರ ಸಿಗದು.

ಮುಂದೇನು? ಹೆಣ್ಣು ಮಕ್ಕಳನ್ನು ಮಹಿಳಾ ಡಾಕ್ಟರುಗಳೆ ನೋಡಬೇಕು, ಶಿಕ್ಷಕಿಯರೇ ಪಾಠ ಮಾಡಬೇಕು ಅಂತ ಮಾಡಲು ಸಾಧ್ಯವೇ? ಈ ಬಗೆಯ ಆಲೋಚನೆಯಿಂದ ವ್ಯವಸ್ಥೆ ಬಿಗಡಾಯಿಸುವುದಿಲ್ಲವೇ?

ಪ್ರೀತಿ ನಾಗರಾಜ್, ಪತ್ರಕರ್ತೆ



ಅಂತರಂಗ



ಅಕ್ಷರ ದಾಮ್ಲೆ

ನಮ್ಮನ್ನು ನಾವು ಸಂತೈಸಿಕೊಳ್ಳುವುದು ಹೇಗೆ?

- **ನನಗೆ ಆಗಾಗ ವಿಪರೀತ ಎನ್ನುವಷ್ಟು ಸಿಟ್ಟು ಬರುತ್ತದೆ. ಕಾರಣಗಳು ತಿಳಿದಿವೆ. ಇದರಿಂದ ಬೇಸತ್ತು ಆಗಾಗ ಸತ್ತು ಹೋಗಿಬಿಡಬೇಕೆಂಬ ಯೋಚನೆಗಳು ಬರುತ್ತವೆ. ಆದರೆ ಸಾಯಲು ಸುತರಾಂ ಇಷ್ಟವಿಲ್ಲ. ಯೋಗ, ಧ್ಯಾನ ಯಾವುದರಲ್ಲಿಯೂ ಸಂಪೂರ್ಣವಾಗಿ ತೊಡಗಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನನ್ನನ್ನು ನಾನು ಸಂತೈಸಿಕೊಳ್ಳಲು ಇರುವ ಪರಿಹಾರವೇನು ಸರ್?**
ಶ್ರೇಯಾ, ಗೃಹಿಣಿ

ಈ ಸಮಸ್ಯೆಯಲ್ಲಿ ಇರುವ ಒಂದು ಸಂಪನ್ಮೂಲವೆಂದರೆ ನಿಮಗೆ ನಿಮ್ಮ ಕೋಪದ ಮೂಲ ತಿಳಿದಿರುವುದು. ಎಷ್ಟೋ ಬಾರಿ ನಮಗೆ ಬರುವಂತಹ ಕೋಪಕ್ಕೆ, ಭಯಕ್ಕೆ ಅಥವಾ ಇನ್ಯಾವುದೇ ಋಣಾತ್ಮಕ ಚಿಂತನೆಗಳಿಗೆ ಮೂಲ ಕಾರಣಗಳೇ ತಿಳಿದಿರುವುದಿಲ್ಲ. ಹಾಗಾದಾಗ ಪರಿಹಾರವನ್ನು ಕಂಡುಕೊಳ್ಳುವುದು ಸುಲಭವಲ್ಲ. ನಿಮಗೆ ಕಾರಣಗಳು ತಿಳಿದಿವೆ ಮತ್ತು ಆ ಕಾರಣಗಳು ಹತಾಶೆಯ ಭಾವವನ್ನು ಹೆಚ್ಚಿಸಿವೆ. ಇಲ್ಲಿ ನೀವು ಉಪಯೋಗಿಸಬೇಕಿರುವುದು ನಿಮ್ಮ ಜಾಣ್ಮೆ. ನಿಮ್ಮ ಜೀವನದಲ್ಲಿರುವ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಏನಾದರೂ ಉಪಾಯವಿದೆಯೇ ಎಂಬುವುದನ್ನು ಹುಡುಕುವುದು. ಪರಿಹಾರವನ್ನು ಹುಡುಕುವುದಕ್ಕೆ ಒಂದು ಸುಲಭ ಉಪಾಯವೆಂದರೆ, ಸಮಸ್ಯೆಯನ್ನು ಕೂಲಂಕಷವಾಗಿ ಅವಲೋಕಿಸುವುದು. ಹೇಗೆ ಅವಲೋಕಿಸುವುದು ಎಂಬುವುದಕ್ಕೆ ಉದಾಹರಣೆಯಾಗಿ ಈ ಕಥೆಯನ್ನು ಹೇಳುತ್ತೇನೆ. .

ತಂದೆಯೊಬ್ಬ ತನ್ನ ಮಗನ ಬಳಿ ಬಿದಿರನ್ನು ಕಡಿಯುವುದಕ್ಕೆ ಹೇಳಿದ. ಬಿದಿರಿನ ಹಿಂಡಿಲಿನಲ್ಲಿ ಸುತ್ತಲೂ ಒಂದಷ್ಟು ಮುಳ್ಳುಗಳಿದ್ದವು. ತಂದೆ ಹೇಳಿದ ಕೆಲಸವನ್ನು ಪೂರೈಸಲು ಮಗ ಬಿದಿರಿನ ಕಾಂಡಕ್ಕೇ ಕತ್ತಿಯಿಂದ ಏಟುಕೊಡುವ ಪ್ರಯತ್ನ ಮಾಡಿದ. ಹಾಗೆ ಮಾಡಿದರೆ ಕೆಲಸ ಬೇಗ ಮುಗಿಯುತ್ತದೆ ಎಂದು ಅಂದುಕೊಂಡ. ಸುತ್ತಲೂ ಇದ್ದ ಮುಳ್ಳುಗಳು ಆತನನ್ನು ಮುತ್ತಿಕೊಂಡು ಚುಚ್ಚಿ ಅದರಿಂದ ಹೊರಗೆ ಬರುವುದೇ ಕಷ್ಟವಾಯಿತು. ಈ ಅಸಹಾಯಕತೆಯನ್ನು ತಂದೆಗೆ ಬಂದು ಹೇಳಿದ. ಆವಾಗ ಆ ತಂದೆ ತನ್ನ ಮಡದಿಯ ಬಳಿ ಮಗನಿಗೆ ಬಿಸಿ ಬಿಸಿಯಾದ ಗಂಜಿಯನ್ನು ತಟ್ಟೆಯಲ್ಲಿ ಹಾಕಿಕೊಡು ಎಂದು ಸೂಚಿಸಿದ. ಆಕೆಯೂ ಹಾಗೆಯೇ ಮಾಡಿದಳು. ಆವಾಗ ಮಗ ತಟ್ಟೆಯ ಬದಿಯಿಂದ ನಿಧಾನವಾಗಿ ಗಂಜಿಯ ಬಿಸಿಯನ್ನು ಆರಿಸುತ್ತಾ, ನಿಧಾನವಾಗಿ ಕುಡಿದು ಮುಗಿಸಿದ. ಆಗ ತಂದೆ , ಗಂಜಿ ಬಿಸಿ ಇದ್ದರೂ ಹೇಗೆ ಕುಡಿದು ಮುಗಿಸಿದೆ ಅಂತ ಕೇಳಿದರು. ಅದಕ್ಕೆ ಉತ್ತರವಾಗಿ 'ಬದಿಯಿಂದ ನಿಧಾನವಾಗಿ ಆರಿಸಿ ಕುಡಿದು ಮುಗಿಸಿದೆ' ಎಂದ. ಆವಾಗ ತಂದೆ ಹೇಳಿದ, 'ಇದೇ ರೀತಿ ಬಿದಿರನ್ನೂ ಕಡಿಯಬಹುದಿತ್ತಲ್ಲಾ? ನಿಧಾನವಾಗಿ ಬದಿಯಲ್ಲಿದ್ದ ಮುಳ್ಳುಗಳನ್ನು ನಿವಾರಿಸಿಕೊಂಡು ಕಾಂಡದ ಮೇಲೆ ಕತ್ತಿಯಿಂದ ಏಟು ಹಾಕಿದ್ದರೆ ಕಡಿಯುವುದು ಸುಲಭವಾಗುತ್ತಿತ್ತು. ಬದಲಾಗಿ ನೀನು ನೇರವಾಗಿ ಕಾಂಡಕ್ಕೇ ಕೈ ಹಾಕಿದ್ದೆ. ಹಾಗಾಗಿ ಮೈಯೆಲ್ಲಾ ಚುಚ್ಚಿಸಿಕೊಳ್ಳಬೇಕಾಯಿತು'. ಮಗನಿಗೆ ತನ್ನ ತಪ್ಪಿನ ಅರಿವಾಯ್ತು. ಅದೇ ರೀತಿ, ಸಮಸ್ಯೆಯ ಮೂಲಕ್ಕೆ ನೇರವಾಗಿ ಕೈ ಹಾಕದೇ ಸುತ್ತಲೂ ಇರುವಂತಹ ಬಿರುಕುಗಳನ್ನು ಸರಿಪಡಿಸುತ್ತಾ ಹೋಗಿ. ಆವಾಗ ಸಮಸ್ಯೆಯ ಮೂಲಕ್ಕೆ ಹೋಗುವುದು ಸುಲಭವಾಗುತ್ತದೆ. ಕೋಪಕ್ಕೆ ಕಾರಣವಾಗುತ್ತಿರುವ ಮೂಲವನ್ನು ಸರಿಪಡಿಸಿಕೊಳ್ಳಿ. ಅಸಹಾಯಕತೆಯಿಂದ ಬೇಸತ್ತು ಋಣಾತ್ಮಕ ಚಿಂತನೆಗಳನ್ನು ಮಾಡಬೇಡಿ. ಸಮಸ್ಯೆಗಳಿಗಿಂತಲೂ ಜೀವನ ಬಹಳ ದೊಡ್ಡದು. ಸಮಸ್ಯೆಗಳು ಬರುತ್ತವೆ, ಹೋಗುತ್ತವೆ. ಕೆಲವೊಂದು ಬಾರಿ ಅವುಗಳು ಹತಾಶೆ ಕೊಡಬಹುದೇ ಆದರೂ, ಅವುಗಳ ಕೈಯಲ್ಲಿ ನಮ್ಮ ಜೀವವನ್ನು ಕೊಡಬಾರದು. ಪರಿಹಾರ ಕಂಡುಕೊಂಡ ಮೇಲೆ ಜೀವನ ಹಗುರವಾಗುತ್ತದೆ. ಮಾತ್ರವಲ್ಲ ಸಂತೋಷವೂ ನೆಲೆಮಾಡುತ್ತದೆ.

ಗರ್ಭಿಣಿಯರಲ್ಲಿ ಮಧುಮೇಹ

ಗರ್ಭಾವಸ್ಥೆಯಲ್ಲಿ ವಹಿಸಬೇಕಾದ ಎಚ್ಚರ
ಹೆರಿಗೆ ನಂತರ ನಿರ್ವಹಣೆಗೆ ಸಲಹೆ

ಡಾ. ಅದಿತಿ ಕುಲಕರ್ಣಿ

ಕಾಳಜಿ

ಗರ್ಭಿಣಿಯರಿಗೂ ನಾನಾ ಕಾರಣಗಳಿಗೆ ಮಧುಮೇಹ ಬರಬಹುದು. ಇದರಿಂದ ತಾಯಿ ಹಾಗೂ ಮಗುವಿಗೆ ಹಲವು ರೀತಿಯ ತೊಂದರೆಗಳು ಎದುರಾಗಬಹುದು.

- **ಏನಿದು ಗೆಸ್ಟೇಷನಲ್ ಡಯಾಬಿಟಿಸ್ ?**

ಇದನ್ನು ಗರ್ಭಧಾರಣೆಯ ಸಂದರ್ಭದಲ್ಲಿ ಉಂಟಾಗುವ ಮಧುಮೇಹ ಎಂದೂ ಹೇಳಬಹುದು. ಮಹಿಳೆಗೆ ಗರ್ಭಧಾರಣೆಯ ಪೂರ್ವದಲ್ಲಿ ಊಹೂಂ ! ಒಂದಿನಿತೂ ಮಧುಮೇಹ ರೋಗದ ಲಕ್ಷಣಗಳಿರುವುದಿಲ್ಲ. ಆದರೆ, ಗರ್ಭ ಧರಿಸಿ ಕೆಲವೇ ತಿಂಗಳಲ್ಲಿ ರಕ್ತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆಯಂಶ ಸೇರಿಕೊಂಡು ಗರ್ಭಿಣಿಗೂ, ಭ್ರೂಣಕ್ಕೂ ತೊಂದರೆ ಉಂಟುಮಾಡಬಹುದು.

- **ಏನು ಕಾರಣ?**

ನಿರ್ದಿಷ್ಟ ಕಾರಣವನ್ನು ಇಂದಿಗೂ ಪತ್ತೆ ಹಚ್ಚಲು ಸಾಧ್ಯವಿಲ್ಲ. ಗರ್ಭಧಾರಣೆಯ ನಂತರ ವಿವಿಧ ಹಾರ್ಮೋನ್‌ಗಳು ಉತ್ಪತ್ತಿಯಾಗುತ್ತವೆ. ಆರಂಭದಲ್ಲಿ ಯಾವುದೇ ಲಕ್ಷಣಗಳು ಕಂಡು ಬರದೇ ಹೋಗಬಹುದು. ನಂತರ ಅತಿಯಾದ ಬಾಯಾರಿಕೆ, ಮೂತ್ರವಿಸರ್ಜನೆ, ಆಯಾಸ, ದಣಿವು, ಮಂದದೃಷ್ಟಿ ಕಾಣಿಸಬಹುದು.

- **ಅಪಾಯವೇನು?**

ಹುಟ್ಟುವ ಮಗು ' ಬಿಗ್ ಬೇಬಿ' ಆಗಬಹುದು. ಕೂಸಿನ ಗಾತ್ರ ಅತಿ ಹೆಚ್ಚಾಗಿ, ಹೆರಿಗೆ ಸಮಯದಲ್ಲಿ ವಿಪರೀತ ತೊಂದರೆ ಉಂಟಾಗಬಹುದು. ಶಿಶುವಿಗೆ ಜಾಂಡೀಸ್ ಅಥವಾ ಕಾಮಾಲೆ (ಹಳದಿ ರೋಗ) ಬರಬಹುದು.

- **ಹೆರಿಗೆಯ ನಂತರದ ಹೇಗಿರಬೇಕು?**

ಗರ್ಭಿಣಿಯರಿಗೆ ಮಧುಮೇಹ ಬಂದರೆ ಹೆರಿಗೆ ನಂತರ ಟೈಪ್ 2 ಮಧುಮೇಹ ಬರುವ ಸಾಧ್ಯತೆ ಹೆಚ್ಚು. ಇನ್ನು ಕೆಲವರಿಗೆ ಟೈಪ್ 1 ಮಧುಮೇಹ ಬರಬಹುದು. ಇಂಥ ಸಂದರ್ಭದಲ್ಲಿ ಅದಕ್ಕಾಗಿಯೇ ಚಿಕಿತ್ಸೆ ತೆಗೆದುಕೊಳ್ಳಬಹುದು. ಇಷ್ಟು ಸಾಲದೆಂಬಂತೆ ಹುಟ್ಟಿದ ಮಗುವಿಗೆ ಬೊಜ್ಜು ಬಂದೀತು. ಮುಂದೆ ಇಂಥ ಮಗುವಿನಲ್ಲಿಯೂ ಮಧುಮೇಹ ಬಂದರೆ ಆಶ್ಚರ್ಯವೇನಿಲ್ಲ.

- **ಜಾಗ್ರತೆ ವಹಿಸುವುದು ಹೇಗೆ?**

ಗರ್ಭಿಣಿಯರು ಹಿತಮಿತವಾದ ಆಹಾರ ಸೇವಿಸಿ. ಕಾಲ್ನಡಿಗೆ, ವ್ಯಾಯಾಮಗಳಿಂದ ಮಧುಮೇಹವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿ.

35 ಮೀರುವ ಮುನ್ನವೇ ಗರ್ಭ ಧರಿಸಿ.

ಆಧುನಿಕ ಜೀವನ ಶೈಲಿ, ಮಾನಸಿಕ ಒತ್ತಡ, ಜಂಕ್ ಆಹಾರ ಸೇವನೆಯಿಂದ ಆದಷ್ಟು ದೂರವಿರಲು ಪ್ರಯತ್ನಿಸಿ.

ವಂಶಪಾರಂಪರ್ಯವಾಗಿ ಈ ಸಮಸ್ಯೆ ಇದ್ದರೆ ಹೆಚ್ಚು ಮುತುವರ್ಜಿ ವಹಿಸುವುದು ಮುಖ್ಯ.

ಅದರಲ್ಲಿಯೂ ಗರ್ಭ ಧರಿಸುವುದಕ್ಕೂ ಮುನ್ನ ಹೆಣ್ಣುಮಕ್ಕಳು ಸ್ತ್ರೀರೋಗತಜ್ಞರ ಬಳಿ ಆಪ್ತಸಮಾಲೋಚನೆ ನಡೆಸುವುದು ಒಳಿತು



ನಕ್ಸಲ್ ನಿಗ್ರಹ ಪಡೆ ಎನ್‌ಕೌಂಟರ್‌ನಲ್ಲಿ ವಿಕ್ರಂ ಗೌಡ ಹತ್ಯೆಯಾದ ಪೀತುಬೈಲು: ಮನುಷ್ಯರ ಸುಳಿವೇ ಇಲ್ಲ

ನೆತ್ತರು ಹರಿದ ಮನೆಯಲ್ಲೀಗ ಮೌನ

• ನವೀನ್ ಕುಮಾರ್ ಜಿ.

ಉಡುಪಿ: ಪಶ್ಚಿಮ ಘಟ್ಟದ ದಟ್ಟಾರಣ್ಯದ ಮಡಿಲಿನಲ್ಲಿ ಅಡಿಕೆ ಗಿಡಗಳಿಂದ ಆವೃತವಾಗಿರುವ ಪುಟ್ಟ ಮಣ್ಣಿನ ಗೋಡೆಯ ಮನೆಯಲ್ಲಿ ಎಲ್ಲೆಲ್ಲೂ ಮೌನ. ಕೋಳಿ, ನಾಯಿಗಳನ್ನು ಬಿಟ್ಟರೆ ಅಲ್ಲಿ ಮನುಷ್ಯರ ಸುಳಿವೇ ಇಲ್ಲ...

ನಕ್ಸಲ್ ನಾಯಕ ಕೂಡ್ಲು ವಿಕ್ರಂ ಗೌಡ ಉಸಿರು ಚೆಲ್ಲಿದ್ದ ಇದೇ ಮನೆಯಲ್ಲಿ. ಹೆಬ್ರಿ ತಾಲ್ಲೂಕಿನ ಕಬ್ಬಿನಾಲೆಯಿಂದ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಪೀತುಬೈಲ್‌ನಲ್ಲಿರುವ ಈ ಮನೆಗೆ ತಲುಪಬೇಕಾದರೆ ದುರ್ಗಮ ಅರಣ್ಯ ಹಾದಿ ಸವೆಸಬೇಕು.

ಮನೆಯ ಬಳಿ ತಲುಪುತ್ತಿದ್ದಂತೆ ಪೊಲೀಸರು ಹಾಕಿರುವ ಎಚ್ಚರಿಕೆಯ ಪಟ್ಟಿಗಳು ಕಣ್ಣಿಗೆ ರಾಚುತ್ತವೆ. ಮನೆಯ ಜಗಲಿಯಲ್ಲಿ ವಿಕ್ರಂ ನೆಲಕ್ಕೊರಗಿದ ಜಾಗದಲ್ಲಿ ಬಂದೂಕಿನ ಗುಂಡುಗಳು ನೆಲವನ್ನು ಕೊರೆದ ಗುರುತುಗಳು ಇನ್ನೂ ಮಾಯವಾಗಿಲ್ಲ. ತುಳಸಿ ಕಟ್ಟೆ, ಮನೆ ಮುಂಭಾಗದ ಅಡಿಕೆ ಗಿಡ, ತೆಂಗಿನ ಮರಗಳಲ್ಲೂ ಗುಂಡುಗಳು ಹೊಕ್ಕಿರುವ ರಂಧ್ರಗಳು ಘಟನೆಯ ಕರಾಳತೆಗೆ ಸಾಕ್ಷಿಯಾಗಿವೆ.

ಎನ್‌ಕೌಂಟರ್ ನಡೆದ ಬಳಿಕ ವಿಧಿ ವಿಜ್ಞಾನ ತಜ್ಞರ ತಂಡದ ಪರಿಶೀಲನೆ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕವಷ್ಟೇ ಘಟನಾ ಸ್ಥಳಕ್ಕೆ ತೆರಳಲು ಮಾಧ್ಯಮದವರಿಗೆ ಅನುಮತಿ ನೀಡಲಾಗಿತ್ತು.

ಮನೆಯ ಬಾಗಿಲುಗಳು ತೆರೆದ ಸ್ಥಿತಿಯಲ್ಲಿದ್ದು, ಹಲವು ದಿನಗಳಿಂದ ಇಲ್ಲಿ ಜನ ವಾಸ ಇಲ್ಲದ್ದು ಎದ್ದು ತೋರುತ್ತಿತ್ತು. ಮನೆಯ ಒಳಗೂ ಹೊರಗೂ ಪೊಲೀಸರು ತನಿಖೆಯ ಭಾಗವಾಗಿ ಹಾಕಿರುವ ಗುರುತುಗಳು ಇನ್ನೂ ಹಾಗೆಯೇ ಇವೆ.

ಮನೆಯ ಹಿಂಭಾಗದಿಂದ ಮೇಲಕ್ಕೆ ಹತ್ತಿ ಹೋದರೆ ನೇರವಾಗಿ ಪಶ್ಚಿಮ ಘಟ್ಟದ ದಟ್ಟಾರಣ್ಯಕ್ಕೆ ತಲುಪಬಹುದು. ಮೂಲ ಸೌಲಭ್ಯ ಕಾಣದ ಪೀತುಬೈಲ್‌ನ ಈ ಮನೆಗಳಿಗೆ ವಿದ್ಯುತ್ ಸಂಪರ್ಕವಿಲ್ಲ. ಸೋಲಾರ್‌ನಿಂದಾಗಿ ಈ ಮನೆಗಳಲ್ಲಿ ಬೆಳಕು ಮೂಡಿದೆ. ಟಿ.ವಿ. ಸೇರಿದಂತೆ ಯಾವುದೇ ಆಧುನಿಕ ವಿದ್ಯುನ್ಮಾನ ಸಾಧನಗಳು ಈ ಮನೆಯಲ್ಲಿ ಕಣ್ಣಿಗೆ ಬೀಳುವುದಿಲ್ಲ.

ಎನ್‌ಕೌಂಟರ್ ನಡೆದ ಪ್ರದೇಶದಲ್ಲಿ ಕೇವಲ ಮೂರು ಮನೆಗಳಷ್ಟೇ ಇವೆ. ಆದರೆ ಅವುಗಳಲ್ಲಿ ಜನರು ಇರಲಿಲ್ಲ. ಹಲವು ದಿನಗಳಿಂದ ಆಹಾರ ಸಿಗದೆ ಹಸಿವಿನಿಂದ ಕಂಗೆಟ್ಟಿರುವ ನಾಯಿಗಳು, ಕೋಳಿಗಳು ಎಲ್ಲೆಂದರಲ್ಲಿ ಓಡಾಡಿಕೊಂಡಿವೆ.

ಜಯಂತ ಗೌಡ ಎಂಬುವವರ ಮನೆಯ ಅಂಗಳದಲ್ಲಿ ಈ ಎನ್‌ಕೌಂಟರ್ ನಡೆದಿದ್ದು, ಈ ಮನೆಗಳ ನಿವಾಸಿಗಳೆಲ್ಲ ಈಗ ದೂರದ ಸಂಬಂಧಿಗಳ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ.

'ಈ ಪ್ರದೇಶಕ್ಕೆ ವಿಕ್ರಂ ಬರುತ್ತಾನೆಂಬ ಖಚಿತ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿ, ಆತನನ್ನು ಹತ್ಯೆ ಮಾಡಲಾಗಿದೆ. ಶರಣಾಗು ಎಂದು ಸೂಚಿಸಿದರೂ ಆತ ಗುಂಡು ಹಾರಿಸಿದ್ದ' ಎಂಬುದು ನಕ್ಸಲ್ ನಿಗ್ರಹ ಪಡೆಯ ವಿವರಣೆಯಾಗಿದೆ.

ಮೂಲಸೌಕರ್ಯಗಳಿಂದ ವಂಚಿತವಾಗಿರುವ ಈ ಪ್ರದೇಶದ ಜನರಿಗಾಗಿ ಸೇತುವೆಯೊಂದನ್ನು ನಕ್ಸಲ್ ನಿಗ್ರಹ ಪಡೆಯು ನಿರ್ಮಿಸಿಕೊಟ್ಟಿದೆ. ಈ ಮೂಲಕ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನಗಳು ನಡೆದಿದ್ದವು ಎಂದು ಮೂಲಗಳು ಹೇಳಿವೆ.

ಪೀತುಬೈಲಿನ ನಿವಾಸಿಗಳು ಕೃಷಿ ಹಾಗೂ ಕೂಲಿ ಕೆಲಸವನ್ನೇ ನಂಬಿ ಜೀವನ ಸಾಗಿಸುವವರು. ಜೊತೆಗೆ ಕಾಡಿನಲ್ಲಿ ಸಿಗುವ ಕಾಡುತ್ಪತ್ತಿಗಳು ಕೂಡ ಅವರ ಬದುಕಿಗೆ ಆಸರೆಯಾಗಿವೆ. ಎನ್‌ಕೌಂಟರ್ ನಡೆದಿರುವುದರಿಂದ ಅಲ್ಲಿನ ನಿವಾಸಿಗಳಲ್ಲಿ ಆತಂಕ ಮನೆಮಾಡಿದೆ.



ವಿಕ್ರಂ ಗೌಡ ನೆಲಕ್ಕೊರಗಿರುವ ಮನೆಯ ಜಗಲಿ

'ಅರಣ್ಯ ಇಲಾಖೆ ಕಿರುಕುಳಕ್ಕೆ ನಕ್ಸಲನಾದ'

'ವಿಕ್ರಂ ಗೌಡ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನೋಡಿದ್ದೆ. ಒಳ್ಳೆಯ ಹುಡುಗ. ನಕ್ಸಲ್ ಆಗುವ ಹಾಗೆ ಮಾಡಿದ್ದೇ ಅರಣ್ಯ ಇಲಾಖೆಯವರು. ಅವನಿಗೆ ಕೇಸು ಹಾಕಿಕೊಂಡು ಮೆಟ್ಟಿದ್ದಾರೆ, ಹೊಡೆದಿದ್ದಾರೆ. ಮನೆಯಲ್ಲಿ ಅನ್ನವನ್ನು ಚೆಲ್ಲಿ ಹಿಂಸೆ ಕೊಟ್ಟಿದ್ದಾರೆ' ಎಂದು ಕಬ್ಬಿನಾಲೆಯ ಕುಚ್ಚೂರು ದುರ್ಗಾನ್ ನಿವಾಸಿ ಸದಾಶಿವ ಗೌಡ ಅವರು ವಿಕ್ರಂ ಕುರಿತ ನೆನಪುಗಳನ್ನು ಮೆಲುಕು ಹಾಕಿದರು.

'ವಿಕ್ರಂ ಗೌಡ ಸಾವಿನಲ್ಲಿ ನೋವಿದೆ. ಆತ ನಮ್ಮ ಜಾತಿಯ ಮಗ. ನಕ್ಸಲರ ಕುರಿತು ಸ್ಥಳೀಯರಿಗೆ ಯಾವುದೇ ಮಾಹಿತಿ ಇರಲಿಲ್ಲ. ಸೋಲಾರ್‌ನವರು ಎಂದು ಹೇಳಿ ಎಎನ್‌ಎಫ್‌ನವರು ಈ ಮಾರ್ಗವಾಗಿ ಓಡಾಡುತ್ತಿದ್ದರು' ಎಂದರು.

'ಇಲ್ಲಿನ ರಸ್ತೆಯಲ್ಲಿ ನಡೆದುಕೊಂಡು ಹೋಗಲೂ ಆಗುವುದಿಲ್ಲ. ಮಳೆಗಾಲದಲ್ಲಿ ನಮ್ಮ ಕಷ್ಟ ಹೇಳತೀರದು ಎಂದು ಅವರು ಅಳಲು ತೋಡಿಕೊಂಡರು.

'ಕಸ್ತೂರಿ ರಂಗನ್ ವರದಿ ಜಾರಿಯಾದರೆ ನಮಗೆ ತೊಂದರೆಯಾಗಬಹುದೆಂಬ ಭಯ ಈಗ ಕಾಡುತ್ತಿದೆ. ಈ ಭಾಗದ ಅರಣ್ಯ ಪ್ರದೇಶದಲ್ಲಿ ಬೇಲಿ ಹಾಕುವ ಕೆಲಸ ಹಿಂದೆ ನಡೆದಿತ್ತು, ಆಗ ನಾವು ವಿರೋಧಿಸಿದ್ದೆವು' ಎಂದೂ ಅವರು ಹೇಳಿದರು.

ಕಿರುಕುಳ ಆರೋಪ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಉಡುಪಿ: ಹೆಬ್ರಿ ತಾಲ್ಲೂಕಿನ ಪೀತುಬೈಲ್‌ನಲ್ಲಿ ನಕ್ಸಲ್ ಮುಖಂಡ ವಿಕ್ರಂ ಗೌಡನ ಎನ್‌ಕೌಂಟರ್ ನಡೆದ ಮನೆಯ ಮಾಲೀಕ ಜಯಂತ ಗೌಡ ಅವರನ್ನು ಪೊಲೀಸರು ಠಾಣೆಗೆ ಕರೆಸಿದ್ದನ್ನು ಖಂಡಿಸಿ ಹೆಬ್ರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ರಾಜ್ಯ ಮಲೆಕುಡಿಯ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಪೊಲೀಸರು ಜಯಂತ ಗೌಡ ಅವರನ್ನು ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ರಾಜ್ಯ ಮಲೆಕುಡಿಯ ಸಂಘದ ಅಧ್ಯಕ್ಷ ಶ್ರೀಧರ ಗೌಡ, 'ಹಿಂಸಾತ್ಮಕ ಹೋರಾಟ ನಡೆಸುವವರಿಗೆ ಮತ್ತು ಸಂಘಟನೆಗಳಿಗೆ ನಮ್ಮ ವಿರೋಧವಿದೆ. ಆದರೆ ಮುಗ್ಧ ಜನರಿಗೆ ಪೊಲೀಸರು ಕಿರುಕುಳ ನೀಡಬಾರದು' ಎಂದರು.

'ವಿಕ್ರಂ ಗೌಡ ಎನ್‌ಕೌಂಟರ್ ನಡೆದ ಬಳಿಕ ಈ ಭಾಗದ ಜನರಿಗೆ ಪೊಲೀಸರಿಂದ ಕಿರುಕುಳ ಉಂಟಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ. ಮುಂದೆ ಕಿರುಕುಳ ನೀಡಿದರೆ ಊರವರು ಸೇರಿ ಹೋರಾಟ ಮಾಡಲಿದ್ದೇವೆ' ಎಂದು ಹೇಳಿದರು.

'ಹಿಂಸಾತ್ಮಕ ಚಟುವಟಿಕೆ ನಡೆಸಿ, ಶಾಂತಿಗೆ ಭಂಗ ತರುವ ಕೃತ್ಯಗಳು ನಡೆದಾಗ ಅದನ್ನು ದಮನ ಮಾಡಬೇಕು. ಅದಕ್ಕೆ ನಮ್ಮ ಸಹಕಾರ ಇದೆ. ಅದರ ನೆಪದಲ್ಲಿ ಮುಗ್ಧ ಜನರಿಗೆ ಹಿಂಸೆ ನೀಡಬಾರದು' ಎಂದು ತಿಳಿಸಿದರು.



ಜಯಂತ ಗೌಡ

'ಪೊಲೀಸರೊಂದಿಗೆ ನಾವು ಕೈಜೋಡಿಸುತ್ತೇವೆ. ಪೊಲೀಸರು ಕೂಡ ನಮ್ಮೊಂದಿಗೆ ಕೈಜೋಡಿಸಬೇಕು. ಜನರು ನಕ್ಸಲರಿಗೆ ಹೆದರಿ ಅಹಾರ ಕೊಡುತ್ತಾರೆ ವಿನಾಃ ಅವರ ಮೇಲಿನ ಅಭಿಮಾನದಿಂದಲ್ಲ ಎಂಬುದನ್ನು ಅಧಿಕಾರಿಗಳು ಮನಗಾಣಬೇಕು' ಎಂದರು.

ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ ಗಂಗಾಧರ ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪೊಲೀಸ್ ಠಾಣೆಯಿಂದ ಬಿಡುಗಡೆಗೊಂಡ ಬಳಿಕ ಮಾತನಾಡಿದ ಜಯಂತ ಗೌಡ, 'ಪೊಲೀಸರು ಠಾಣೆಗೆ ಕರೆದು ನಿಮಗೆ ಏನಾಗಿದೆ ಎಂದು ಕೇಳಿದರು. ಬೇರೆ ಏನೂ ಕೇಳಲಿಲ್ಲ. ವಿದ್ಯುತ್ ಕಂಬದಿಂದ ಬಿದ್ದು ನನ್ನ ಮಗನ ಕೈಗೆ ಗಾಯವಾದ ಕಾರಣಕ್ಕೆ ಕೆಲವು ದಿನಗಳಿಂದ ನಾವು ಕಬ್ಬಿನಾಲೆಯ ಪುಲ್ಲಾಂತ್‌ಬೆಟ್ಟುವಿನಲ್ಲಿರುವ ಮಗಳ ಮನೆಯಲ್ಲಿದ್ದೇವೆ' ಎಂದರು.

'ಎನ್‌ಕೌಂಟರ್ ನಡೆದ ಬಗ್ಗೆ ನಮಗೆ ಟಿ.ವಿ. ಮೂಲಕ ಮಾಹಿತಿ ತಿಳಿಯಿತು. ನಕ್ಸಲರು ಬಂದಿರುವ ಬಗ್ಗೆ ನಮಗೆ ಏನೂ ಗೊತ್ತಿಲ್ಲ' ಎಂದರು.



ಹೆಬ್ರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಶುಕ್ರವಾರ ರಾಜ್ಯ ಮಲೆಕುಡಿಯ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು

ಸುದ್ದಿ 2 ನಿಮಿಷ

ಗುಣಮಟ್ಟದ ರಸ್ತೆ ನಿರ್ಮಿಸಿ ನಾನೇ ಕಮಿಷನ್ ಕೊಡ್ತೇನೆ: ಶಾಸಕ

ಹೊನ್ನಾಳಿ: 'ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರೊಂದಿಗೆ ಶಾಮೀಲಾಗಬೇಡಿ, ಬೇಕಾದರೆ ಅವರು ಕೊಡುವ ಕಮಿಷನ್ ನಾನೇ ಕೊಡುತ್ತೇನೆ. ರಸ್ತೆ ಅಭಿವೃದ್ಧಿ ಕಾಮಗಾರಿಗಳು ಕಳಪೆಯಾಗದಂತೆ ನೋಡಿಕೊಳ್ಳಿ'

ಇದು ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಅವರು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ನೀಡಿರುವ ಅಭಯ.

ಹೊನ್ನಾಳಿಯ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಎಇಇ ಕಣುಮಪ್ಪ ಸೇರಿ ಇತರ ಅಧಿಕಾರಿಗಳಿಗೆ ಈ ರೀತಿ ಸಿಟ್ಟಿನಿಂದಲೇ ಭರವಸೆ ನೀಡಿದರು.

'ಹೊನ್ನಾಳಿ-ಶಿವಮೊಗ್ಗ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಕಳಪೆಯಾಗಿದೆ' ಎಂಬ ದೂರುಗಳು ಬಂದಿರುವ ಕಾರಣ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, 'ರಸ್ತೆಗುಂಡಿ ಮುಚ್ಚುವ ಕಾಮಗಾರಿ ಗುಣಮಟ್ಟದಿಂದ ಕೂಡಿಲ್ಲ ಎಂದು ಜನರು ದೂರುತ್ತಿದ್ದಾರೆ. ಡಾಂಬರೀಕರಣ ಕಾಮಗಾರಿ ಕಳಪೆಯಾಗದಂತೆ ನೋಡಿಕೊಳ್ಳಿ' ಎಂದು ಸೂಚಿಸಿದರು.

ಗೋರಿಗೆ ಕುಂಕುಮ: ಪ್ರತಿಭಟನೆ



ಚಿಕ್ಕಮಗಳೂರು: ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗದಲ್ಲಿ ಗುಹೆಯೊಳಗಿನ ಗೋರಿಯ ಮೇಲೆ ಕುಂಕುಮ ಹಚ್ಚಿ ಪೂಜೆ ಸಲ್ಲಿಸಲಾಗಿದೆ ಎಂದು ಆರೋಪಿಸಿ ಇಲ್ಲಿನ ಶಾ-ಖಾದ್ರಿ ಕುಟುಂಬದ ಸದಸ್ಯರು ಗುಹೆಯ ಎದುರಿನ ಮುಜರಾಯಿ ಇಲಾಖೆ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

'ಇಸ್ಲಾಂ ಧರ್ಮಕ್ಕೆ ವಿರುದ್ಧವಾದ ಕೃತ್ಯಗಳನ್ನು ಕೆಲವರು ಮಾಡುತ್ತಿದ್ದು, ನಮ್ಮ ಭಾವನೆ ಘಾಸಿಗೊಳಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ರೀತಿ ಸೆಪ್ಟೆಂಬರ್‌ನಲ್ಲಿ ಗೋರಿಗಳಿಗೆ ಕುಂಕುಮ ಹಚ್ಚಿ ಪೂಜೆ ಸಲ್ಲಿಸಲಾಗಿತ್ತು. ಪೊಲೀಸರಿಗೆ ದೂರು ನೀಡಲಾಗಿತ್ತು. ಈಗ ಮತ್ತೆ ಕುಂಕುಮ ಹಚ್ಚಿ ಪೂಜೆ ಮಾಡಿರುವುದು ಸರಿಯಲ್ಲ. ಕುಂಕುಮ ಹಚ್ಚಿದವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದರು.

'ಶಾ-ಖಾದ್ರಿ ವಂಶಸ್ಥರು ಎಂದು ಹೇಳಿಕೊಂಡ ಗುಂಪೊಂದು ನ.19ರಂದು ದತ್ತಪೀಠದ ಆವರಣದೊಳಗೆ ನುಗ್ಗಿ ಅರ್ಚಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಧಮಕಿ ಹಾಕಿದೆ' ಎಂದು ವಿಶ್ವ ಹಿಂದೂ ಪರಿಷತ್ ಮುಖಂಡರು ಆರೋಪಿಸಿದ್ದಾರೆ. ಹಿಂದೂ ಧಾರ್ಮಿಕ ಪದ್ಧತಿ ಪ್ರಕಾರ ಹಚ್ಚಿದ ಅರಿಸಿನ-ಕುಂಕುಮವನ್ನು ಮುಜಾವರ್ ಮೂಲಕ ಅಳಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ವಿಎಚ್‌ಪಿ ವಿಭಾಗ ಸಹ ಕಾರ್ಯದರ್ಶಿ ಆರ್.ಡಿ.ಮಹೇಂದ್ರ ಆಗ್ರಹಿಸಿದ್ದಾರೆ.

ನಿಧನ ವಾರ್ತೆ

ಅಜ್ಜಯ್ಯ ಸ್ವಾಮೀಜಿ

ಸವದತ್ತಿ (ಬೆಳಗಾವಿ ಜಿಲ್ಲೆ): ಇಲ್ಲಿನ ಬೆಟಸೂರ ಮಠದ ಅಜ್ಜಯ್ಯ ಸ್ವಾಮೀಜಿ (76) ಶುಕ್ರವಾರ ಬಂಡಿ ಓಣಿಯಲ್ಲಿರುವ ಮಠದಲ್ಲಿ ಹೃದಯಾಘಾತದಿಂದ ನಿಧನರಾದರು.


1948ರ ನವೆಂಬರ್ 12ರಂದು ಗುರುಸಿದ್ದಯ್ಯ ಮತ್ತು ತೋಟಮ್ಮ ದಂಪತಿಗೆ ಜನಿಸಿದ ಅವರು, ವೇದ ಉಪನಿಷತ್ತುಗಳ ಅಧ್ಯಯನ ನಡೆಸಿದ್ದರು. ಬೆಟಸೂರ ಮಠದ ವಿಶ್ವನಾಥ ಸ್ವಾಮೀಜಿ ನಂತರ, 1973ರಲ್ಲಿ ಮಠದ ಅಧಿಕಾರ ವಹಿಸಿಕೊಂಡರು. ವೇದೋಪನಿಷತ್ತುಗಳಲ್ಲಿ ಪಾಂಡಿತ್ಯ ಪಡೆದಿದ್ದರು.



ಬೆಟಸೂರ ಮಠದ ಪರಂಪರೆಯನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದ ಅಜ್ಜಯ್ಯ ಶ್ರೀಗಳು, ತ್ರಿಕಾಲ ಲಿಂಗಪೂಜಾ ನಿಷ್ಠರಾಗಿದ್ದರು. ಮಠದಲ್ಲಿ ಶ್ರೀಗಳ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದ ಬಳಿಕ, ಮಠದ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿತು.

ನಿವೃತ್ತ ಎಂಜಿನಿಯರ್ ವೆಂಕಟೇಗೌಡ

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಸರ್ಕಾರದ ನೀರಾವರಿ ಯೋಜನೆಗೆ ನೀಲನಕ್ಷೆ ರೂಪಿಸಿ, ಅದರ ಸಾಕಾರಕ್ಕೆ ತೆರೆಮರೆಯಲ್ಲಿ ಶ್ರಮಿಸಿದ್ದ ನಿವೃತ್ತ ಎಂಜಿನಿಯರ್ ತಾಲ್ಲೂಕಿನ ಅಗ್ರಹಾರ ವಳಗೆರಹಳ್ಳಿ ವೆಂಕಟೇಗೌಡ (63) ಕಜಕಿಸ್ತಾನದಲ್ಲಿ ಶುಕ್ರವಾರ ನಿಧನರಾಗಿದ್ದಾರೆ. ಕುಟುಂಬದೊಂದಿಗೆ ಕಜಕಿಸ್ತಾನಕ್ಕೆ ಪ್ರವಾಸ ಕೈಗೊಂಡಿದ್ದ ಅವರು, ಪ್ರವಾಸ ಮುಗಿಸಿ ಹಿಂದಿರುವಾಗ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಹೃದಯಾಘಾತದಿಂದ ಕೊನೆಯುಸಿರೆಳೆದರು.



ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ಕೆಲಸ ಆರಂಭಿಸಿದ ವೆಂಕಟೇಗೌಡ, ನಂತರ ಯು.ಕೆ.ಪಿ ನಾಲಾ-1ರ ಮುಖ್ಯ ಎಂಜಿನಿಯರ್ ಆಗಿಯೂ ಕೆಲಸ ಮಾಡಿದ್ದರು. ಕಾವೇರಿ ನೀರಾವರಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಹಾಗೂ ಅಧೀಕ್ಷಕ ಎಂಜಿನಿಯರ್ ಆಗಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಅಂತ್ಯಕ್ರಿಯೆ ನ.24ರಂದು ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಪಡಿತರ ಚೀಟಿ ರದ್ದು ಕೇಂದ್ರದ ನಿರ್ಧಾರ'

ಬಿಜೆಪಿ ಜನರ ದಿಕ್ಕು ತಪ್ಪಿಸುತ್ತಿದೆ ಎಂದು ಟೀಕೆ: ಮಾಧ್ಯಮಗಳ ವಿರುದ್ಧವೂ ಸಿ.ಎಂ ಅಸಮಾಧಾನ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೇಂದ್ರ ಸರ್ಕಾರವೇ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಿದೆ. ಹೀಗಿದ್ದರೂ ಬಿಜೆಪಿಯವರು ರಾಜ್ಯದಲ್ಲಿ ಪ್ರತಿಭಟಿಸುತ್ತಾ, ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಆಹಾರ ಭದ್ರತಾ ಕಾಯ್ದೆ ಮಾಡಿದವರು, ₹ 3ಕ್ಕೆ ಅಕ್ಕಿ ಕೊಟ್ಟವರು ನಮ್ಮ ಮನಮೋಹನ್ ಸಿಂಗ್. ಅದನ್ನು ಬಿಜೆಪಿಯ ನಾಯಕ ಮುರಳಿ ಮನೋಹರ ಜೋಶಿ, 'ವೋಟ್ ಸೆಕ್ಯುರಿಟಿ ಆಕ್ಟ್' ಎಂದು ಟೀಕಿಸಿದ್ದರು. ಹೀಗಿರುವಾಗ, ಸಿದ್ದರಾಮಯ್ಯ ಸರ್ಕಾರ ಕಟ್ ಮಾಡಿಬಿಟ್ಟಿದೆ, ಬಡವರ ಅಕ್ಕಿ ಕಿತ್ತುಕೊಳ್ಳುತ್ತಾರೆ ಎಂದೆಲ್ಲಾ ತೋರಿಸುತ್ತಿದ್ದಿರಲ್ಲಾ?' ಎಂದು ಮಾಧ್ಯಮದವರನ್ನು ಟೀಕಿಸಿದರು.

'ನಾನು ಬಿಪಿಎಲ್ ಕಾರ್ಡ್‌ಗೆ 7 ಕೆ.ಜಿ. ಅಕ್ಕಿ ಕೊಡುತ್ತಿದ್ದೆ. 5 ಕೆ.ಜಿ.ಗೆ ಇಳಿಸಿದವರು ಯಾರು? ಅದನ್ಯಾಕೆ ನೀವು ಬರೆಯುವುದಿಲ್ಲ, ಟಿವಿಯಲ್ಲೇಕೆ ತೋರಿಸುವುದಿಲ್ಲ? ಸುಮ್ನೆ ಕೂತ್ಕೊಳ್ಳಿ' ಎಂದರು. 'ಯಡಿಯೂರಪ್ಪ ಸರ್ಕಾರದಲ್ಲಿ ಅಕ್ಕಿಯನ್ನು 5 ಕೆಜಿಗೆ ಇಳಿಸಲಾಯಿತು. ಈಗ ವಿಜಯೇಂದ್ರ ಮಾತನಾಡುತ್ತಾ ನಲ್ಲಾ ಅವನಿಗೆ ಉಗಿಯಬೇಕಾ, ಬೇಡವಾ? ಯಡಿಯೂರಪ್ಪ, ಮಗನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಮುಖ್ಯಮಂತ್ರಿ ಮಾಡುವುದಕ್ಕೆ ಹೊರಟಿದ್ದಾರೆ' ಎಂದರು.

'ಬಿಪಿಎಲ್ ಕಾರ್ಡ್ ಬಗ್ಗೆ ಮಾತನಾಡಲು ವಿಜಯೇಂದ್ರಗೆ ಯಾವ ನೈತಿಕ ಹಕ್ಕಿದೆ. ನೀವು ಅವರ ಹೇಳಿಕೆಗಳನ್ನು ಹಾಕಲೂಬಾರದು; ಅವರನ್ನು ತೋರಿಸಲೂ ಬಾರದು' ಎಂದು ಆಗ್ರಹಿಸಿದರು.

'10 ಕೆ.ಜಿ. ಅಕ್ಕಿ ಕೊಡಲು ಆರಂಭಿಸಿದವರು ನಾವು. ಸರ್ಕಾರಿ ನೌಕರರಿಗೆ, ಆದಾಯ ತೆರಿಗೆ ಪಾವತಿಸುವವರಿಗೆ ಬಿಪಿಎಲ್ ಕಾರ್ಡ್ ಕೊಡಬೇಕಾ? ಮತ್ತೇಕೆ ಟಿವಿಯಲ್ಲಿ ತೋರಿಸುತ್ತೀರಿ' ಎಂದು ಆಕ್ಷೇಪಿಸಿದರು.

'ಅಕ್ಕಿ ಕೊಡುವುದು ಬಡವರಿಗೆ ರೂಪಿಸಿದ ಕಾರ್ಯಕ್ರಮ. ಬಿಜೆಪಿಯವರೇ ಮಾನದಂಡ ರೂಪಿಸಿ ಈಗ ಅವರೇ ಅದರ ವಿರುದ್ಧ ಹೋರಾಡುತ್ತಿದ್ದಾರೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಫೋಟೊ ತೆಗೆಸಿಕೊಂಡಿದ್ದೇ ತೆಗೆಸಿಕೊಂಡಿದ್ದು. ಕಾಂಗ್ರೆಸ್‌ನವರು ಪಾಪಿಗಳೆಂದು ಬಿಜೆಪಿಯವರು ಹೇಳುತ್ತಾರೆ. ಅದನ್ನೆ ನೀವು ದೊಡ್ಡದಾಗಿ ತೋರಿಸುತ್ತೀರಿ. ಪಾಪಿಗಳು ಅವರಾ, ನಾವಾ' ಎಂದು ಕೇಳಿದರು.

'ಬಿಜೆಪಿಯವರು ಪ್ರತಿಭಟಿಸುವುದನ್ನು, ಅಭಿಯಾನ ನಡೆಸುವುದನ್ನು ತೋರಿಸಲೇಬಾರದು. ಅವರೇನು ಸತ್ಯ ಹೇಳುತ್ತಿದ್ದಾರೆಯೇ? ಮಾಧ್ಯಮದ ಪಾತ್ರವೇನು, ಜನರಿಗೆ ಸತ್ಯ ತಿಳಿಸಬೇಕಲ್ಲವೇ? ಜನರೇ ತೀರ್ಮಾನಿಸಿಕೊಳ್ಳಲಿ ಎಂದರೆ ಹೇಗೆ? ನಿಮ್ಮ ಕೆಲಸವೇನು? ಮಾಧ್ಯಮ ಜನರಿಗೆ ಸತ್ಯವನ್ನು ಹೇಳಬೇಕು' ಎಂದರು.

'ಅದಾನಿಯಿಂದ ದೇಶದ ಗೌರವ ಹಾಳಾಗಿವೆ. ಅವರಿಗೆ ರಕ್ಷಣೆ ಕೊಡುತ್ತಿರುವವರು ಯಾರೆಂದು ದೇಶಕ್ಕೇ ಗೊತ್ತಿದೆ. ನಿಮಗೆ ಗೊತ್ತಿಲ್ವಾ? ಈ ಸತ್ಯವನ್ನು ಮಾಧ್ಯಮಗಳು ದೇಶದ ಜನರಿಗೆ ಏಕೆ ತೋರಿಸುತ್ತಿಲ್ಲ' ಎಂದು ಕೇಳಿದರು. 'ಅದಾನಿಯನ್ನು ತಕ್ಷಣ ಬಂಧಿಸಬೇಕು, ತಪ್ಪಿಸಿಕೊಳ್ಳಲು ಬಿಡಬೇಡಿ' ಎಂದು ಹೇಳಿದರು.

'ನಾವು ಮಾಡುವ ತಪ್ಪನ್ನೂ ಹೇಳಿ. ಆದರೆ, ಸತ್ಯ ಹೇಳಿ' ಎಂದರು.

ಸಾತ್ವಿಕ ಸಿಟ್ಟು: ಸಿದ್ದರಾಮಯ್ಯ ಅವರು ಕೋಪಿಸಿಕೊಂಡಿದ್ದನ್ನು ನಗರದ ಕ್ವೆಸ್ಟ್ ಅಕಾಡೆಮಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ ಸಚಿವ ಡಾ.ಎಚ್.ಸಿ. ಮಹದೇವಪ್ಪ, 'ಸಿದ್ದರಾಮಯ್ಯ ಅವರಿಗೆ ಕೋಪ ಜಾಸ್ತಿ. ದಬ್ಬಾಳಿಕೆ, ಪಾಳೇಗಾರಿಕೆ ಕಂಡಾಗ ಹಾಗೂ ತುಳಿತಕ್ಕೆ ಒಳಗಾದವರ ಮೇಲೆ ಸವಾರಿ ಮಾಡುವವರ ಮೇಲೆ ಸಾತ್ವಿಕ ಸಿಟ್ಟು ವ್ಯಕ್ತಪಡಿಸುತ್ತಾರಷ್ಟೆ' ಎಂದು ಸಮರ್ಥಿಸಿಕೊಂಡರು.

'ರೈತರಿಗೆ ಸಾಲ ಕಡಿತ: ಅನ್ಯಾಯ'

ಮೈಸೂರು: 'ರಾಜ್ಯದ ರೈತರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಕೊಡುವ ಸಾಲದ ಮೊತ್ತವನ್ನು ನಬಾರ್ಡ್ (ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ಈ ಬಾರಿ ಶೇ 58ರಷ್ಟು ಕಡಿತಗೊಳಿಸಿರುವುದು ಪರಮ ಅನ್ಯಾಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸಾಲದ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗಬೇಕು. ಆದರೆ ಕಡಿತವಾಗಿದೆ. ನಬಾರ್ಡ್‌ಗೆ ಶೇ 4.5ರಷ್ಟು ಬಡ್ಡಿಯನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ಈಗ ಸಾಲ ಕಡಿತಗೊಳಿಸಿ ರುವುದರಿಂದ, ವಾಣಿಜ್ಯ ಬ್ಯಾಂಕ್‌ಗಳಿಂದ ಸಾಲ ಪಡೆದು ಶೇ10ರಷ್ಟು ಬಡ್ಡಿ ಕಟ್ಟಬೇಕು. ಇದು ರಾಜ್ಯಕ್ಕಾಗುವ ನಷ್ಟ' ಎಂದರು.



'ಅನ್ಯಾಯ ಸರಿಪಡಿಸುವಂತೆ ಕೋರಿ, ರಾಜ್ಯದಿಂದಲೇ ಆಯ್ಕೆಯಾಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಕೊಟ್ಟಿದ್ದೇನೆ. ರಾಜ್ಯದ ರೈತರ ಬಗ್ಗೆ ಕಾಳಜಿ ಇದ್ದರೆ ಬಿಜೆಪಿ ಮತ್ತು ಕೇಂದ್ರ ಸರ್ಕಾರ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು. 'ನಬಾರ್ಡ್ ನಿರ್ಧಾರವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಮರ್ಥಿಸಿಕೊಂಡಿದ್ದರೆ, ಮಣ್ಣಿನ ಮಗ, ರೈತರ ಮಗ ಅಂದುಕೊಂಡಿರುವ ಎಚ್.ಡಿ.ಕುಮಾರಸ್ವಾಮಿ ಅವರು ಉಸಿರೇ ಬಿಡುತ್ತಿಲ್ಲವಲ್ಲ ಏಕೆ' ಎಂದು ಪ್ರಶ್ನಿಸಿದರು.

₹10 ಲಕ್ಷ ಲಂಚ 'ಲೋಕಾ' ಬಲೆಗೆ ಬುಡಾ ಆಯುಕ್ತ

ಒಂದನೇ ಪುಟದಿಂದ...

'ಬೀದರ್ ನಗರದ ಚಿಕ್ಕಪೇಟೆಯಲ್ಲಿ ಸರ್ವೆ ನಂಬರ್ 26ರಲ್ಲಿ ಕೃಷಿಯೇತರ ಜಮೀನಿನ ಶೇ 60ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿ, ಅವುಗಳ ಮಾರಾಟಕ್ಕೆ ಅನುಮತಿಕೊಡಲು ಶ್ರೀಕಾಂತ ಹಾಗೂ ಚಂದ್ರಕಾಂತ ಅವರು ₹50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರನ್ವಯ ₹10 ಲಕ್ಷ ಮುಂಗಡ ಕೊಡುವ ಬಗ್ಗೆ ಮಾತುಕತೆಯಾಗಿತ್ತು. ಬೀದರ್‌ನ ಪ್ರತಾಪ ನಗರದ ದಾಲ್‌ಮಿಲ್ ಸಮೀಪ ಶ್ರೀಕಾಂತ ಹಾಗೂ ಚಂದ್ರಕಾಂತ ಅವರ ಆಪ್ತ ಸಿದ್ದು ಹೂಗಾರ ಎಂಬಾತ ₹10 ಲಕ್ಷ ನಗದು ಪಡೆಯುತ್ತಿದ್ದಾಗ ದಾಳಿ ನಡೆಸಿ, ವಶಕ್ಕೆ ಪಡೆಯಲಾಯಿತು. ಅನಂತರ ಶ್ರೀಕಾಂತ ಹಾಗೂ ಚಂದ್ರಕಾಂತ ಅವರನ್ನೂ ವಶಕ್ಕೆ ಪಡೆದಿದ್ದೇವೆ' ಎಂದು ಲೋಕಾಯುಕ್ತ ಎಸ್ಪಿ ಉಮೇಶ ಬಿ.ಕೆ. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.



ಚಂದ್ರಕಾಂತ ರೆಡ್ಡಿ

ರಿಯಲ್ ಎಸ್ಟೇಟ್ ಉದ್ಯಮಿ ಸತೀಶ ನೌಬಾದೆ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಎಸ್ಪಿ ಉಮೇಶ ನೇತೃತ್ವದಲ್ಲಿ ನಡೆದ ದಾಳಿ ನಡೆಯಿತು.

ಕಾಡಂಚಿನ ಅತಂತ್ರ ಬದುಕು

ಒಂದನೇ ಪುಟದಿಂದ...

ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿರುವ ಯಾವುದೇ ಊರಿಗೆ ಹೋದರೂ ರಸ್ತೆಗಳಿಲ್ಲ, ವಿದ್ಯುತ್ ಸೌಕರ್ಯವಿಲ್ಲ, ಮೊಬೈಲ್ ದೂರವಾಣಿಗೆ ಸಂಪರ್ಕವಿಲ್ಲ. ಅತ್ತ ಪುನರ್ವಸತಿಯೂ ಇಲ್ಲ, ಇತ್ತ ಕಾಡಿನಲ್ಲಿ ಬದುಕುವ ಸ್ಥಿತಿಯೂ ಇಲ್ಲದಂತಾಗಿದೆ.


ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಯಲ್ಲಿ 600 ಚದರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನ ಇದೆ ಎಂಬುದು ಅರಣ್ಯ ಇಲಾಖೆ ಅಧಿಕಾರಿಗಳು ನೀಡುವ ಮಾಹಿತಿ. ಅದರೊಳಗಿನ ಕಂದಾಯ ಜಾಗದಲ್ಲಿರುವ ಮನೆಗಳಿಗೆ ಸಾಗಲು ರಾಷ್ಟ್ರೀಯ ಉದ್ಯಾನದ ಚೆಕ್‌ಪೋಸ್ಟ್‌ಗಳನ್ನು ದಾಟಿಕೊಂಡೇ ಹೋಗಬೇಕು. ಅಂತಹ 1300 ಕುಟುಂಬಗಳನ್ನು ಅರಣ್ಯ ಇಲಾಖೆ ಗುರುತಿಸಿದೆ. ಅವುಗಳ ಪೈಕಿ 650 ಕುಟುಂಬಗಳು ಸ್ವಇಚ್ಛೆಯಿಂದ ಹೊರಬರಲು ಒಪ್ಪಿದ್ದು, 350 ಕುಟುಂಬಗಳ ಸ್ಥಳಾಂತರವೂ ಆಗಿದೆ. ಇನ್ನೂ 300ಕ್ಕೂ ಹೆಚ್ಚು ಕುಟುಂಬಗಳು ಹೊರಬರಲು ಸಾಧ್ಯವಾಗಿಲ್ಲ. ಅದಕ್ಕೆ ಬೇಕಿರುವ ಪ್ರಕ್ರಿಯೆ ಮತ್ತು ಜಾಗ ಗುರುತಿಸುವ ಕೆಲಸ ಆಗಿಲ್ಲ. ಸ್ಥಳಾಂತರದ ಕನವರಿಕೆಯಲ್ಲೇ ಕಾಡಿನ ವಾಸ ಮುಂದುವರಿದಿದೆ.

ಸ್ವಯಂ ಸ್ಥಳಾಂತರಕ್ಕೆ ಒಪ್ಪದ ಕುಟುಂಬಗಳು 650ಕ್ಕೂ ಹೆಚ್ಚಿವೆ. ಅವುಗಳಲ್ಲಿ ಬಹುತೇಕ ಗಿರಿಜನರಿಗೆ ತಾವು ವಾಸವಿರುವ ಜಾಗದ ಹಕ್ಕುಪತ್ರವೂ ಇಲ್ಲ. ಅಲ್ಲಿಂದ ಹೊರಬಂದರೆ ಬರಿಗೈ ಆಗುವ ಆತಂಕ ಅವರದು.

'1914-16ರ ಅವಧಿಯಲ್ಲಿ ಮೀಸಲು ಅರಣ್ಯ ಎಂದು ಗುರುತಿಸಿದ್ದು ಗುಡ್ಡಗಾಡು ಪ್ರದೇಶ ಮಾತ್ರ. ಅದೇ ಜಾಗವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನ ಎಂದು ಆ ನಂತರ ಘೋಷಣೆ ಮಾಡಲಾಯಿತು. ಆ ಜಾಗದಲ್ಲಿ ಆಗಲೂ ಜನವಸತಿ ಇರಲಿಲ್ಲ, ಈಗಲೂ ಇಲ್ಲ. ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿರುವ ಕಂದಾಯ ಜಾಗದಲ್ಲಿ ಜನವಸತಿ ಇದೆ. ಕಂದಾಯ ಭೂಮಿಯಲ್ಲಿರುವ ಜನ ಸ್ವಇಚ್ಛೆಯಿಂದ ಪುನರ್ವಸತಿ ಕೋರಬೇಕು ಎನ್ನುವುದು ಎಷ್ಟುಸರಿ' ಎಂಬುದು ಹೋರಾಟಗಾರ ಕಲ್ಕುಳಿ ವಿಠಲ ಹೆಗ್ಡೆ ಅವರ ಪ್ರಶ್ನೆ.


'ರಾಷ್ಟ್ರೀಯ ಉದ್ಯಾನದ ಒಳಗೂ ಕಂದಾಯ ಜಾಗದಲ್ಲಿ ಜನವಸತಿ ಇದೆ. ಆ ಜಾಗವನ್ನು ಅರಣ್ಯ ಎಂದು ಘೋಷಿಸಿ ಸರ್ಕಾರವೇ ಅವರಿಗೆ ಪುನರ್ವಸತಿಗೆ ಕಲ್ಪಿಸಬಹುದು. ಆದರೆ, 2006ರ ಅರಣ್ಯ ಕಾಯ್ದೆ ಪ್ರಕಾರ ಕಾಡಿನಿಂದ ಹೊರಗೆ ಬಂದವರಿಗೆ 10 ಎಕರೆ ಜಾಗ ಸೇರಿ ಮೂರು-ನಾಲ್ಕು ಪಟ್ಟು ಹೆಚ್ಚಿನ ಪರಿಹಾರ ಕೊಡಬೇಕಾಗುತ್ತದೆ. ಜನರೇ ಸ್ವಇಚ್ಛೆಯಿಂದ ಅಲ್ಲಿಂದ ಖಾಲಿ ಮಾಡಿದರೆ ಕಡಿಮೆ ಪರಿಹಾರದಲ್ಲಿ ಜನರನ್ನು ಓಡಿಸಬಹುದು ಎಂಬುದು ಅರಣ್ಯ ಇಲಾಖೆಯ ಲೆಕ್ಕಾಚಾರ' ಎನ್ನುತ್ತಾರೆ.

'ಯಾವುದೇ ಮೂಲಸೌಕರ್ಯ ಕಲ್ಪಿಸದೆ ಅವರು ಸ್ವಯಂ ಪುನರ್ವಸತಿಗೆ ಅರ್ಜಿ ಸಲ್ಲಿಸುವಂತೆ ಮಾಡುವುದು ಅವರ ಆಲೋಚನೆ. ಆದಕ್ಕಾಗಿಯೇ ಮೂಲಸೌಕರ್ಯ ನೀಡದೆ ಅವರನ್ನು ರೋಸಿ ಹೋಗುವಂತೆ ಸರ್ಕಾರ ಮಾಡಿದೆ. ಕಂದಾಯ ಜಾಗದಲ್ಲೇ ಗೇಟ್‌ಗಳನ್ನು ನಿರ್ಮಿಸಿಕೊಂಡು ಒಳಗಿರುವ ಜಾಗವೆಲ್ಲಾ ತಮ್ಮದೇ ಎಂಬಂತೆ ಅರಣ್ಯ ಇಲಾಖೆ ನಡೆದು ಕೊಳ್ಳುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.



ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿರುವ ಜನವಸತಿ	
ದಕ್ಷಿಣ ಕನ್ನಡ	51
ಚಿಕ್ಕಮಗಳೂರು	30
ಉಡುಪಿ	27
ಒಟ್ಟು	108

ಕೃಷಿ ಬಿಟ್ಟು ಕೂಲಿ ಜೀವನ



ಶೃಂಗೇರಿ ತಾಲ್ಲೂಕಿನ ಗ್ರಾಮದ ರಸ್ತೆಯ ಸ್ಥಿತಿ

ಕಾಡಿನ ನಡುವೆ ಇರುವ ಜನ ಕೃಷಿ ಮಾಡಲು ಸಾಧ್ಯವಾಗದೆ ತಮ್ಮ ಜಮೀನು ಪಾಳುಬಿಟ್ಟಿದ್ದಾರೆ. ಜಮೀನು ಉಳಿಯುವುದಿಲ್ಲ ಎಂಬ ಆತಂಕ ಕೃಷಿ ಕೈಬಿಡುವಂತೆ ಮಾಡಿದೆ. ಕೃಷಿ ಮಾಡಿದರೂ ಕಾಡುಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳುವುದು ಕಷ್ಟ. ಕೃಷಿ ಬಿಟ್ಟು ಹಲವರು ದೂರದೂರಿನ ಕಾಫಿ ತೋಟಗಳಲ್ಲಿ ಕೂಲಿ ಮಾಡುತ್ತಿದ್ದಾರೆ.

ವಿದ್ಯುತ್ ಕಾಣದ ಹಳ್ಳಿಗಳು ಇಂದಿಗೂ ಇವೆ. ಚಿಮಿಣಿ ದೀಪದಲ್ಲಿ ಬದುಕು ಸಾಗಿಸುತ್ತಿದ್ದಾರೆ. ಕುದುರೆಮುಖ ಟೌನ್‌ಶಿಪ್‌ಗೆ ಹೊಂದಿಕೊಂಡಂತೆ ಇರುವ ವಿನೋಭ ನಗರದ ಕಾರ್ಮಿಕರ ಮನೆಗಳಿಗೆ ವಿದ್ಯುತ್ ಕಲ್ಪಿಸಲು ಅರಣ್ಯ ಇಲಾಖೆ ಅವಕಾಶ ನೀಡುತ್ತಿಲ್ಲ. ಸೀಮೆಎಣ್ಣೆಯೂ ಸಿಗದೆ ಕತ್ತಲಿನಲ್ಲೇ ಜೀವನ ಸಾಗಿಸುತ್ತಿದ್ದಾರೆ.

ಡಿಸೆಂಬರ್ ಬಳಿಕ 'ಭಿನ್ನರ' ಬಾಗಿಲು ಬಂದ್: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಬಿಜೆಪಿಯಲ್ಲಿರುವ ಐದಾರು ಬಾಗಿಲುಗಳು ಡಿಸೆಂಬರ್ ಬಳಿಕ ಮುಚ್ಚಲಿವೆ. ಒಂದೇ ಬಾಗಿಲು ಆಗಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಹೇಳಿದರು.

ಬಿಜೆಪಿ ರಾಜ್ಯ ಘಟಕಗಳ ಅಧ್ಯಕ್ಷರ ಸಭೆಯಲ್ಲಿ ಭಾಗವಹಿಸಲು ಇಲ್ಲಿ ಬಂದಿರುವ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತಿತರರ ಟೀಕಾಪ್ರಹಾರಗಳ ಕುರಿತು ಪ್ರತಿಕ್ರಿಯಿಸಿದರು. 'ಪಕ್ಷದ 2-3 ನಾಯಕರು ಪ್ರತ್ಯೇಕವಾಗಿ ವಕ್ಫ್ ಹೋರಾಟಕ್ಕೆ ಮುಂದಾಗಿದ್ದಾರೆ. ನಾನು ಅಧ್ಯಕ್ಷ ಆಗಿರುವುದನ್ನು ಅರಗಿಸಿಕೊಳ್ಳಲು ಅವರಿಗೆ ಸಮಯ ಬೇಕು. ಪಕ್ಷದ ಉಳಿದ ಹಿರಿಯ ನಾಯಕರು ನನ್ನ ಜತೆಗೆ ಇದ್ದಾರೆ. ಪಕ್ಷದ ನಾಯಕರ ವಿರುದ್ಧ ಚಾಡಿ ಹೇಳಲು ಇಲ್ಲಿಗೆ ಬಂದಿಲ್ಲ. ಅಷ್ಟು ಪುರುಸೊತ್ತು ನನಗಿಲ್ಲ' ಎಂದು ಹೇಳಿದರು.

ರಾಜ್ಯದ ಸರ್ಕಾರಕ್ಕೆ ಅರೆಬೆಂದ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಲು ಆಗುತ್ತಿಲ್ಲ. ಹೀಗಾಗಿ, ದಿನಕ್ಕೊಂದು ನಿಯಮ ರೂಪಿಸುತ್ತಿದ್ದಾರೆ. ಮುಖ್ಯಮಂತ್ರಿಯವರು ಬಡವರ ಮೇಲೆ ಪ್ರಹಾರ ಮಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು..

ನಬಾರ್ಡ್ ವಿಷಯದಲ್ಲಿ ಸಿದ್ದರಾಮಯ್ಯ ಅವರು ನಾಟಕ ಮಾಡುತ್ತಿದ್ದಾರೆ. ಕೇಂದ್ರದಿಂದ ಬರುವ ಹಣದ ಕುರಿತು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಬ್ಯಾಂಕ್‌ಗಳು ಶೇ 40ರಷ್ಟು ಮೊತ್ತವನ್ನು ಕೃಷಿ ಕ್ಷೇತ್ರಕ್ಕೆ ಕೊಡುತ್ತಿರುವುದು ಸಿ.ಎಂಗೆ ತಿಳಿದಿಲ್ಲವೇ? ಕಾಂಗ್ರೆಸ್ ಸರ್ಕಾರ ಉರುಳಿಸಲು ಬಿಜೆಪಿ ಆಸಕ್ತಿ ಇಲ್ಲ. ಸಿ.ಎಂ ನಡವಳಿಕೆಯಿಂದ ಕಾಂಗ್ರೆಸ್ ಶಾಸಕರೇ ದಂಗೆ ಏಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಅಲ್ಟ್ರಾಸೌಂಡ್ ಕೊಠಡಿಯಲ್ಲಿ ಸಂಬಂಧಿಕರಿಗೆ ನಿರ್ಬಂಧ

ಚಿತ್ರ, ವಿಡಿಯೊ ಬಳಸಿ ಭ್ರೂಣಲಿಂಗ ಪತ್ತೆ

• ಸಂತೋಷ ಜಿಗಳಿಕೊಪ್ಪ

ಹಾವೇರಿ: 'ಗರ್ಭಿಣಿಯರ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ವೇಳೆ ಮಾನಿಟರ್‌ನ ಚಿತ್ರ ಮತ್ತು ವಿಡಿಯೊ ಚಿತ್ರಿಸಿಕೊಂಡು, ಅವುಗಳ ನೆರವಿನಿಂದ ಸಂಬಂಧಿಕರು, ಭ್ರೂಣಲಿಂಗ ಪತ್ತೆ ಮಾಡಿಸುತ್ತಿದ್ದಾರೆ' ಎಂದು ರಾಜ್ಯದ ಕೆಲ ರೇಡಿಯಾಲಜಿಸ್ಟ್‌ಗಳು ಮತ್ತು ವೈದ್ಯರು, ರಾಜ್ಯ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿದ್ದಾರೆ.

ಇದರ ಹಿನ್ನೆಲೆಯಲ್ಲಿ ಎಲ್ಲಾ ಸ್ಕ್ಯಾನಿಂಗ್ ಕೇಂದ್ರಗಳಿಗೆ ಸುತ್ತೋಲೆ ರವಾನಿಸಿರುವ ರಾಜ್ಯ ಸರ್ಕಾರವು, 'ಗರ್ಭಿಣಿ ಹೊರತುಪಡಿಸಿ ಅವರ ತಾಯಿ-ತಂದೆ ಸೇರಿ ಯಾರನ್ನೂ ಒಳಗೆ ಕಳುಹಿಸಬಾರದು.ಒಂದುವೇಳೆಅವಕಾಶ ಕಲ್ಪಿಸಿದ್ದು ಗೊತ್ತಾದರೆ, ಕೇಂದ್ರದವರನ್ನು ಹೊಣೆಯನ್ನಾಗಿಸಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದೆ.

ಮುಖ್ಯಾಂಶಗಳು

- ಮಾಹಿತಿ ನೀಡಿದ ರೇಡಿಯಾಲಜಿಸ್ಟ್‌ಗಳು
- ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ-ವಿಡಿಯೊ ಹಂಚಿಕೆ
- ನಿಯಮ ಪಾಲಿಸದಿದ್ದರೆ, ಕೇಂದ್ರಗಳ ವಿರುದ್ಧ ಕ್ರಮ

'ಗರ್ಭಿಣಿಯ ಪತಿ, ತಾಯಿ ಸೇರಿ ಯಾರಿಗೂ ಅಲ್ಟ್ರಾಸೌಂಡ್ ಕೊಠಡಿ ಪ್ರವೇಶಿಸಲು ಅವಕಾಶವಿಲ್ಲ. ನಿರ್ಬಂಧ ಇದೆ' ಎಂದು ಕೊಠಡಿಯ ಹೊರಗೆ ಫಲಕ ಹಾಕಬೇಕು. ಹೆಚ್ಚುವರಿ ಮಾನಿಟರ್‌ಗಳನ್ನು ಅಳವಡಿಸಬಾರದು. ರಾಜ್ಯದ ಎಲ್ಲಾ ಸ್ಕ್ಯಾನಿಂಗ್ ಕೇಂದ್ರ, ಇಮೇಜಿಂಗ್ ಕೇಂದ್ರ ಮತ್ತು ಪ್ರಯೋಗಾಲಯದವರು ಇದನ್ನು ಪಾಲಿಸಬೇಕು' ಎಂದು ಸೂಚಿಸಲಾಗಿದೆ.



ಗರ್ಭಿಣಿಯರ ಹೊಟ್ಟೆಯಲ್ಲಿರುವ ಮಗುವಿನ ಆರೋಗ್ಯದ ಸ್ಥಿತಿ ತಿಳಿಯಲು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಲಾಗುತ್ತದೆ. ಬಹುತೇಕ ಗರ್ಭಿಣಿಯರು ಭಯಪಡುವ ಕಾರಣ ತಾಯಿ ಅಥವಾ ಸಂಬಂಧಿಕರೊಬ್ಬರು ಕೊಠಡಿಯೊಳಗೆ ಹೋಗುತ್ತಿದ್ದರು. ಅವರು ಅಲ್ಟ್ರಾಸೌಂಡ್ ಮಾನಿಟರ್‌ನಲ್ಲಿ ಬರುವ ಚಿತ್ರಗಳನ್ನು ಕ್ಲಿಕ್ಕಿಸುವುದರ ಜೊತೆಗೆ ವಿಡಿಯೊ ಮಾಡಿಕೊಳ್ಳುತ್ತಿದ್ದರು. ನಂತರ ಅದನ್ನು ಪರಿಚಯಸ್ಥ ಸ್ತ್ರೀರೋಗ ತಜ್ಞರು ಹಾಗೂ ರೇಡಿಯಾಲಜಿಸ್ಟ್‌ಗಳಿಗೆ ತೋರಿಸಿ ಲಿಂಗ ತಿಳಿದುಕೊಳ್ಳುತ್ತಿದ್ದರು. ಇನ್ನೂ ಕೆಲವರು ಆ ಚಿತ್ರ ಮತ್ತು ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿ ಬಿಡುತ್ತಿದ್ದರು.

ಇದರ ಹಿನ್ನೆಲೆಯಲ್ಲಿ ಪಿ.ಸಿ ಮತ್ತು ಪಿ.ಎನ್.ಡಿ.ಸಿ. (ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ) ಕಾಯ್ದೆಯ ರಾಜ್ಯ ಸಕ್ಷಮ ಪ್ರಾಧಿಕಾರ ಹಾಗೂ ಆರೋಗ್ಯ ಇಲಾಖೆಯ ಯೋಜನಾ ನಿರ್ದೇಶಕರು, ಅಲ್ಟ್ರಾಸೌಂಡ್ ಕೊಠಡಿಗಳಲ್ಲಿ ಪಾಲಿಸಬೇಕಾದ ನಿಯಮಗಳನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಟ್ರಾಸೌಂಡ್‌ನ ಚಿತ್ರ, ವಿಡಿಯೊ ಬಳಸಿ ಲಿಂಗ ಪತ್ತೆ ಮಾಡುವುದು ಪ್ರಾಧಿಕಾರಕ್ಕೆ ಗೊತ್ತಾಗಿದೆ. ಇದರ ತಡೆಗೆ, ಸುತ್ತೋಲೆ ಹೊರಡಿಸಲಾಗಿದೆ

ಡಾ. ರಾಜೇಂದ್ರ ಸುರಗಿಹಳ್ಳಿ, ಜಿಲ್ಲಾ ಆರೋಗ್ಯಾಧಿಕಾರಿ, ಹಾವೇರಿ

ಹೇರ್ ಡ್ರಯರ್ ಸ್ಫೋಟ: ಕೊಲೆಗೆ ಸಂಚು

ಪ್ರಜಾವಾಣಿ ವಾರ್ತೆ



ಸಿದ್ದಪ್ಪ

ಬಾಗಲಕೋಟೆ: ಇಳಕಲ್‌ನ ಹೇರ್ ಡ್ರಯರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ ಪೊಲೀಸರು, ಕೊಲೆ ಯತ್ನ ಆರೋಪದ ಮೇಲೆ ಸಿದ್ದಪ್ಪ ಶೀಲವಂತ ಎಂಬುವವನನ್ನು ಬಂಧಿಸಿದ್ದಾರೆ.

'ಸ್ಫೋಟದಿಂದ ಗಾಯಗೊಂಡಿರುವ ಬಸವರಾಜೇಶ್ವರಿ ಯರನಾಳ ಮತ್ತು ಆರೋಪಿ ಸಿದ್ದಪ್ಪ ಶೀಲವಂತ ಇಬ್ಬರೂ ಕುಷ್ಟಗಿ ತಾಲ್ಲೂಕಿನ ಪುರತಗೇರಿಯವರು. ಮದುವೆಗೂ ಮುನ್ನ ಇಬ್ಬರಿಗೂ ಪರಿಚಯವಿತ್ತು, ಅವರ ಪತಿ ನಿಧನದ ಬಳಿಕ ಮತ್ತೆ ಸಂಪರ್ಕಕ್ಕೆ ಬಂದಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಶಶಿಕಲಾ ಹಾಗೂ ಬಸವರಾಜೇಶ್ವರಿ ಸ್ನೇಹಿತೆಯರು. ಇವರಿಬ್ಬರ ಗಂಡಂದಿರು ಸೇನೆಯಲ್ಲಿದ್ದು, ಮೃತಪಟ್ಟಿದ್ದಾರೆ. ಸಿದ್ದಪ್ಪನ ಪರಿಚಯವಾದಾಗ, ಆತನಿಂದ ದೂರ ಇರುವಂತೆ ಬಸವರಾಜೇಶ್ವರಿಗೆ ಶಶಿಕಲಾ ಕಿವಿಮಾತು ಹೇಳಿದ್ದರು. ಇದರಿಂದ ಸಿಟ್ಟಿಗೆದ್ದ ಸಿದ್ದಪ್ಪ, ಶಶಿಕಲಾ ಅವರ ಕೊಲೆಗೆ ಸಂಚು ರೂಪಿಸಿದ' ಎಂದು ಮಾಹಿತಿ ನೀಡಿದರು.

'ಗ್ರಾನೈಟ್ ಕಂಪನಿಯಲ್ಲಿ ಸೂಪರ್‌ವೈಸರ್ ಆಗಿರುವ ಸಿದ್ದಪ್ಪ, ಸ್ಫೋಟಕವನ್ನು ಹೇರ್ ಡ್ರಯರ್‌ಗೆ ಜೋಡಿಸಿ, ಶಶಿಕಲಾಗೆ ಕೊರಿಯರ್ ಕಳುಹಿಸಿದ್ದ. ಊರಿನಲ್ಲಿ ಇರದಿದ್ದರಿಂದ ಪಾರ್ಸಲ್ ತರಲು ಬಸವರಾಜೇಶ್ವರಿಗೆ ಶಶಿಕಲಾ ಹೇಳಿದ್ದರು. ಪಾರ್ಸಲ್‌ನ್ನು ತಂದು ಅದರಲ್ಲಿದ್ದ ಹೇರ್ ಡ್ರಯರ್ ಬಳಸಲು ಮುಂದಾದಾಗ, ಅದು ಸ್ಫೋಟಗೊಂಡು ಬಸವರಾಜೇಶ್ವರಿ ಕೈ ಬೆರಳುಗಳು ಛಿದ್ರಗೊಂಡವು' ಎಂದು ಅವರು ತಿಳಿಸಿದರು.

'ಇಳಕಲ್‌ನಲ್ಲಿದ್ದ ಬಸವರಾಜೇಶ್ವರಿ ಮನೆಗೆ ಆಗಾಗ್ಗೆ ಹೋಗುತ್ತಿದ್ದುದನ್ನು ಸಿದ್ದಪ್ಪ ಒಪ್ಪಿಕೊಂಡಿದ್ದಾನೆ' ಎಂದು ಅಮರನಾಥ ರೆಡ್ಡಿ ಹೇಳಿದರು.

ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ₹448 ಕೋಟಿ ಬಿಡುಗಡೆ

ನವದೆಹಲಿ: ಕೇಂದ್ರ ಸರ್ಕಾರವು ಈ ಆರ್ಥಿಕ ವರ್ಷದಲ್ಲಿ ಕರ್ನಾಟಕದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ₹448.29 ಕೋಟಿ ಮೊದಲ ಕಂತನ್ನು ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರವು ಪಂಚಾಯತ್ ರಾಜ್ ಸಚಿವಾಲಯ ಮತ್ತು ಜಲಶಕ್ತಿ ಸಚಿವಾಲಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಆಯೋಗದ ಅನುದಾನ ಬಿಡುಗಡೆ ಮಾಡಲು ಶಿಫಾರಸು ಮಾಡುತ್ತದೆ. ನಂತರ ಅದನ್ನು ಹಣಕಾಸು ಸಚಿವಾಲಯ ಬಿಡುಗಡೆ ಮಾಡುತ್ತದೆ. ಮಂಜೂರು ಮಾಡಿದ ಅನುದಾನವನ್ನು ಆರ್ಥಿಕ ವರ್ಷದಲ್ಲಿ 2 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಈ ಮೊತ್ತವನ್ನು ರಾಜ್ಯದ 5,949 ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಕೊಡಗಿನ ಸೇನಾನಿಗಳ ಅವಹೇಳನ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗಿನ ವೀರ ಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರ ಬಗ್ಗೆ ವಾಟ್ಸ್‌ಆ್ಯಪ್ ಗ್ರೂಪ್‌ವೊಂದರಲ್ಲಿ ಅವಹೇಳನಕಾರಿ ಪದ ಬಳಸಿರುವುದರ ವಿರುದ್ಧ ಕೊಡಗಿನಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ವಿವಿಧ ಸಂಘಟನೆಗಳು ಆರೋಪಿಯನ್ನು ಪತ್ತೆ ಹಚ್ಚಿ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿವೆ.

ಈ ಕುರಿತು ಕೊಡವ ಸಮಾಜ, ಬಿಜೆಪಿಯ ಕೊಡಗು ಜಿಲ್ಲಾ ಘಟಕದ ಸೇರಿದಂತೆ ಹಲವು ಸಂಘಟನೆಗಳು ಎಸ್ಪಿಗೆ ದೂರು ನೀಡಿವೆ. 'ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಹ ಒತ್ತಾಯಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಎಸ್ಪಿ ಕೆ.ರಾಮರಾಜನ್, 'ಅದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಸಪ್ತಸಾಗರ (ಕಡಲು) ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಅವಹೇಳನಕಾರಿ ಸಂದೇಶವಿದ್ದು, ಗ್ರೂಪ್‌ನ ಅಡ್ಮಿನ್ ಕರೆಸಿ ಅವಹೇಳನಕಾರಿಯಾದ ಸಂದೇಶ ಹಾಕಿದವರ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಶೀಘ್ರದಲ್ಲೇ ಆರೋಪಿಯನ್ನು ಬಂಧಿಸಲಾಗುವುದು' ಎಂದು ತಿಳಿಸಿದರು.

ನೀಟ್, ಜೆಇಇ ತರಬೇತಿ ಎಐಡಿಎಸ್‌ಒ ಆಕ್ಷೇಪ

ಬೆಂಗಳೂರು: ಸರ್ಕಾರಿ, ಅನುದಾನಿತ ಪಿಯು ಕಾಲೇಜುಗಳ 25 ಸಾವಿರ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಟ್, ಜೆಇಇ ತರಬೇತಿ ನೀಡುವುದಾಗಿ ಘೋಷಿಸಿರುವ ರಾಜ್ಯ ಸರ್ಕಾರ ಉಳಿದ ವಿದ್ಯಾರ್ಥಿಗಳಿಗೆ ತಾರತಮ್ಯ ಮಾಡುತ್ತಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.



ಸುಭಾಷಿತ


ಕೀರ್ತಿಯನ್ನು ಗಳಿಸುವುದು ಕಷ್ಟ, ನಂತರ ಉಳಿಸಿಕೊಳ್ಳುವುದು ಕಷ್ಟ, ಕಳೆದುಕೊಂಡರಂತೂ ಕಡೆಯವರೆಗೂ ಕಷ್ಟ.

-ಬೀಚಿ

ಅದಾನಿ ವಿರುದ್ಧದ ಆರೋಪ ಸತ್ಯ ಹೊರಬರಲು ಕ್ರಮ ಬೇಕಿದೆ

ಹಣಕಾಸಿನ ಅವ್ಯವಹಾರ ಮತ್ತು ಪಿತೂರಿ ನಡೆಸಿದ್ದಾರೆ ಎಂದು ಉದ್ಯಮಿ ಗೌತಮ್ ಅದಾನಿ ಅವರ ವಿರುದ್ಧ ಅಮೆರಿಕದ ನ್ಯಾಯಾಲಯವೊಂದರಲ್ಲಿ ಆರೋಪ ಹೊರಿಸಿರುವುದು, ಈ ಹಿಂದೆ ಅಮೆರಿಕದ ಶಾರ್ಟ್‌ಸೆಲ್ಲರ್ 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆಯು ಅದಾನಿ ಸಮೂಹವನ್ನು ಗುರಿಯಾಗಿಸಿ ಮಾಡಿದ್ದ ಆರೋಪಗಳಿಗಿಂತ ಗಂಭೀರವಾದುದು. ಈಗ ಅದಾನಿ ಅವರ ವಿರುದ್ಧ ಆರೋಪಗಳನ್ನು ಹೊರಿಸಿರುವುದು ಅಮೆರಿಕದ ಷೇರುಪೇಟೆ ನಿಯಂತ್ರಣ ಸಂಸ್ಥೆ ಎಸ್‌ಇಸಿ. ಇದು ಖಾಸಗಿ ಸಂಸ್ಥೆ ಅಲ್ಲ. ಅದಾನಿ ಗ್ರೀನ್ ಎನರ್ಜಿ ಕಂಪನಿಯು ವಿದ್ಯುತ್ ಪೂರೈಕೆ ಒಪ್ಪಂದವನ್ನು ಪಡೆದುಕೊಳ್ಳಲು ಭಾರತದ ಕೆಲವು ರಾಜ್ಯಗಳ ಅಧಿಕಾರಿಗಳಿಗೆ ಅಂದಾಜು ₹2,100 ಕೋಟಿಯಷ್ಟು ಲಂಚವನ್ನು ನೀಡಿದೆ ಎಂಬುದು ಆರೋಪದಲ್ಲಿರುವ ಅಂಶ. ಈ ಗುತ್ತಿಗೆಗಳಿಂದ 20 ವರ್ಷಗಳ ಅವಧಿಯಲ್ಲಿ ಅಂದಾಜು ₹16 ಸಾವಿರ ಕೋಟಿ ಲಾಭ ಆಗುತ್ತದೆ ಎನ್ನಲಾಗಿದೆ.

ಅಮೆರಿಕದ ನ್ಯೂಯಾರ್ಕ್‌ನ ನ್ಯಾಯಾಲಯವೊಂದು ಅದಾನಿ ಹಾಗೂ ಅವರ ಕೆಲವು ಜೊತೆಗಾರರ ವಿರುದ್ಧ ಬಂಧನ ವಾರಂಟ್ ಹೊರಡಿಸಿದೆ. ಲಂಚದ ವಿಚಾರವನ್ನು ಮುಚ್ಚಿಟ್ಟು ಕಂಪನಿಯು ಸಾಲದಾತರು ಹಾಗೂ ಹೂಡಿಕೆದಾರರಿಂದ ಅಂದಾಜು ₹25 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ಸಂಗ್ರಹಿಸಿದೆ ಎಂದು ಆರೋಪಿಸಲಾಗಿದೆ. ಆರೋಪದ ಸಂಗತಿ ಬಹಿರಂಗವಾದ ನಂತರದಲ್ಲಿ ಅದಾನಿ ಸಮೂಹದ ಹಲವು ಕಂಪನಿಗಳ ಷೇರುಮೌಲ್ಯ ಕುಸಿದಿದೆ. ಆರೋಪಗಳಿಗೆ ಆಧಾರವಾಗಿ ಮಾತುಕತೆಗಳಿಗೆ ಸಂಬಂಧಿಸಿದ ದಾಖಲೆಪತ್ರಗಳನ್ನು ಇರಿಸಲಾಗಿದೆ. ಅಮೆರಿಕದಲ್ಲಿ ಸಂಗ್ರಹಿಸಲಾದ ಹಣವನ್ನು ಭಾರತದಲ್ಲಿ ಲಂಚ ಕೊಡಲು ಬಳಸಲಾಗಿದೆ ಎಂದು ಆರೋಪಿಸಲಾಗಿದೆ. ಲಂಚ ನೀಡುವ ಯೋಜನೆಯ ಭಾಗವಾಗಿ ಅಧಿಕಾರಿಯೊಬ್ಬರನ್ನು ಅದಾನಿ ಅವರು ಖುದ್ದಾಗಿ ಭೇಟಿ ಮಾಡಿದ್ದರು ಎಂದು ಅಮೆರಿಕದ ನ್ಯಾಯಾಲಯದಲ್ಲಿನ ಆರೋಪವು ಹೇಳುತ್ತದೆ. ಯೋಜನೆಯನ್ನು ಕಾರ್ಯಗತ ಮಾಡುವ ಬಗೆ ಹೇಗೆ ಎಂಬುದರ ಕುರಿತು ಆರೋಪಿಗಳು ಚರ್ಚೆ ನಡೆಸಿದ್ದರು, ಅವರು ಈ ಸಂಬಂಧವಾಗಿ ವಿದ್ಯುನ್ಮಾನ ಆ್ಯಪ್ ಒಂದನ್ನು ಬಳಸಿದ್ದರು ಎಂದೂ ವಿವರಿಸಲಾಗಿದೆ. ಆರೋಪಿಗಳು ತಮ್ಮ ಯೋಜನೆಯನ್ನು ಹಾಗೂ ಲಂಚದ ನಿರ್ದಿಷ್ಟ ವಿವರಗಳನ್ನು ತಮ್ಮ ಮೊಬೈಲ್ ಫೋನ್‌ಗಳಲ್ಲಿ ದಾಖಲು ಮಾಡಿಕೊಂಡಿದ್ದರು ಎಂದು ಆರೋಪದಲ್ಲಿ ಹೇಳಲಾಗಿದೆ. ಈ ಆರೋಪಗಳಿಗೆ ಹೋಲಿಸಿದರೆ ಹಿಂಡನ್‌ಬರ್ಗ್ ರಿಸರ್ಚ್ ಮಾಡಿದ ಆರೋಪಗಳು ಇಷ್ಟು ಗಂಭೀರವಾಗಿರಲಿಲ್ಲ. ಆ ಆರೋಪಗಳು ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವುದರ ಕುರಿತಾಗಿದ್ದವು. ಆದರೆ ಆ ಆರೋಪಗಳನ್ನು ಕೂಡ ಭಾರತದ ಸಂಸ್ಥೆಗಳು ಹಾಗೂ ಸರ್ಕಾರ ಸರಿಯಾಗಿ, ಆಳವಾಗಿ ತನಿಖೆಗೆ ಒಳಪಡಿಸಲಿಲ್ಲ.



ಈ ಆರೋಪದಲ್ಲಿನ ಸತ್ಯಾಸತ್ಯತೆಯನ್ನು ಹೊರಗೆ ಎಳೆಯುವಲ್ಲಿ ಅಮೆರಿಕಕ್ಕಿಂತ ಭಾರತವೇ ಹೆಚ್ಚು ಆಸಕ್ತಿ ತೋರಬೇಕಿದೆ

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅದಾನಿ ವಿರುದ್ಧದ ಆರೋಪಗಳ ವಿಚಾರವಾಗಿ ಸರಿಯಾದ ಕ್ರಮ ತೆಗೆದುಕೊಂಡಂತೆ ಕಾಣಲಿಲ್ಲ. ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರೂ ಕೆಲವು ಪ್ರಶ್ನೆಗಳಿಗೆ ಗುರಿಯಾಗಬೇಕಾಯಿತು. ಅದಾನಿ ಸಮೂಹವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮತ್ತು ಆಡಳಿತಾರೂಢ ಬಿಜೆಪಿಗೆ ನಿಕಟವಾಗಿದೆ ಎಂದು ಪರಿಗಣಿತವಾಗಿದೆ. ಆದರೆ ತಪ್ಪು ಮಾಡಿರುವ ಆರೋಪ ಎದುರಾದಾಗ ಇದು ಗುರಾಣಿಯಂತೆ ಬಳಕೆಯಾಗಬಾರದು. ಆರೋಪಗಳೆಲ್ಲವೂ ಸುಳ್ಳು ಎಂದು ಅದಾನಿ ಸಮೂಹ ಹೇಳಿದೆಯಾದರೂ ಒಂದೇ ಮಾತಿಗೆ ಎಲ್ಲವನ್ನೂ ನಿರಾಕರಿಸುವುದು ವಿಶ್ವಾಸಾರ್ಹ ಪ್ರತಿಕ್ರಿಯೆ ಆಗುವುದಿಲ್ಲ. ಅದಾನಿ ಸಮೂಹದ ವಿರುದ್ಧ ಆರೋಪಗಳು ಬಂದಾಗಲೆಲ್ಲ ಬಿಜೆಪಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆ ಸಮೂಹವನ್ನು ಸಮರ್ಥಿಸಲು ಮುಂದಾಗುವಂತೆ ಕಾಣುತ್ತದೆ. ಈಗ ಪಕ್ಷವು ಕಾನೂನಿಗೆ ಅನುಗುಣವಾಗಿ ಕ್ರಮ ಆಗುತ್ತದೆ ಎಂದು ಹೇಳಿದೆ. ಆದರೆ ಸರ್ಕಾರವು ಆ ರೀತಿ ಆಗುವಂತೆ ನೋಡಿಕೊಳ್ಳಬೇಕಿದೆ. ಆರೋಪಗಳ ಬಗ್ಗೆ ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ಆಗಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ. ಈಗಿನ ಆರೋಪದಲ್ಲಿ ಬೊಫೋರ್ಸ್ ಹಗರಣದಲ್ಲಿ ಇದ್ದಂತಹ ಎಲ್ಲ ಅಂಶಗಳೂ ಕಾಣುತ್ತಿವೆ- ಅಂದರೆ, ವಿದೇಶದಿಂದ ಆರೋಪ ಬಂದಿರುವುದು, ಗುತ್ತಿಗೆಗೆ ಲಂಚ ನೀಡಿರುವುದು, ಪಾವತಿಯ ಬಗ್ಗೆ ದಾಖಲೆ ಇಟ್ಟುಕೊಂಡಿರುವುದು, ಸಂಕೇತನಾಮಗಳನ್ನು ಬಳಕೆ ಮಾಡಿರುವುದು. ಈ ಆರೋಪದಲ್ಲಿನ ಸತ್ಯಾಸತ್ಯತೆಯನ್ನು ಹೊರಗೆ ಎಳೆಯುವಲ್ಲಿ ಅಮೆರಿಕಕ್ಕಿಂತ ಭಾರತವೇ ಹೆಚ್ಚು ಆಸಕ್ತಿ ತೋರಬೇಕಿದೆ.

ದಿನದ ಟ್ವೀಟ್

ವಾಯುಮಾಲಿನ್ಯ: ಎಚ್ಚರಿಕೆಯ ಗಂಟೆ




ಭಾರತದ ವಾಯುಮಾಲಿನ್ಯ ಬಿಕ್ಕಟ್ಟು ಎಚ್ಚರಿಕೆಯ ಗಂಟೆಯಂತಿದೆ. ರಾಷ್ಟ್ರದಾದ್ಯಂತ ಇರುವ ಅಪಾಯಕಾರಿ ವಾಯುಗುಣಮಟ್ಟವು ಆರೋಗ್ಯ ಮತ್ತು ಪರಿಸರಕ್ಕೆ ಹಾನಿಕಾರಕವಾಗಿದೆ. ಸರ್ಕಾರವು ಮಾಲಿನ್ಯ ನಿಯಂತ್ರಣಕ್ಕೆ ಆದ್ಯತೆ ನೀಡಲೇಬೇಕು ಮತ್ತು ನೀತಿಗಳನ್ನು ತುರ್ತಾಗಿ ಜಾರಿಗೆ ತರಬೇಕು. ದೇಶವನ್ನು ಮಾಲಿನ್ಯಮುಕ್ತ ಮಾಡಲು ನಾಗರಿಕರು ಸಹ ಕಾರ್ಯೋನ್ಮುಖರಾಗಬೇಕು. #AirPollution

ಅರವಿಂದ್ ಕುಮಾರ್

ಕಿಡಿನುಡಿ

'ನೆತನ್ಯಾಹು ಅವರನ್ನು ಬಂಧಿಸಿ' ಎಂದು ಅಂತರರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಹೇಳಿದೆ. ನರಮೇಧದ ಆರೋಪ ಹೊತ್ತಿರುವ ಇವರನ್ನು ನಮ್ಮ ದೇಶಕ್ಕೆ ಭೇಟಿ ನೀಡಲು ಭಾರತ ಅವಕಾಶ ಕೊಡಬಾರದು. ನ್ಯಾಯವನ್ನು ಪ್ರೀತಿಸುವ ಪ್ರತಿ ಭಾರತೀಯನೂ ಈ ತೀರ್ಪನ್ನು ಸ್ವಾಗತಿಸಬೇಕು.



ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 23-11-1999

• ಆಸ್ತಿ ವಿವರ ನೀಡಲು ಸಂಪುಟ ಸಚಿವರಿಗೆ ಕೃಷ್ಣ ಸೂಚನೆ

ಬೆಂಗಳೂರು, ನ. 22– ರಾಜ್ಯ ಸಚಿವ ಸಂಪುಟದ ಎಲ್ಲ ಸದಸ್ಯರೂ ತಮ್ಮ ಆಸ್ತಿಪಾಸ್ತಿ ವಿವರಗಳನ್ನು ಕೂಡಲೇ ತಮಗೆ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಇಂದು ಆದೇಶಿಸಿದ್ದಾರೆ.

ಸ್ವಚ್ಛ, ಪಾರದರ್ಶಕ ಮತ್ತು ಜವಾಬ್ದಾರಿಯುತ ಆಡಳಿತ ನೀಡುವ ಸಲುವಾಗಿ ಮಂತ್ರಿಮಂಡಲದ ಸದಸ್ಯರೆಲ್ಲರೂ ವಾಡಿಕೆಯಂತೆ ತಮ್ಮ ಆಸ್ತಿಗಳ ವಿವರಗಳನ್ನು ಘೋಷಿಸಿ ಮೇಲ್ಪಂಕ್ತಿ ಹಾಕಬೇಕೆಂದು ಅವರು ಸಚಿವರುಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ ಎಂದು ನಂಬಲರ್ಹ ಮೂಲದಿಂದ ತಿಳಿದುಬಂದಿದೆ.

• ಸಂಪುಟಕ್ಕೆ ಶೌರಿ ಸಹಿತ ನಾಲ್ವರು, ಹೆಗಡೆಗೆ ತಪ್ಪಿದ ಸ್ಥಾನ

ನವದೆಹಲಿ, ನ. 22– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮ ಮಂತ್ರಿ ಮಂಡಲಕ್ಕೆ ಈ ಬಾರಿಯೂ ರಾಮಕೃಷ್ಣ ಹೆಗಡೆ ಅವರನ್ನು ಕಡೆಗಣಿಸಿ ರಾಜನಾಥ್ ಸಿಂಗ್, ಸಿ.ಪಿ.ಠಾಕೂರ್, ಸುಖ್‌ದೇವ್ ಸಿಂಗ್ ದಿಂಡ್ಸಾ ಮತ್ತು ಅರುಣ್ ಶೌರಿ ಅವರನ್ನು ಸೇರಿಸಿಕೊಳ್ಳುವ ಮೂಲಕ ಮಂತ್ರಿಮಂಡಲದ ಗಾತ್ರವನ್ನು 74ಕ್ಕೆ ವಿಸ್ತರಿಸಿದರು.

ಪ್ರಧಾನಿ ವಾಜಪೇಯಿ ಅವರು ಈ ನಾಲ್ವರಿಗೂ ಸಚಿವ ಖಾತೆಗಳನ್ನು ಇಂದೇ ಪ್ರಕಟಿಸುವ ಮೂಲಕ ಕೆಲವು ಹಿರಿಯ ಸಚಿವರ ಖಾತೆಗಳಲ್ಲಿಯೂ ಮಾರ್ಪಾಡು ಮಾಡಿದರು.

50 ವರ್ಷಗಳ ಹಿಂದೆ

ಶನಿವಾರ, 23-11-1974

• ಸಿಬಿಐ ವರದಿಗಾಗಿ ಸತತ ಒತ್ತಾಯ

ನವದೆಹಲಿ, ನ. 22– ಆಮದು ಲೈಸೆನ್ಸ್ ಹಗರಣದ ಕುರಿತು ಸಿಬಿಐ ವರದಿ ಮಂಡಿಸುವುದನ್ನು ಗೃಹ ಸಚಿವ ಕೆ. ಬ್ರಹ್ಮಾನಂದ ರೆಡ್ಡಿ ಅವರು ನಿರಾಕರಿಸುತ್ತಿದ್ದಂತೆ ಇಂದು ಇಡೀ ಲೋಕಸಭೆಯು ಗಲಭೆ-ಗೊಂದಲಗಳಲ್ಲಿ ಮುಳುಗಿಹೋಯಿತು.

ಸಿಬಿಐ ವರದಿಯ ಕಾಗದಪತ್ರಗಳನ್ನು ಮಂಡಿಸದಿದ್ದರೆ ಸಭೆಯ ಕಲಾಪ ಮುಂದುವರಿಸುವುದಕ್ಕೆ ಅವಕಾಶ ಕೊಡುವುದೇ ಇಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಬೆದರಿಕೆ ಹಾಕಿದರು.

ಟಿ.ಮೋಹನರಾಂ ಅವರನ್ನು ಯಜ್ಞಪಶುವನ್ನಾಗಿ ಮಾಡಿಕೊಂಡ ಸರ್ಕಾರವು ಭ್ರಷ್ಟಾಚಾರಿ ಸಚಿವರಿಗೆ ರಕ್ಷಣೆ ನೀಡುತ್ತಿರುವುದೆಂದು ವಿರೋಧ ಪಕ್ಷಗಳ ಸದಸ್ಯರು ಆಪಾದಿಸಿದರು. ಇದರಿಂದ ಸಭೆಯ ಘನತೆ ಕೂಡ ಕುಗ್ಗಿರುವುದೆಂದೂ ಬಣ್ಣಿಸಿದರು.

ಒಂದು ಘಟ್ಟದಲ್ಲಿ ಇಡೀ ವಿರೋಧ ಪಕ್ಷಗಳ ಸದಸ್ಯರ ಪೈಕಿ ಅರ್ಧದಷ್ಟು ಮಂದಿ ಪ್ರತಿಭಟನೆ ಸೂಚಿಸಲು ತಮ್ಮ ತಮ್ಮ ಆಸನಗಳಿಂದ ಎದ್ದು ನಿಂತರು. ಈ ಪೈಕಿ ಮಧುಲಿಮಯೆ, ಎಸ್.ಎನ್. ಮಿಶ್ರಾ, ಅಟಲ್ ಬಿಹಾರಿ ವಾಜಪೇಯಿ, ಪೀಲೂ ಮೋದಿ, ಎಸ್.ಎಂ. ಬ್ಯಾನರ್ಜಿ, ಹಿರೇನ್ ಮುಖರ್ಜಿ, ಜ್ಯೋತಿರ್ಮಯಿ ಬಸು ಮತ್ತು ಸಮರ ಗುಹಾ ಅವರು ಉದ್ರಿಕ್ತರಾಗಿದ್ದರಲ್ಲದೆ ತಮ್ಮ ತಮ್ಮ ವಾದ ಮಂಡಿಸುವುದರಲ್ಲಿ ತಲ್ಲೀನರಾಗಿದ್ದರು.

ವಾರಕ್ಕೆ ಎಪ್ಪತ್ತು ಗಂಟೆ ಕೆಲಸ: ಸಮಾನತೆ – ಸಂವೇದನೆಗೆ ದೂರವಾದ ಮಾತು

'ರೈತ ಭಾರತ'ವೋ? 'ಐ.ಟಿ ಭಾರತ'ವೋ?



ಪಡಸಾಲೆ

ರಘುನಾಥ ಚ.ಹ.

'ವಾರದಲ್ಲಿ ಎಪ್ಪತ್ತು ತಾಸು ಕೆಲಸ ಮಾಡಬೇಕು' ಎನ್ನುವ 'ಇನ್ಫೊಸಿಸ್' ಸಹ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಅವರ ಅಭಿಪ್ರಾಯವು ಜಡ ಬುದ್ಧಿಜೀವಿಯೊಬ್ಬರ ಸಂವೇದನಾರಾಹಿತ್ಯ ಮಾತಿನಂತಿದೆ; ದೇಶದ ಕಾಳಜಿಯ ಹೆಸರಿನಲ್ಲಿ ಸ್ವಹಿತಾಸಕ್ತಿಯ ಪ್ರತಿಪಾದನೆಯಂತಿದೆ.

'ದೇಶದ ಅಭಿವೃದ್ಧಿಗಾಗಿ ತ್ಯಾಗ ಬೇಕಿದೆ, ವಿಶ್ರಾಂತಿಯಲ್ಲ' ಎಂದು ಹೇಳಿರುವ ನಾರಾಯಣ ಮೂರ್ತಿ, 'ವಾರಕ್ಕೆ ಎಪ್ಪತ್ತು ಗಂಟೆ ಕೆಲಸ'ದ ತಮ್ಮ ನಿಲುವಿಗೆ ಉದಾಹರಣೆಯಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೆಸರಿಸಿದ್ದಾರೆ. 'ಮೋದಿ ಅವರು ವಾರದಲ್ಲಿ ನೂರು ಗಂಟೆ ಕೆಲಸ ಮಾಡುತ್ತಿದ್ದಾರೆ. ಅವರಂತೆ ನಾವೂ ಕಷ್ಟಪಟ್ಟು ಕೆಲಸ ಮಾಡಬೇಕು' ಎನ್ನುವುದು ಅವರ ಅಭಿಪ್ರಾಯ.

ಯಶಸ್ಸಿಗೆ ಕಠಿಣ ಪರಿಶ್ರಮದ ಹೊರತಾಗಿ ಬೇರೆ ಮಾರ್ಗವಿಲ್ಲ ಎಂದು ಹೇಳಿರುವವರಲ್ಲಿ ನಾರಾಯಣ ಮೂರ್ತಿ ಮೊದಲಿಗರೇನೂ ಅಲ್ಲ. ಹನ್ನೆರಡನೇ ಶತಮಾನದ ಶರಣ ಚಳವಳಿಯ ಅಸ್ತಿವಾರವಾಗಿದ್ದುದು ಕಾಯಕತತ್ವವೇ. 'ಕಾಯಕವೇ ಕೈಲಾಸ' ಎನ್ನುವ ಶರಣ ಸಂಸ್ಕೃತಿಯ ಮಾತು ಸೈಬರ್ ಸಂಸ್ಕೃತಿಯ ಮೂರ್ತಿ ಅವರಲ್ಲಿ 'ಕಾಯಕವೇ ಅಭಿವೃದ್ಧಿ' ಎಂದಾಗಿದೆ. ಕಾಯಕದ ಕುರಿತ ಶರಣರ ಪರಿಕಲ್ಪನೆ ಎಲ್ಲರನ್ನೂ ಒಳಗೊಂಡ ವಿಶಾಲಭಿತ್ತಿಯದಾದರೆ, ಮೂರ್ತಿಯವರ ನಂಬಿಕೆ ಪುಟ್ಟ ಸಮುದಾಯವನ್ನೇ ದೇಶ ಎಂದು ಬಿಂಬಿಸಲು ಹವಣಿಸುವಂತಹದ್ದು. ಶರಣರ ಕಾಯಕತತ್ವದಲ್ಲಿ ಚಮ್ಮಾರ, ಕಂಬಾರ, ಕುಂಬಾರ, ಹಡಪದ ಸೇರಿದಂತೆ ಎಲ್ಲ ಕ್ಷೇತ್ರಗಳ ಶ್ರಮಜೀವಿಗಳೂ ಇದ್ದರು ಮತ್ತು ಅವರ ಕಾಯಕಗಳಿಗೆ ಸಮಾನ ಗೌರವವಿತ್ತು. ಈ ಸಮಾನತೆಯ ಪರಿಕಲ್ಪನೆ ಇಂದಿನ 'ಕಾಯಕವೇ ಅಭಿವೃದ್ಧಿ'ಯಲ್ಲಿ ಕಾಣುತ್ತಿಲ್ಲ. ನಾರಾಯಣ ಮೂರ್ತಿ ಅವರ ಮಾತಿನಲ್ಲಿ ಸಂವೇದನೆಯ ಆರ್ದ್ರತೆಯೂ ಇಲ್ಲ.

ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ಕೆಲಸ ಮಾಡುವ ಎಂಜಿನಿಯರ್‌ಗಳನ್ನು ದೇಶದ ನಿರ್ಮಾಪಕರ ರೂಪದಲ್ಲಿ ಹಾಗೂ ಅವರ ಕೆಲಸವನ್ನು ದೇಶದ ಅಭಿವೃದ್ಧಿಯ ರೂಪದಲ್ಲಿ ನಾರಾಯಣ ಮೂರ್ತಿ ಅವರ ಮಾತುಗಳು ಬಿಂಬಿಸುತ್ತಿವೆ. ದುರದೃಷ್ಟವಶಾತ್, ಅವರ ಮಾತಿಗೆ ಎದುರಾಗಿರುವ ಬಹುತೇಕ ಟೀಕೆಗಳೂ ಎಲ್ಲರನ್ನೂ ಒಳಗೊಳ್ಳುವ ಪಾತಳಿಯಲ್ಲಿರದೆ, ಐ.ಟಿ ಉದ್ಯೋಗಿಗಳ ತವಕತಲ್ಲಣಗಳಿಗೆ ಸಂಬಂಧಿಸಿದಂತೆಯೇ ನಡೆಯುತ್ತಿವೆ. ಐ.ಟಿ ಉದ್ಯೋಗಿಗಳ ಮೇಲಿನ ಕೆಲಸದ ಒತ್ತಡ, ಆ ಒತ್ತಡದ ಪರಿಣಾಮವಾದ ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳು, ಹೆಚ್ಚಿನ ಶ್ರಮ-ತ್ಯಾಗಕ್ಕೆ ಪ್ರತಿಫಲವಾಗಿ ದೊರೆಯುತ್ತಿರುವ ಹಗುರ ಪ್ಯಾಕೇಜು- ಇವೆಲ್ಲವನ್ನೂ ಪ್ರಸ್ತಾಪಿಸುವ ಮೂಲಕ ವಾರಕ್ಕೆ ಎಪ್ಪತ್ತು ಗಂಟೆ ಕೆಲಸದ ಪರಿಕಲ್ಪನೆಯನ್ನು ಟೀಕಿಸುತ್ತ, 'ಭಾರತೀಯರನ್ನು ಜೀತದಾಳುಗಳ ರೂಪದಲ್ಲಿ ನಾರಾಯಣ ಮೂರ್ತಿ ನೋಡುತ್ತಿದ್ದಾರೆ' ಎಂದು ಕೆಲವರು ಹೇಳುತ್ತಿದ್ದಾರೆ. ಇವೆಲ್ಲ ಚರ್ಚೆಗಳನ್ನು ಗಮನಿಸಿದರೆ, ಈ ದೇಶದಲ್ಲಿ ಐ.ಟಿ-ಬಿ.ಟಿ ಕಂಪನಿಗಳಲ್ಲಿನ ಎಂಜಿನಿಯರ್‌ಗಳಷ್ಟೇ ಕೆಲಸ ಮಾಡುತ್ತಿದ್ದು, ಅವರು ಮಾತ್ರ ದೇಶ ಕಟ್ಟುವ ಕೆಲಸದಲ್ಲಿ ತೊಡಗಿರುವ ಅಭಿಪ್ರಾಯ ಮೂಡುವಂತಿದೆ.

ಈ ದೇಶದ ಸುಮಾರು ಶೇಕಡ 90ಕ್ಕೂ ಹೆಚ್ಚು ಜನ ಖಾಸಗಿ ಹಾಗೂ ಅಸಂಘಟಿತ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವುದನ್ನು ನಾರಾಯಣ ಮೂರ್ತಿ ಅವರು ಮರೆತಿರುವಂತಿದೆ ಅಥವಾ ಬಹುಸಂಖ್ಯಾತರ ಕೆಲಸ ಅವರಿಗೆ ನಗಣ್ಯವಾಗಿರುವಂತಿದೆ. ಶ್ರಮದ ಪರಿಕಲ್ಪನೆಯಲ್ಲಿ ಮುಂಚೂಣಿಯಲ್ಲಿರಬೇಕಾದ ದುರ್ಬಲ ವರ್ಗಗಳನ್ನು ಕಾಣದೇಹೋದರೆ, ನಮಗೆ ಈ ದೇಶದ ನಾಡಿಮಿಡಿತದ ಅರಿವಿಲ್ಲ ಎಂದೇ ಹೇಳಬೇಕಾಗುತ್ತದೆ ಹಾಗೂ ಶ್ರಮದ ನಿರ್ಲಕ್ಷ್ಯ ಗ್ರಾಮಭಾರತವನ್ನು ಹಾಗೂ ಗ್ರಾಮಭಾರತಕ್ಕೆ ಆಧಾರವಾದ ಜನಸಾಮಾನ್ಯರನ್ನು ಅವಮಾನಿಸುವಂತಹದ್ದು ಎಂದು ಭಾವಿಸಬೇಕಾಗುತ್ತದೆ.

ವಾರಕ್ಕೆ ಎಪ್ಪತ್ತು ಗಂಟೆ ಕೆಲಸ ಮಾಡುವ ಪರಿಕಲ್ಪನೆ ಜಾರಿಗೆ ಬಂತೆಂದೇ ಭಾವಿಸೋಣ. ಅದರಿಂದ ಏನಾಗುತ್ತದೆ? ನಾರಾಯಣ ಮೂರ್ತಿ ಅಂಥವರಿಗೆ ಅಭಿವೃದ್ಧಿಯ ಕಲಶಗಳ ರೂಪದಲ್ಲಿ ಕಾಣಿಸುವ ಐ.ಟಿ ಕಂಪನಿಗಳೂ ಸೇರಿದಂತೆ ವಿವಿಧ ವಲಯಗಳ ಕಚೇರಿ-ಮಳಿಗೆಗಳಲ್ಲಿ ದೊಡ್ಡ ಸಂಖ್ಯೆಯ ಭದ್ರತಾ ಸಿಬ್ಬಂದಿ (ಸೆಕ್ಯುರಿಟಿ) ಕೆಲಸ ಮಾಡುತ್ತಿದ್ದಾರೆ. ದಿನಕ್ಕೆ ಹನ್ನೆರಡು ತಾಸಿನಂತೆ ವಾರದ ಏಳು ದಿನವೂ ಕಾರ್ಯನಿರ್ವಹಿಸುವ ಇವರು, ಹನ್ನೆರಡು ತಾಸು ಕರ್ತವ್ಯದ ನಂತರ ಉಳಿಯುವ ಅವಧಿಯಲ್ಲೂ ಸಣ್ಣಪುಟ್ಟ ಕೆಲಸಗಳು ದೊರೆತರೆ ಮಾಡುತ್ತಾರೆ. ಮನೆಕೆಲಸದಲ್ಲಿ ಯಾವ ಕೊರೆಯನ್ನೂ ಮಾಡದೆ, ಕಾರ್ಖಾನೆ-ಗಾರ್ಮೆಂಟ್ಸ್‌ನಲ್ಲಿ ದಿನಕ್ಕೆ ಎಂಟರಿಂದ ಹತ್ತು ತಾಸು ಗೇಯುವ ಹೆಣ್ಣುಮಕ್ಕಳಿದ್ದಾರೆ. ಮಾತೃತ್ವ ರಜೆಯ ಅರ್ಥವೂ ತಿಳಿಯದೆ, ಕೈಕೂಸುಗಳನ್ನು ಮರದ ನೆರಳಿಗೆ ಬಿಟ್ಟು ಇಟ್ಟಿಗೆ, ಸಿಮೆಂಟ್ ಎತ್ತುವ ಕೂಲಿಕಾರ್ಮಿಕ ಅಮ್ಮಂದಿರೂ ಬೀದಿ ಗುಡಿಸುವ ಮಹಿಳೆಯರೂ ಇದ್ದಾರೆ. ಗಂಟೆಗಳ ಹಂಗಿಲ್ಲದೆ ದುಡಿಯುವ ಈ ಸೆಕ್ಯುರಿಟಿ ಅಣ್ಣಂದಿರಿಗೆ, ಗಾರ್ಮೆಂಟ್ಸ್ ಅಕ್ಕಂದಿರಿಗೆ, ಕೂಲಿಕಾರ್ಮಿಕ ತಾಯಂದಿರಿಗೆ ದೊರೆಯುವ ಪ್ರತಿಫಲವೆಷ್ಟು? ಕೆಲಸದ ಸ್ಥಳದಲ್ಲಿ ಅವರಿಗೆ ದೊರೆಯುವ ಗೌರವವೆಷ್ಟು? ದೇಶವನ್ನು ಕಟ್ಟುವಲ್ಲಿ ಅವರ ಕೊಡುಗೆಯನ್ನು ನಾವು ಗುರುತಿಸಿರುವುದೆಷ್ಟು? ಚರಂಡಿಗಳ ಸಿಕ್ಕು ಬಿಡಿಸಲು ಹೋಗಿ ಮ್ಯಾನ್‌ಹೋಲ್‌ಗಳಲ್ಲಿ ಕೊನೆಯುಸಿರೆಳೆದ ಅಣ್ಣತಮ್ಮಂದಿರನ್ನು ನಾವು ಹೇಗೆ ನೆನಪಿರಿಸಿಕೊಂಡಿದ್ದೇವೆ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಿರಿಸಿದ್ದೇವೆ?




ಐ.ಟಿ ಕ್ಷೇತ್ರಗಳಲ್ಲಿನ ಉದ್ಯೋಗಿಗಳನ್ನು ಗಮನದಲ್ಲಿಟ್ಟುಕೊಂಡಷ್ಟೇ ನಾರಾಯಣ ಮೂರ್ತಿ, ವಾರಕ್ಕೆ ಎಪ್ಪತ್ತು ತಾಸುಗಳ ಕೆಲಸದ ಮಾತನಾಡಿದ್ದಾರೆ ಎಂದು ಹೇಳಲಿಕ್ಕೆ ಸಾಧ್ಯವಿದೆ. ಆದರೆ, ಕಠಿಣ ಶ್ರಮಕ್ಕೆ ಉದಾಹರಣೆಯಾಗಿ ಅವರು ನೀಡಿರುವ ಉದಾಹರಣೆ, ಅವರ ಮಾತಿನ ವ್ಯಾಪಕತೆಯನ್ನು ಸೂಚಿಸುವಂತಿದೆ. ಕಠಿಣ ಶ್ರಮಕ್ಕೆ ಮಾದರಿಯಾಗಿ ನಾರಾಯಣ ಮೂರ್ತಿ ಅವರು ಹೆಸರಿಸಿರುವ ಮೋದಿ ಅವರಿಗೆ ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ ನವಿಲುಗಳಿಗೆ ಕಾಳು ಹಾಕಲು ಸವಡು ದೊರೆಯುತ್ತದೆ. ಚಂದದ ಬಟ್ಟೆ ತೊಟ್ಟು ಫೋಟೊ ಶೂಟ್ ಮಾಡಿಸಿಕೊಳ್ಳಲು ಅವರಿಗೆ ಸಮಯವಿದೆ. ಉತ್ಸವಗಳು, ಪೂಜಾಕಾರ್ಯಗಳಲ್ಲಿ ಭಾಗವಹಿಸುವುದೂ ವಿದೇಶ ಪ್ರವಾಸಗಳೂ ಅವರ ಕರ್ತವ್ಯ ನಿರ್ವಹಣೆಯ ಭಾಗಗಳೇ ಆಗಿವೆ. ಪ್ರಧಾನಿಯವರ ಸುರಕ್ಷತೆ, ಆರೋಗ್ಯ, ವಸ್ತ್ರಾಲಂಕಾರ, ಯೋಗ, ಊಟ, ನಿದ್ರೆಯವರೆಗೆ ಎಲ್ಲ ಅಗತ್ಯಗಳಿಗೆ ಒಗೊಡಲು ಪಗಾರದ ಜನ ತುದಿಗಾಲಲ್ಲಿ ನಿಂತಿರುತ್ತಾರೆ. ಇಂಥ ದುಬಾರಿ ಬಿಡುವಿನ ವ್ಯಕ್ತಿಯ ಕೆಲಸದ ಅವಧಿಯನ್ನು ಮಾದರಿಯಾಗಿ, ಕಠಿಣ ಶ್ರಮಕ್ಕೆ ಉದಾಹರಣೆಯಾಗಿ ನೋಡುವ ಚಿಂತನೆ ಒಂದೋ ಬಡಬಗ್ಗರ ಜೀವಗಳನ್ನು ಅಗ್ಗವೆಂದು ಭಾವಿಸುವಂತಹದ್ದು ಇಲ್ಲವೇ ದಂತಗೋಪುರದಲ್ಲಿ ಇರುವಂತಹದ್ದು.

ನಾರಾಯಣ ಮೂರ್ತಿ ಅವರ ಮಾತಿನ ಹುಂಬತನವನ್ನು ಟೀಕಿಸಿರುವ ಕೆಲವರು, ಸಾಫ್ಟ್‌ವೇರ್ ಜಗತ್ತಿನ ಅನೇಕ ಜಾಣ ಜಾಣೆಯರು ಕೆಲಸದ ಒತ್ತಡದಿಂದ ಹೃದಯಾಘಾತಕ್ಕೆ ತುತ್ತಾಗುತ್ತಿರುವುದು ಹಾಗೂ ಮಧುಮೇಹ-ರಕ್ತದೊತ್ತಡದಿಂದ ಬಳಲುತ್ತಿರುವುದನ್ನು ನೆನಪಿಸಿಕೊಂಡಿದ್ದಾರೆ. ಯುವ ತಲೆಮಾರಿನ ಅನಾರೋಗ್ಯ ಆತಂಕ ಹುಟ್ಟಿಸುವಂತಹದ್ದು. ಆದರೆ, ದಿನಕ್ಕೆ ಹನ್ನೆರಡು ಹದಿನೈದು ತಾಸು ದುಡಿದರೂ ಕುಟುಂಬ ನಿರ್ವಹಣೆಗೆ ಸಾಕಾಗುವಷ್ಟು ಆದಾಯ ಸಂಪಾದಿಸಲಾಗದ ರೈತರು ತಮ್ಮ ಸಮಸ್ಯೆಗಳಿಗೆ ಆತ್ಮಹತ್ಯೆಯ ಮೂಲಕ ಉತ್ತರ ಕಂಡುಕೊಳ್ಳುತ್ತಿರುವ ಪ್ರಸಂಗಗಳು ದೇಶದ ವಿವಿಧ ಭಾಗಗಳಿಂದ ವರದಿಯಾಗುತ್ತಲೇ ಇವೆ. ಮಣ್ಣಿನ ಮಕ್ಕಳ ಸಂಕಟಗಳ ಬಗ್ಗೆ, ಭರವಸೆಗಳೇ ಇಲ್ಲದ ಅವರ ಬದುಕಿನ ಬಗ್ಗೆ, ನಾರಾಯಣ ಮೂರ್ತಿ ಅವರಂಥವರು ಯೋಚಿಸುವುದು ಯಾವಾಗ? ಅಥವಾ 'ರೈತ ಭಾರತ' ಏನಾದರೂ 'ಸಾಫ್ಟ್‌ವೇರ್ ಭಾರತ'ವಾಗಿ ಬದಲಾಗಿದೆಯೇ?

ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಕೆಲಸದ ಸಮಾನ ಅವಕಾಶಗಳು ಹಾಗೂ ಸಮಾನ ಪ್ರತಿಫಲ ಆದ್ಯತೆಯ ವಿಷಯವಾಗಬೇಕು. ದೇಶದ ಪ್ರಧಾನಿಯ ಬಿಡುವಿಲ್ಲದ ದುಡಿಮೆಗೂ ರೈತ ಕಾರ್ಮಿಕನ ಕೆಲಸಕ್ಕೂ ಇರುವ ವ್ಯತ್ಯಾಸವನ್ನು ಅರಿಯದೇಹೋದರೆ, ನಮ್ಮ ಶ್ರಮದ ಪರಿಕಲ್ಪನೆ ಹಾಸ್ಯಾಸ್ಪದವೂ ಅಮಾನವೀಯವೂ ಆಗುತ್ತದೆ.

'ಭಾರತದ ಅಭಿವೃದ್ಧಿಗೆ ತ್ಯಾಗ ಬೇಕಿದೆ; ವಿಶ್ರಾಂತಿ ಅಲ್ಲ. ದಯವಿಟ್ಟು ಕ್ಷಮಿಸಿ. ನನ್ನ ಉಸಿರು ಇರುವವರೆಗೂ ಈ ನನ್ನ ನಿಲುವನ್ನು ಬದಲಾಯಿಸಿಕೊಳ್ಳುವುದಿಲ್ಲ' ಎಂದು ನಾರಾಯಣ ಮೂರ್ತಿ ಹೇಳಿದ್ದಾರೆ. ಅವರ ಮಾತು, ದೀನದುರ್ಬಲರ ಬಗ್ಗೆ ಸಾವಿರಾರು ವರ್ಷಗಳಿಂದ ಸಂವೇದನಾಶೂನ್ಯವಾಗಿ ಉಳಿದಿರುವ ಸಮುದಾಯದ ಮಾತಿನಂತೆ ಧ್ವನಿಸುತ್ತಿದೆ.

ಚುರುಮುರಿ



ಸಂಪುಟ ಸರ್ಜರಿ!

• ತುರುವೇಕೆರೆ ಪ್ರಸಾದ್

'ಲೇಯ್, ನಮ್ ಸಿಎಂ ಸಾಹೇಬ್ರು ಸಂಪುಟಕ್ಕೆ ಸರ್ಜರಿ ಮಾಡ್ತಾವ್ರಂತೆ ಕಣ್ರಲಾ' ಹರಟೆಕಟ್ಟೇಲಿ ಗುದ್ಲಿಂಗ ಮಾತು ತೆಗೆದ.

'ವೂ ಕಣ್ಲಾ, ಮಿಡಿಯದ ಹಾರ್ಟು, ಡೆಡ್ಲಿ ಥ್ರೋಟು, ಉಳುಕಿರೊ ವೈಸ್ಟು ಎಲ್ಲಾ ಕಿತ್ತಾಕಿ ವೊಸ್ದಾಗಿ ಜೋಡುಸ್ತಾರಂತೆ' ಎಂದ ಮಾಲಿಂಗ.

'ಇದ್ಯಾವುದೊ ಮೆಡಿಸಿನ್ ಭಾಷೇಲಿ ಹೇಳ್ತಿದೀಯಲ್ಲೋ...'

'ಕಮಲ್ದೋರು ಮೆಡಿಸಿನ್ನಲ್ಲೂ ಕಾಸು ಹೊಡ್ದು 'ಸಿನ್' ಮಾಡವ್ರೆ ಅಂತ ವರಾತ ತೆಗುದ್ಮೇಲೆ, ವೆಂಟಿಲೇಟರ್ ಪ್ಲೆಂಟಿ ಈಟರ್ ಆಗ್ಯತೆ ಅಂತ ವರದಿ ಬಂದ್ ಮೇಲೆ ಎಲ್ಲಾ ಮೆಡಿಸಿನ್ ಭಾಷೆನೇ ಆಗೋಗದೆ'.

'ಅದೆಲ್ಲಾ ಕೋಟಿ ಕೋಟಿ ವಿಷಯ, ನಾಟಿ ಔಷ್ದಿಗೆ ಓಗೋದಲ್ಲ. ಮಿಡಿಯದ ಹಾರ್ಟು ಅದೂ ಇದೂ ಅಂದ್ಯಲ್ಲ, ಅದ್ನ ಒಸಿ ಬಿಡ್ಸಿ ಯೋಳು' ಕೇಳಿದ ಕಲ್ಲೇಶಿ.

'ಅದ್ರಲ್ಲೇನೈತೆ ಬಿಡ್ಸಿ ಯೋಳಕ್ಕೆ? ಮಿಡಿಯದ ಹಾರ್ಟು ಅಂದ್ರೆ ಬಡವರಿಗೆ ಸ್ಪಂದಿಸದ ಹೃದಯ ಇರೋರು ಅಂತ. ಡೆಡ್ ಥ್ರೋಟು ಅಂದ್ರೆ ಸದನದಲ್ಲಿ ಕ್ಷೇತ್ರದ ಬಗ್ಗೆ ಬಾಯ್ ಬಿಡ್ದೋರು, ಇನ್ನು ಉಳುಕಿರೋ ವೈಸ್ಟು ಅಂದ್ರೆ ಜನರನ್ನ ರೀಚ್ ಆಗ್ದೇ ರೆಸಾರ್ಟಲ್ಲಿ ಕೂತಿರೋರು ಅಂತ'.

'ಅಯ್ಯೋ ಅದು ಅಂಗಲ್ಲಲೇ... ಮಿಡಿಯದ ಹಾರ್ಟು ಅಂದ್ರೆ ಕಾತೆ ಜವಾಬ್ದಾರಿನೂ ವಹಿಸ್ಕಳ್ದೆ, ಮುಡಾ ಕ್ಯಾತೆಲಿ ಸಿಎಂ ಪರನೂ ವಹಿಸ್ಕಳ್ದೆ ಇರೋರು ಈ ಕೆಟಗರಿಗೆ ಬತ್ತಾರೆ. ಇನ್ನು ಡೆಡ್ಲಿ ಥ್ರೋಟು ಅಂದ್ರೆ ಸಿಎಂ, ಪಕ್ಷದ ವಿರುದ್ಧವೇ ಮಾತಾಡೋರು ಅಂತ. ಉಳುಕಿದ ವೈಸ್ಟ್ ಅಂದ್ರೆ ಸಿಎಂ ಕುರ್ಚಿಗೆ ಟವಲ್ ಹಾಕ್ಕಂಡು ಕಾಯ್ಕೊಂಡಿರೋರು ಅಂತ'.

'ಅಂಗಾದ್ರೆ ಯಾರ್ಗೂ ಗ್ಯಾರೆಂಟಿ ಇಲ್ಲ ಅನ್ನು'.

'ಗ್ಯಾರೆಂಟಿ ಬಗ್ಗೆ ಕಾಮೆಂಟ್ ಮಾಡ್ದೇ, ಅನುದಾನ ಕೇಳ್ದೇ ಇರೋರಿಗೆ ಚಾನ್ಸ್ ಇರ್ಬಹುದು'.

ಎಲ್ಲರೂ ಹೌದೌದು... ಗ್ಯಾರೆಂಟಿಗೆ ಜೈ! ಎಂದು ಕೂಗಿದರು.

ಸಂಗತ

ನಾವು ಮತ್ತು ನಮ್ಮ ಸಂವಿಧಾನ

ಸಂವಿಧಾನದ ಪ್ರಸ್ತಾವನೆಯನ್ನು ನಾವು ಓದಿ ಅರ್ಥ ಮಾಡಿಕೊಂಡರೆ, ಅದರ ಇತರ ಭಾಗಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು ಹೆಚ್ಚು ಸುಗಮವಾಗುತ್ತದೆ

• ಎಂ.ಅಬ್ದುಲ್ ರೆಹಮಾನ್ ಪಾಷ


ಪ್ರತಿವರ್ಷ ನವೆಂಬರ್ 26ರಂದು ಇಡೀ ಭಾರತವು 'ರಾಷ್ಟ್ರೀಯ ಸಂವಿಧಾನ ದಿನ'ವನ್ನು ಆಚರಿಸುತ್ತದೆ. 2015ರವರೆಗೆ ಇದನ್ನು 'ರಾಷ್ಟ್ರೀಯ ಕಾನೂನು ದಿನ' ಎಂದು ಆಚರಿಸಲಾಗುತ್ತಿತ್ತು. ಎರಡರ ಉದ್ದೇಶವೂ ಒಂದೇ: ಸಾರ್ವಜನಿಕರಲ್ಲಿ ನಮ್ಮ ಸಂವಿಧಾನದ ಬಗ್ಗೆ ಅರಿವು, ಜಾಗೃತಿ ಮೂಡಿಸುವುದು ಮತ್ತು ನಮ್ಮ ನಮ್ಮ ವೈಯಕ್ತಿಕ ನೆಲೆಯಲ್ಲಿಯೂ ಸಾಂವಿಧಾನಿಕ ಮೌಲ್ಯಗಳಾದ ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಬಂಧುತ್ವ, ಸಾರ್ವಜನಿಕ ವಲಯದಲ್ಲಿ ಮತಧರ್ಮ ನಿರಪೇಕ್ಷತೆ ಮತ್ತು ವೈಜ್ಞಾನಿಕ ಮನೋವೃತ್ತಿ ಅನುಸರಿಸುವುದನ್ನು ರೂಢಿಸಿಕೊಳ್ಳುವಂತೆ ಮಾಡುವುದೇ ಆಗಿದೆ.

ಈ ದಿಸೆಯಲ್ಲಿ ಹಲವು ಕಾರ್ಯಕ್ರಮಗಳು ನಡೆಯುತ್ತವೆ. ದೇಶದ ವಿವಿಧ ಪ್ರಾಂತ್ಯ, ಪ್ರದೇಶಗಳ ಜನರಿಂದ (ಪರೋಕ್ಷವಾಗಿ) ಆಯ್ಕೆಯಾಗಿ ಬಂದಿದ್ದ 299 ಸದಸ್ಯರು ಸಂವಿಧಾನ ಸಭೆಯನ್ನು ರಚಿಸಿಕೊಂಡರು. ದೆಹಲಿಯ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸೇರಿ, 1946ರ ಡಿಸೆಂಬರ್ 9ರಿಂದ ಆರಂಭಿಸಿ, ಸುಮಾರು 3 ವರ್ಷ ಶ್ರಮವಹಿಸಿ 'ಭಾರತ ಸಂವಿಧಾನ'ವನ್ನು ರಚಿಸಿದರು. ಅಂತಿಮವಾಗಿ ಅದನ್ನು ಸಂವಿಧಾನ ಸಭೆಯಲ್ಲಿ ಅಂಗೀಕರಿಸಿದ್ದು, 1949ರ ನವೆಂಬರ್ 26ರಂದು. ಆ ಚಾರಿತ್ರಿಕ ಮಹತ್ವದ ಸಂದರ್ಭದ ನೆನಪಿನಲ್ಲಿ ನಾವು 'ರಾಷ್ಟ್ರೀಯ ಸಂವಿಧಾನ' ದಿನವನ್ನು ಆಚರಿಸುತ್ತೇವೆ. ನಂತರ, 1950ರ ಜನವರಿ 24ರಂದು ಎಲ್ಲಾ ಸದಸ್ಯರು, ಇಂಗ್ಲಿಷ್‌ನಲ್ಲಿದ್ದ ಮೂಲ ಸಂವಿಧಾನ ಮತ್ತು ಅದರ ಹಿಂದಿ ಅನುವಾದದ ಪ್ರತಿಗಳಲ್ಲಿ ತಮ್ಮ ಸಹಿಯನ್ನು ಹಾಕಿದರು. ಸಂವಿಧಾನದ ಈ ಮೂಲ ಪ್ರತಿಗಳು ಎಲ್ಲಿವೆ ಎಂಬ ಪ್ರಶ್ನೆ ನಮ್ಮಲ್ಲಿ ಮೂಡಬಹುದು.

ನಮ್ಮ ಬಳಿ ಈಗ ಇರುವುದು, ನಂತರ ಸಂಸದೀಯ ವ್ಯವಹಾರಗಳ ಇಲಾಖೆಯಿಂದ ಅಧಿಕೃತವಾಗಿ ಪ್ರಕಟವಾದ ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳ ಆವೃತ್ತಿಗಳು. ಮೂಲ ಸಂವಿಧಾನದ ಪ್ರತಿಗಳನ್ನು ಸಂಸತ್ತಿನ ಗ್ರಂಥಾಲಯದಲ್ಲಿ ಹೀಲಿಯಂ ತುಂಬಿದ ಕೋಶದಲ್ಲಿ ಸಂರಕ್ಷಿಸಿ ಇಡಲಾಗಿದೆ. ಹೀಗಾಗಿ, ಅವನ್ನು ಮುಟ್ಟಲು, ತೆರೆದು ನೋಡಲು ನಮಗೆಲ್ಲಾ ಅವಕಾಶ ಇರುವುದಿಲ್ಲ. ಆದರೆ, ಒಂದು ಉಪಾಯವಿದೆ. ಶ್ಯಾಮ್ ಬೆನಗಲ್ ನಿರ್ದೇಶನದಲ್ಲಿ ನಿರ್ಮಾಣವಾಗಿ, ರಾಜ್ಯಸಭಾ ಟಿ.ವಿ. ಮೂಲಕ ಪ್ರಸಾರವಾದ 10 ಎಪಿಸೋಡುಗಳ 'ಮೇಕಿಂಗ್ ಆಫ್ ಕಾನ್‌ಸ್ಟಿಟ್ಯೂಷನ್' ಎಂಬ ವಿಡಿಯೊ ಸರಣಿಯ ಮೊದಲ ಸಂಚಿಕೆಯಲ್ಲಿ ನಮಗೆ ಮೂಲ ಸಂವಿಧಾನವನ್ನು ತೆರೆದು ತೋರಿಸಲಾಗುತ್ತದೆ- ಯೂಟ್ಯೂಬಿನಲ್ಲಿ ಹುಡುಕಿದರೆ ಈ ಸರಣಿ ಸಿಗುತ್ತದೆ.

ಮೂಲ ಸಂವಿಧಾನದ ಪ್ರಸ್ತಾವನೆಯಲ್ಲಿ, ನಾವು ಕಟ್ಟಲಿರುವ ದೇಶದ ಸ್ವಭಾವದ ಬಗ್ಗೆ, 'ಸಾರ್ವಭೌಮ, ಲೋಕತಂತ್ರಾತ್ಮಕ ಗಣರಾಜ್ಯ' ಎಂದು ಮಾತ್ರ ಇತ್ತು. 1976ರಲ್ಲಿ ತರಲಾದ 42ನೇ ಸಂವಿಧಾನ ತಿದ್ದುಪಡಿಯ ಅನ್ವಯ ಇನ್ನೆರಡು ಪದಗಳನ್ನು ಸೇರಿಸಿ, 'ಸಾರ್ವಭೌಮ, ಸಮಾಜವಾದಿ, ಮತಧರ್ಮ ನಿರಪೇಕ್ಷ, ಲೋಕತಂತ್ರಾತ್ಮಕ ಗಣರಾಜ್ಯ' ಎಂದು ಮಾಡಲಾಗಿದೆ.

ಮೂಲ ಇಂಗ್ಲಿಷ್ ಮತ್ತು ಹಿಂದಿ ಆವೃತ್ತಿಯಲ್ಲಿ ಪ್ರತಿ ಭಾಗದ ಆರಂಭದಲ್ಲಿ ಒಂದು ಚಿತ್ರವಿದೆ. ಸರಣಿಯ 22 ಚಿತ್ರಗಳಲ್ಲಿ ಭಾರತದ ಶ್ರೀಮಂತ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಬಿಂಬಿಸುವ ವರ್ಣಚಿತ್ರಗಳಿವೆ. ಅವುಗಳಲ್ಲಿ ಸಿಂಧೂ ಕಣಿವೆ, ಗೀತೆ, ನಟರಾಜ, ರಾಮಾಯಣ, ಮಹಾಭಾರತ, ಬುದ್ಧ, ಮಹಾವೀರ, ಅಶೋಕ, ಅಕ್ಬರ್, ರಾಣಿ ಲಕ್ಷ್ಮಿಬಾಯಿ, ಟಿಪ್ಪು ಸುಲ್ತಾನ್, ಸುಭಾಷ್‌ಚಂದ್ರ ಬೋಸ್, ಮಹಾತ್ಮ ಗಾಂಧಿ ಅವರಿರುವಂತಹ ದೃಶ್ಯಗಳಿವೆ. ಈ ಚಿತ್ರಗಳನ್ನು ರಚಿಸಿದವರು ಕೋಲ್ಕತ್ತದ ಶಾಂತಿನಿಕೇತನದ ನಂದಲಾಲ್ ಬೋಸ್ ಮತ್ತು ಅವರ ಶಿಷ್ಯಂದಿರು. ಮೂಲ ಇಂಗ್ಲಿಷ್ ಮತ್ತು ಹಿಂದಿ ಆವೃತ್ತಿಗಳನ್ನು ಯಂತ್ರಗಳ ಸಹಾಯದಿಂದ ಮುದ್ರಿಸಲಾಗಿಲ್ಲ. ಬದಲಿಗೆ, ಅವುಗಳನ್ನು ಇಡಿಯಾಗಿ ಸುಂದರ ಕಲಾತ್ಮಕ ಕೈಬರಹದಲ್ಲಿ ಬರೆಯಲಾಗಿದೆ. ಇಂಗ್ಲಿಷ್ ಆವೃತ್ತಿಯನ್ನು ಪ್ರೇಮ್ ಬಿಹಾರಿ ನಾರಾಯಣ ರಾಯ್‌ಜಾದ ರಚಿಸಿದರೆ, ಹಿಂದಿ ಆವೃತ್ತಿಯನ್ನು ವಸಂತ್ ಕೃಷ್ಣ ವೈದ್ಯ ಅವರು ಕೈಯಿಂದ ಬರೆದಿದ್ದಾರೆ.



ಸಂವಿಧಾನದ ಪ್ರಸ್ತಾವನೆಯನ್ನು ಸಂವಿಧಾನದ ಹೆಬ್ಬಾಗಿಲು, ಸಂವಿಧಾನದ ಓದಿಗೊಂದು ಕೈದೀವಿಗೆ ಎನ್ನಲಾಗುತ್ತದೆ. ನಿಜ, ಕನ್ನಡದಲ್ಲಿ ಪ್ರಸ್ತಾವನೆಯು ಸುಮಾರು 57 ಪದಗಳಲ್ಲಿ ರಚನೆಯಾಗಿರುವ ಒಂದೇ ಒಂದು ಅಖಂಡ ವಾಕ್ಯ. ಅದನ್ನು ಓದಿ ಅರ್ಥ ಮಾಡಿಕೊಂಡರೆ ಸಂವಿಧಾನದ ಇತರ ಭಾಗಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು ಹೆಚ್ಚು ಸುಗಮವಾಗುತ್ತದೆ. ಅಲ್ಲದೆ, ನಮ್ಮಂಥ ಸಾರ್ವಜನಿಕರು ಸಂವಿಧಾನದ ಮೊದಲ ನಾಲ್ಕು ಭಾಗಗಳನ್ನು ಓದಿ ಅರ್ಥ ಮಾಡಿಕೊಂಡರೂ ನಮ್ಮ ಸಾಮಾನ್ಯ ಅರಿವಿನ ಅಗತ್ಯಕ್ಕೆ ಬಹಳಷ್ಟಾಗುತ್ತದೆ.

ರಾಷ್ಟ್ರೀಯ ಸಂವಿಧಾನ ದಿನದಂದು ನಾವು ಇಷ್ಟನ್ನಾದರೂ ಮಾಡಬಹುದು. ಪ್ರಸ್ತಾವನೆಯ ಕನ್ನಡ ಆವೃತ್ತಿಯನ್ನು ಸೂಕ್ತ ಅಳತೆಯಲ್ಲಿ ಮುದ್ರಿಸಿಕೊಂಡು, ಫೋಟೊ ಫ್ರೇಮ್ ಹಾಕಿಸಿ, ಮನೆ, ಅಂಗಡಿ, ಕಚೇರಿ, ಕಾರ್ಖಾನೆಗಳಲ್ಲಿ ಎದ್ದು ಕಾಣುವ ಹಾಗೆ ತೂಗು ಹಾಕಿ, ಆ ಸ್ಥಳಕ್ಕೆ ಒಂದು ಸಾಂವಿಧಾನಿಕ ಘನತೆಯನ್ನು ಒದಗಿಸಬಹುದು ಮತ್ತು ಆ ಭಿತ್ತಿಚಿತ್ರ ನಮಗೆ ಸಾಂವಿಧಾನಿಕ ಮೌಲ್ಯಗಳ ಬದ್ಧತೆಯನ್ನು ನೆನಪಿಸುತ್ತಲೇ ಇರಲು ಪ್ರೇರಣೆಯಾಗಬಹುದು. ನಾನಂತೂ ಮಾಡಿದ್ದೇನೆ, ನೀವೂ ಮಾಡುವಿರಾ? ನಾವು ಭಾರತೀಯರು ಎಂಬುದಕ್ಕೆ ಇದೊಂದು ಉತ್ತಮ ಪ್ರತೀಕ.

ವಾಚಕರ ವಾಣಿ

ಸಭಾಂಗಣದಲ್ಲಿ ಕುಳಿತು 'ಕಾಣದ' ಕ್ರಿಕೆಟ್ ನೋಡಿದರು!

1974ರಲ್ಲಿ ಹೆಬ್ಬಾಳದ ಕೃಷಿ ಕಾಲೇಜಿನ ಕೃಷಿ ಪದವಿಯ ಮೊದಲ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದೆ. ಆಗ ಬೆಂಗಳೂರಿನಲ್ಲಿ ಪ್ರಥಮ ಕ್ರಿಕೆಟ್ ಟೆಸ್ಟ್ ಪಂದ್ಯ ಆಯೋಜನೆಯಾಗಿತ್ತು (50 ವರ್ಷಗಳ ಹಿಂದೆ; ಪ್ರ.ವಾ., ನ. 22). ಇಡೀ ಕಾಲೇಜಿನಲ್ಲಿ ಎಲ್ಲರೂ ಸಂಭ್ರಮಪಡುತ್ತಿದ್ದರು. ಆಗ ನಮ್ಮ ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರಾಗಿದ್ದ ಸುಬ್ಬಯ್ಯನವರು ನಮ್ಮ ಕಾಲೇಜಿನ ದೊಡ್ಡ ಆಡಿಟೋರಿಯಂನ ವೇದಿಕೆಯ ಮೇಲೆ ಒಂದು ಟೇಬಲ್ ಇಟ್ಟು, ಅದರ ಮೇಲೆ ಒಂದು ಕಪ್ಪು ಬಿಳುಪು ಟಿ.ವಿಯನ್ನು ಇರಿಸುವ ವ್ಯವಸ್ಥೆ ಮಾಡಿದ್ದರು.

ಅದರಲ್ಲಿ ಏನೂ ಕಾಣದಿದ್ದರೂ ಸಭಾಂಗಣದ ತುಂಬಾ ಹುಡುಗರು ಕ್ರಿಕೆಟ್ ನೋಡಲು ಕುಳಿತಿದ್ದನ್ನು ನೆನೆಸಿಕೊಂಡರೆ ಒಂದು ರೀತಿ ತಮಾಷೆ ಅನಿಸುತ್ತದೆ. ಕೆಲ ಸಹಪಾಠಿಗಳು ಹೇಗೋ ಟಿಕೆಟ್ ಗಿಟ್ಟಿಸಿಕೊಂಡು ಬಂದು, ಸರದಿಯಂತೆ ಪ್ರತಿದಿನ ಒಬ್ಬೊಬ್ಬರು ಟೆಸ್ಟ್ ಪಂದ್ಯ ನೋಡಿದ್ದು ನೆನಪು. ನಮ್ಮನ್ನು 50 ವರ್ಷಗಳ ಹಿಂದೆ ಕರೆದುಕೊಂಡು ಹೋದ ಪತ್ರಿಕೆಗೆ ಧನ್ಯವಾದ.

ಟಿ.ವಿ.ಬಿ. ರಾಜನ್, ಬೆಂಗಳೂರು

ಲೋಕಾಯುಕ್ತ ದಾಳಿ: ಮುಜುಗರ ತಪ್ಪಿಸಿ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ಮನೆ ಮತ್ತು ಇತರ ಸ್ವತ್ತುಗಳ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಘೋಷಿತ ಆದಾಯಕ್ಕಿಂತ ಹೆಚ್ಚುವರಿ ಸ್ವತ್ತುಗಳನ್ನು ಪತ್ತೆ ಮಾಡಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 21). ಹೀಗೆ ಲೋಕಾಯುಕ್ತ ದಾಳಿ ನಡೆದ ಸಂದರ್ಭದಲ್ಲಿ ಪತ್ತೆಯಾದ ಚರ, ಸ್ಥಿರಾಸ್ತಿಗಳ ವಿವರಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಇಂತಹ ದಾಳಿಗಳ ಬಗ್ಗೆ ಲೋಕಾಯುಕ್ತವು ಮಾಧ್ಯಮಗಳಿಗೆ ಮಾಹಿತಿ ನೀಡುವಾಗ, ಆಸ್ತಿಗಳ ಸ್ವಾಧೀನದ ಪ್ರಕಾರಗಳನ್ನು ವಿವರಿಸಿ ಹೇಳಬೇಕು. ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿಗಳನ್ನು ವಿಭಾಗಿಸಿ ಹೇಳಿದರೆ, ಅಧಿಕಾರಿಯ ಅಕ್ರಮ ಆಸ್ತಿ ಎಷ್ಟು ಎಂಬುದು ಸಾರ್ವಜನಿಕರಿಗೆ ತಿಳಿಯುತ್ತದೆ.

ಕೆಲವರಿಗೆ ವಿಭಾಗದ ಮೂಲಕ ಮತ್ತು ರಕ್ತಸಂಬಂಧಿಗಳಿಂದ ದಾನದ ಮೂಲಕವೂ ಸ್ಥಿರಾಸ್ತಿಗಳು ವರ್ಗಾವಣೆ ಆಗಿರುತ್ತವೆ. ಇವು ಅಕ್ರಮವಾಗಿರುವುದಿಲ್ಲ. ಬಹುತೇಕರು ರೈತ ಕುಟುಂಬದ ಹಿನ್ನೆಲೆಯ ಅಧಿಕಾರಿಗಳಾಗಿದ್ದು, ಪಿತ್ರಾರ್ಜಿತ ಆಸ್ತಿ ಉಳ್ಳವರೇ ಆಗಿರುತ್ತಾರೆ. ಈ ಎಲ್ಲವುಗಳ ಬಗ್ಗೆಯೂ ನ್ಯಾಯಾಲಯದಲ್ಲಿ ವಿಚಾರಣೆಯಾಗುತ್ತದೆ. ಪಿತ್ರಾರ್ಜಿತ ಭೂಮಿ ಬಗ್ಗೆ ಮಾಧ್ಯಮಗಳಲ್ಲಿ ವಿವರ ಬಹಿರಂಗವಾದರೆ, ಅದೂ ಅಕ್ರಮ ಎಂದೇ ಬಿಂಬಿತವಾಗುವುದು ತಪ್ಪುತ್ತದೆ. ಇದರಿಂದ, ದಾಳಿಗೊಳಗಾದ ಅಧಿಕಾರಿಗಳಿಗೆ ಆಗಬಹುದಾದ ಮುಜುಗರವಾದರೂ ತಪ್ಪುತ್ತದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಸಮ್ಮೇಳನ ನೋಂದಣಿ: ಅವಕಾಶ ಮುಕ್ತವಾಗಲಿ

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನೋಂದಾಯಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಜಾಲತಾಣದಲ್ಲಿ ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ನೋಂದಣಿ ಪ್ರಕ್ರಿಯೆಯಲ್ಲಿ ಒಂದು ಲೋಪವಿದೆ. ಸಮ್ಮೇಳನಕ್ಕೆ ಹೋಗಲು ಇಚ್ಛಿಸುವವರು ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ನೋಂದಾಯಿಸಿಕೊಳ್ಳಲೇಬೇಕಾಗಿದೆ. ಬರೀ ಆಸಕ್ತಿಯಿಂದ ಪ್ರತಿನಿಧಿಗಳಾಗಿ ಭಾಗವಹಿಸಲು ಅವಕಾಶ ಕೊಡಲಾಗಿಲ್ಲ. ಈ ಲೋಪವನ್ನು ಸರಿಪಡಿಸಿ, ಸಮ್ಮೇಳನಕ್ಕೆ ಹೋಗಲು ಇಚ್ಛಿಸುವ ಎಲ್ಲ ಕನ್ನಡಿಗರಿಗೂ ಪ್ರತಿನಿಧಿಗಳಾಗುವ ಅವಕಾಶ ಮಾಡಿಕೊಡಬೇಕು.

ಸದಸ್ಯರಾಗಿರಲೇಬೇಕು ಎಂಬ ನಿರ್ಬಂಧವನ್ನು ಹೇರಬಾರದು. ಅಲ್ಲದೆ ಈಗಾಗಲೇ ಸದಸ್ಯರಾಗಿರುವ ಹಲವರ ಮೊಬೈಲ್ ಸಂಖ್ಯೆಗಳು ಸಾಹಿತ್ಯ ಪರಿಷತ್ತಿನ ದತ್ತಾಂಶದಲ್ಲಿ ದಾಖಲಾಗಿಲ್ಲ. ದಾಖಲಿಸುವ ಪ್ರಯತ್ನ ಮಾಡಿದರೆ, 'ನಿಮ್ಮ ಮೊಬೈಲ್ ಸಂಖ್ಯೆ ನಮೂದಿಸಲು ದಯವಿಟ್ಟು ನಮ್ಮ ಕಚೇರಿಯನ್ನು ಸಂಪರ್ಕಿಸಿ' ಎಂಬ ಸಂದೇಶ ಕೇಳಿಬರುತ್ತದೆ. ವೆಬ್‌ಸೈಟ್ ಮೂಲಕವೇ ದಾಖಲಿಸಲು ಅವಕಾಶ ಮಾಡಿಕೊಡುವುದು ಒಳಿತು.

ಸಾದಿಕ್‌ಉಲ್ಲಾ ಎಂ.ಎ., ಭರಮಸಾಗರ, ಚಿತ್ರದುರ್ಗ

ಶರಣಾಗತ ನಕ್ಸಲರಿಗೆ ಪರಿಹಾರ ವಿಳಂಬ ಸಲ್ಲ

'ಸಶಸ್ತ್ರ ಹೋರಾಟ ಬಿಟ್ಟು ಮುಖ್ಯವಾಹಿನಿಗೆ ಮರಳಿದ ಹಲವಾರು ಮಾಜಿ ನಕ್ಸಲರ ಜೀವನ ದಯನೀಯ ಸ್ಥಿತಿಯಲ್ಲಿ ಇರುವುದನ್ನು (ಪ್ರ.ವಾ., ನ. 22) ತಿಳಿದು ದುಃಖವಾಯಿತು. ಯುವಜನ ಯಾವ ಪುರುಷಾರ್ಥಕ್ಕಾಗಿ ಹೀಗೆ ಹೋರಾಡಬೇಕು? ಇದು ತಂತ್ರಜ್ಞಾನದ ಯುಗ. ಕಾಡಿನ ಗರ್ಭದಲ್ಲಿದ್ದರೂ ಹಿಡಿದು ಕೊಲ್ಲುವ ಶಸ್ತ್ರಾಸ್ತ್ರಗಳು ಪ್ರಭುತ್ವದ ಕೈಯಲ್ಲಿವೆ. ಆದಾಗ್ಯೂ ಸಾಮಾಜಿಕ ಅನ್ಯಾಯದ ವಿರುದ್ಧ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದವರ ಪರ ಇವರು ಭಾವುಕರಾಗಿ ಸಶಸ್ತ್ರ ಹೋರಾಟ ಕೈಗೊಂಡರು, ತಲೆ ಕೊಟ್ಟರು, ತಲೆ ತೆಗೆದರು ಸಹ. ಇದು ಸಂವಿಧಾನ ವಿರೋಧಿ ಕೆಲಸ. ತಮ್ಮ ತಪ್ಪು ಅರಿವಾಗಿ ಮುಖ್ಯವಾಹಿನಿಗೆ ಮರಳಿದ್ದಾರೆ. ಆದರೆ ವಾರವಿಡೀ ಕೋರ್ಟಿಗೆ ಅಲೆದಾಟ, ವಕೀಲರಿಗೆ ಶುಲ್ಕ ಕೊಡಲು ಪರದಾಟ, ಜೀವನಕ್ಕೆ ಆಧಾರವಿಲ್ಲ. ಹೀಗಾದರೆ ಅವರು ಬದುಕು ಕಟ್ಟಿಕೊಳ್ಳುವುದಾದರೂ ಹೇಗೆ? ಸರ್ಕಾರವು ಮಾನವೀಯತೆ ದೃಷ್ಟಿಯಿಂದ ಮಾಜಿ ನಕ್ಸಲರ ಜೀವನೋಪಾಯಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕು.

ಪ್ರೊ. ಶಿವರಾಮಯ್ಯ, ಬೆಂಗಳೂರು

ನಿವೃತ್ತಿ ವಯಸ್ಸು: ಸುಳ್ಳು ಸುದ್ದಿಯ ಮೂಲ ಪತ್ತೆಹಚ್ಚಿ

ಕೇಂದ್ರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 60ರಿಂದ 62 ವರ್ಷಕ್ಕೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ ಎಂಬ ಸುದ್ದಿ ಇತ್ತೀಚೆಗೆ ಕೆಲವು ಮಾಧ್ಯಮಗಳಲ್ಲಿ ಪ್ರಕಟಗೊಂಡಿದೆ. ಈ ಬಗ್ಗೆ ಇದುವರೆಗೂ ಕೇಂದ್ರ ಹಣಕಾಸು ಸಚಿವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ವಾಟ್ಸ್‌ಆ್ಯಪ್‌ನಲ್ಲೂ ಈ ಸುದ್ದಿ ಹರಿದಾಡುತ್ತಿದ್ದು, ಯುವ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ. ಈಗಾಗಲೇ ನಿರುದ್ಯೋಗದ ಸಮಸ್ಯೆಯಿಂದ ತತ್ತರಿಸಿರುವ ಯುವಜನ ಈ ಸುದ್ದಿ ಕೇಳಿ ಆತಂಕಗೊಂಡಿದ್ದಾರೆ. ಐದಾರು ವರ್ಷಗಳಿಂದಲೂ ಕೇಂದ್ರ ಸರ್ಕಾರದ ಬಜೆಟ್‌ನ ಮೂರ್ನಾಲ್ಕು ತಿಂಗಳ ಮೊದಲು ಇಂತಹದ್ದೊಂದು ಸುದ್ದಿ ಎಲ್ಲೆಡೆ ಹರಿದಾಡುತ್ತದೆ. ನಂತರ ಹಣಕಾಸು ಸಚಿವರು, ಅಂತಹ ಯಾವುದೇ ಪ್ರಸ್ತಾವ ಕೇಂದ್ರದ ಮುಂದಿಲ್ಲ ಎಂದು ಹೇಳಿಕೆ ನೀಡುತ್ತಾರೆ. ಆಗ ಯುವಜನ ಸ್ವಲ್ಪಮಟ್ಟಿಗೆ ನಿಟ್ಟುಸಿರುಬಿಡುತ್ತಾರೆ.

ಹಾಗಿದ್ದರೆ ಇಂತಹ ಸುಳ್ಳು ಸುದ್ದಿಗಳ ಮೂಲ ಯಾವುದು, ಯುವಜನರನ್ನು ಹೀಗೆ ದಾರಿ ತಪ್ಪಿಸುವುದರ ಉದ್ದೇಶವಾದರೂ ಏನು ಎಂಬುದು ಅರ್ಥವಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಕಾನೂನು ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರ ಮುಂದಾಗಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚಾಂಪಿಯನ್ಸ್ ಟ್ರೋಫಿ: ಭಾರತ ಕ್ರಿಕೆಟ್ ತಂಡ ಪಾಕಿಸ್ತಾನದಲ್ಲಿ ಆಡಬೇಕೇ, ಬೇಡವೇ?



ತಿರುಗಿದ ಕಾಲಚಕ್ರ, ಈಗ 'ದೊಡ್ಡಣ್ಣ'ನ ಸರದಿ


• ಎಂ.ರಾಮಚಂದ್ರ



> ಭಾರತ ಮತ್ತು ಪಾಕಿಸ್ತಾನಗಳ ನಡುವೆ ಉಂಟಾಗಿರುವ ಈ ಬಿಕ್ಕಟ್ಟು ಹೊಸದೇನೂ ಅಲ್ಲ. ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ಈ ಹಿಂದೆ ಪಾಕ್ ತಂಡವೇ ಇಂತಹ ಧೋರಣೆ ತೋರಿದ್ದ ಉದಾಹರಣೆಗಳಿವೆ. ಪಾಕಿಸ್ತಾನ ಕ್ರಿಕೆಟ್ ತಂಡವು ಐದು ಬಾರಿ ಭಾರತ ಪ್ರವಾಸವನ್ನು ರದ್ದುಗೊಳಿಸಿತ್ತು. ಈಗ ಕಾಲ ಚಕ್ರ ತಿರುಗಿದೆ. ಕ್ರಿಕೆಟ್ ಲೋಕದ 'ದೊಡ್ಡಣ್ಣ'ನಾಗಿ ಬೆಳೆದಿರುವ ಭಾರತವು ಈಗ, ಪಾಕಿಸ್ತಾನ ಅಂದು ತೋರಿದ್ದ ಧೋರಣೆಯನ್ನೇ ಅನುಸರಿಸುತ್ತಿದೆ ಎಂದಷ್ಟೇ ಹೇಳಬಹುದೇ ವಿನಾ, ಭಾರತದ ನಡೆಯನ್ನು ನೈತಿಕತೆಯ ನೆಲಗಟ್ಟಿನಲ್ಲಿ ಪ್ರಶ್ನಿಸಲಾಗದು. ನಮ್ಮ ಗಡಿ ಭಾಗಗಳಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ದೇಶದೊಂದಿಗೆ ಯಾವುದೇ ಬಗೆಯ ನಂಟು ಬೇಡವೆಂದು ನಮ್ಮ ಸರ್ಕಾರ ಸಂಕಲ್ಪ ಮಾಡಿದೆ. ಈ ದೇಶದ ಪ್ರಜೆಗಳಾಗಿ ಅದನ್ನು ಗೌರವಿಸೋಣ

ನೆರೆರಾಷ್ಟ್ರ ಪಾಕಿಸ್ತಾನದಲ್ಲಿ 2025ರ ಫೆಬ್ರುವರಿಯಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡವನ್ನು ಕಳುಹಿಸಲು ಸಾಧ್ಯವಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ದೃಢ ತೀರ್ಮಾನ ಕೈಗೊಂಡಿದೆ. ಹೋದ ವರ್ಷದ ಏಷ್ಯಾ ಕಪ್ ಟೂರ್ನಿ ಮಾದರಿಯಲ್ಲೇ ತಟಸ್ಥ ಸ್ಥಳಗಳಲ್ಲಿ ಚಾಂಪಿಯನ್ಸ್ ಟ್ರೋಫಿ ಪಂದ್ಯಗಳನ್ನು ಆಯೋಜಿಸುವಂತೆ ಐಸಿಸಿಗೆ ಅಧಿಕೃತ ಕೋರಿಕೆಯನ್ನೂ ಸಲ್ಲಿಸಿದೆ. ಇದರ ಬೆನ್ನಲ್ಲೇ, ಬಿಸಿಸಿಐನ ನಿಲುವಿನ ಬಗ್ಗೆ ಪರ-ವಿರೋಧ ಚರ್ಚೆಗಳು ತೀವ್ರಗೊಂಡಿವೆ.

'ಒಂದೂವರೆ ದಶಕದಿಂದ ವಿವಿಧ ದೇಶಗಳಲ್ಲಿ ಏಷ್ಯಾ ಕಪ್ ಹಾಗೂ ಎರಡೂ ಮಾದರಿಯ ವಿಶ್ವಕಪ್ ಟೂರ್ನಿಗಳಲ್ಲಿ ಯಾವುದೇ ಪ್ರತಿರೋಧ ಒಡ್ಡದೆ ಪಾಕಿಸ್ತಾನದ ಎದುರು ಸೆಣಸಿರುವ ಭಾರತ, ಈ ಬಾರಿಯ ಚಾಂಪಿಯನ್ಸ್ ಟ್ರೋಫಿಗೆ ಮಾತ್ರ ಪಾಕಿಸ್ತಾನಕ್ಕೆ ಪ್ರವಾಸ ಮಾಡಲು ನಿರಾಕರಿಸುತ್ತಿರುವುದು ಸರಿಯಲ್ಲ. ಇದು ಭಾರತದ ಕ್ರಿಕೆಟ್ ಮಂಡಳಿಯ ಇಬ್ಬಗೆ ನೀತಿಯನ್ನು ತೋರಿಸುತ್ತದೆ' ಎಂಬ ಟೀಕೆ ಪಾಕಿಸ್ತಾನದಿಂದ ಕೇಳಿ ಬರುತ್ತಿದೆ. ಆದರೆ, ಬಿಸಿಸಿಐ ತನ್ನ ಆಟಗಾರರ ಸುರಕ್ಷತೆಯ ವಿಚಾರವನ್ನು ಪ್ರಸ್ತಾಪಿಸುತ್ತಾ, 'ಇದು ಕೇಂದ್ರ ಸರ್ಕಾರದ ಕಟ್ಟಪ್ಪಣೆ. ಹಾಗಾಗಿ, ಯಾವುದೇ ಪರಿಸ್ಥಿತಿಯಲ್ಲೂ ತಂಡವನ್ನು ಕಳುಹಿಸುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದೆ. ಸಾಂಪ್ರದಾಯಿಕ ಎದುರಾಳಿಗಳ ಈ ಹಗ್ಗ-ಜಗ್ಗಾಟ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ (ಐಸಿಸಿ) ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಟೂರ್ನಿಯನ್ನು ಸುಸೂತ್ರವಾಗಿ ನಡೆಸಲು ತನ್ನ ಮುಂದಿರುವ ಆಯ್ಕೆಗಳನ್ನು ಅದು ಪರಿಶೀಲಿಸುತ್ತಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿ ಎಂದರೆ, ಉಭಯ ದೇಶಗಳ ನಡುವೆ ಉಂಟಾಗಿರುವ ಈ ಬಿಕ್ಕಟ್ಟು ಹೊಸದೇನೂ ಅಲ್ಲ. ಇತಿಹಾಸದ ಪುಟಗಳನ್ನು ತೆಗೆದುನೋಡಿದರೆ ಈ ಹಿಂದೆ ಪಾಕ್ ತಂಡವೇ ಇಂತಹ ಧೋರಣೆ ತೋರಿರುವ ಉದಾಹರಣೆಗಳಿವೆ. ಈಗ, ಕ್ರಿಕೆಟ್ ಲೋಕದ 'ದೊಡ್ಡಣ್ಣ'ನಾಗಿ ಬೆಳೆದಿರುವ ಭಾರತದ ಸರದಿ ಅಷ್ಟೇ.



ಭಾರತ–ಪಾಕ್ ಕ್ರಿಕೆಟ್ ಪಯಣ: 1950ರ ದಶಕದಲ್ಲಿ ಮೊದಲ್ಗೊಂಡ ಭಾರತ-ಪಾಕ್‌ನ ಕ್ರಿಕೆಟ್ ನಂಟು ಏಳು ದಶಕಗಳಲ್ಲಿ ಅನೇಕ ಏರಿಳಿತಗಳನ್ನು ಕಂಡಿದೆ. ಈ ಅವಧಿಯಲ್ಲಿ ರಾಜಕೀಯ ಕಾರಣಗಳಿಂದ ಎರಡು ದೇಶಗಳ ನಡುವಿನ ಸಂಬಂಧ ಹಲವಾರು ಬಾರಿ ಬಿಗಡಾಯಿಸಿ, ಕ್ರಿಕೆಟ್ ತಂಡಗಳು ಟೆಸ್ಟ್‌ಗಳಲ್ಲಿ ಕಣಕ್ಕಿಳಿದಿದ್ದು ಅತೀ ಕಡಿಮೆ. 1990ರ ದಶಕದಲ್ಲಿ ಬಲಿಷ್ಠ ತಂಡವಾಗಿ ಹೊರಹೊಮ್ಮಿದ್ದ ಇಮ್ರಾನ್ ಖಾನ್ ಅವರ ಪಾಕಿಸ್ತಾನ ತಂಡ ಐದು ಬಾರಿ ಭಾರತದ ಪ್ರವಾಸವನ್ನು ರದ್ದುಗೊಳಿಸಿತ್ತು.

1990–91ರಲ್ಲಿ ಭಾರತ ಏಷ್ಯಾ ಕಪ್ ಆತಿಥ್ಯ ವಹಿಸಿತ್ತು. ಪಾಕಿಸ್ತಾನವು ಕಾಶ್ಮೀರದ ಆಗುಹೋಗುಗಳ ಕಾರಣ ನೀಡಿ ಆ ಟೂರ್ನಿಯಿಂದ ಹೊರಗುಳಿದಿತ್ತು. ಕೊನೆಗೆ, ಶ್ರೀಲಂಕಾ, ಭಾರತ ಮತ್ತು ಬಾಂಗ್ಲಾದೇಶ ತಂಡಗಳು ಮಾತ್ರ ತ್ರಿಕೋನ ಹಣಾಹಣಿಯಲ್ಲಿ ಎದುರಾಗಿದ್ದವು. ಅದೇ ವರ್ಷ, ಐದು ಟೆಸ್ಟ್ ಸರಣಿ ಪ್ರವಾಸವನ್ನು ಕೊನೇ ಘಳಿಗೆಯಲ್ಲಿ ರದ್ದು ಮಾಡಿ ಬಿಸಿಸಿಐಗೆ ಅಪಾರ ನಷ್ಟ ಉಂಟು ಮಾಡಿತ್ತು. 1993–94ರ ಋತುವಿನಲ್ಲಿ ಮೂರು ಟೆಸ್ಟ್ ಹಾಗೂ ಐದು ಏಕದಿನ ಪಂದ್ಯಗಳ ಸರಣಿಯಿಂದಲೂ ಹಿಂದೆ ಸರಿದಿತ್ತು. 1993ರಲ್ಲಿ ಮುಂಬೈ ಸ್ಫೋಟದ ನೆಪ ಒಡ್ಡಿದ್ದ ಪಾಕಿಸ್ತಾನ, ತಮ್ಮ ಆಟಗಾರರು ಭಾರತದಲ್ಲಿ ಸುರಕ್ಷಿತವಾಗಿ ಇರಲಾರರು ಎಂಬ ಕಾರಣ ನೀಡಿ ತಂಡವನ್ನು ಕಳುಹಿಸಿರಲಿಲ್ಲ. ಆ ಕಾಲಘಟ್ಟದಲ್ಲಿ ಬೇರೆಲ್ಲ ದೇಶದ ತಂಡಗಳು ನಿರಾತಂಕವಾಗಿ ಭಾರತ ಪ್ರವಾಸ ಕೈಗೊಂಡು, ಸರಣಿ, ಪಂದ್ಯಗಳಲ್ಲಿ ಪಾಲ್ಗೊಂಡು ಸುರಕ್ಷಿತವಾಗಿ ಹಿಂದಿರುಗಿದ ಉದಾಹರಣೆಗಳಿದ್ದರೂ ಪಾಕ್ ಮಾತ್ರ ಯಾವುದಕ್ಕೂ ಸೊಪ್ಪು ಹಾಕದೆ ಭಾರತದಿಂದ ದೂರವೇ ಉಳಿದಿತ್ತು.

1994–95ರಲ್ಲೂ, ಭಾರತದಲ್ಲಿನ ಪರಿಸ್ಥಿತಿ ಪಾಕ್ ಆಟಗಾರರಿಗೆ ಅಪಾಯಕಾರಿ ಎಂದು ಘೋಷಿಸಿ ಪಾಕಿಸ್ತಾನವು ಪ್ರವಾಸವನ್ನು ಮುಲಾಜಿಲ್ಲದೆ ರದ್ದುಗೊಳಿಸಿತ್ತು. ಆದರೆ, ಅದೇ ಸಮಯದಲ್ಲಿ ಶಾರ್ಜಾ ಹಾಗೂ ವಿಶ್ವಕಪ್ ಟೂರ್ನಿಗಳಲ್ಲಿ ಪಾಕಿಸ್ತಾನ ಯಾವುದೇ ಅಳುಕಿಲ್ಲದೆ ಭಾರತದ ವಿರುದ್ಧ ಆಡಿತ್ತು ಎಂಬುದು ಗಮನಿಸಬೇಕಾದ ಸಂಗತಿ. ಈಗ ಕಾಲಚಕ್ರ ತಿರುಗಿದೆ. ಪಾಕಿಸ್ತಾನ ಅಂದು ಪ್ರದರ್ಶಿಸಿದ್ದ ಇಬ್ಬಗೆ ನೀತಿಯನ್ನು ಬಲಾಢ್ಯ ತಂಡವಾಗಿರುವ ಭಾರತ ಈಗ ಅನುಸರಿಸುತ್ತದೆ ಎಂದಷ್ಟೇ ಹೇಳಬಹುದೇ ವಿನಾ, ಭಾರತದ ನಡೆಯನ್ನು ನೈತಿಕತೆಯ ನೆಲಗಟ್ಟಿನಲ್ಲಿ ಪ್ರಶ್ನಿಸಲಾಗದು. ಹಾಗಾಗಿ, ಕೇಂದ್ರ ಸರ್ಕಾರ ಹಾಗೂ ಬಿಸಿಸಿಐಗಳನ್ನು ಟೀಕಿಸುವ ಮುನ್ನ ನಾವು ಎರಡೂ ದೇಶಗಳ ಇತಿಹಾಸವನ್ನು ಅರಿಯುವುದು ಉತ್ತಮ. ಪಾಕಿಸ್ತಾನದಲ್ಲಿ ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾದಂತಹ ದೇಶದ ಆಟಗಾರರು ಮತ್ತು ಇಲ್ಲಿಯ ಕ್ರಿಕೆಟಿಗರು ಎದುರಿಸುವ ಸವಾಲುಗಳು ಹಾಗೂ ಅಪಾಯ ಬೇರೆ ಮಟ್ಟದ್ದು ಎಂಬುದು ಭಾರತದ ಅಂಬೋಣ. ಇದಕ್ಕೆ ಪುಷ್ಟಿ ನೀಡುವಂತೆ ಮೊನ್ನೆಯಷ್ಟೇ ನಮ್ಮ ಅಂಧರ ತಂಡ ಪಾಕಿಸ್ತಾನಕ್ಕೆ ತೆರಳುವುದನ್ನೂ ಸರ್ಕಾರ ನಿರ್ಬಂಧಿಸಿದೆ.

ಐಸಿಸಿ ಮುಂದಿರುವ ಆಯ್ಕೆಗಳು: ಭಾರತ ಪಾಲ್ಗೊಳ್ಳದ ಚಾಂಪಿಯನ್ಸ್ ಟ್ರೋಫಿಯನ್ನು ಊಹಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸತ್ಯ ಐಸಿಸಿಗೆ ಚೆನ್ನಾಗಿಯೇ ತಿಳಿದಿದೆ. ಐಸಿಸಿ ಗಳಿಕೆಯ ಮುಕ್ಕಾಲು ಪಾಲು ಭಾರತದಿಂದಲೇ ಬರುತ್ತಿರುವುದರಿಂದ ಬಿಸಿಸಿಐನ ಬೇಡಿಕೆಗಳನ್ನು ಅದು ಎಂದಿಗೂ ಕಡೆಗಣಿಸಲಾರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರತದ ಗೈರುಹಾಜರಿಯಿಂದ ಪಾಕಿಸ್ತಾನಕ್ಕೆ ಆಗುವ ನಷ್ಟವನ್ನು ತುಂಬಿ ಕೊಡುವ ಭರವಸೆ ನೀಡುವ ಮೂಲಕ ಅದರ ಮನವೊಲಿಸಿ, ಭಾರತದ ಸಲುವಾಗಿ ಹೈಬ್ರಿಡ್ ಮಾದರಿಯಲ್ಲಿ ಟೂರ್ನಿ ಆಯೋಜಿಸುವುದೊಂದೇ ಐಸಿಸಿ ಮುಂದಿರುವ ಸಲೀಸಾದ ಮತ್ತು ಸಹಜವಾದ ಆಯ್ಕೆ. ಆದರೆ, 'ಪ್ರತಿ ಬಾರಿ ಮಣಿಯಲು ನಾವು ತಯಾರಿಲ್ಲ' ಎಂದು ಪಾಕ್ ಈಗಾಗಲೇ ಘೋಷಿಸಿರುವುದರಿಂದ ಪೂರ್ತಿ ಟೂರ್ನಿಯನ್ನೇ ದಕ್ಷಿಣ ಆಫ್ರಿಕಾಕ್ಕೆ ಸ್ಥಳಾಂತರಿಸುವ ಕುರಿತು ಸಾಧಕ-ಬಾಧಕ ಚರ್ಚೆಗಳೂ ಆರಂಭಗೊಂಡಿವೆ. ಹೀಗಾದಲ್ಲಿ, ಪಾಕಿಸ್ತಾನಕ್ಕೆ ಹಣಕಾಸಿನ ನಷ್ಟವನ್ನು ತುಂಬಿಸಿಕೊಟ್ಟರೂ ಜಾಗತಿಕ ಮಟ್ಟದಲ್ಲಿ ಅದಕ್ಕೆ ತೀವ್ರ ಮುಖಭಂಗವಾಗುವುದು ಖಂಡಿತ. ಟೂರ್ನಿಗೆ ಇನ್ನು ಮೂರು ತಿಂಗಳು ಮಾತ್ರ ಇದೆ. ಇನ್ನೊಂದು ವಾರದಲ್ಲಿ ಪಂದ್ಯಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಬೇಕಿರುವ ಹೊಣೆ ಮತ್ತು ತುರ್ತು ಐಸಿಸಿಯ ಮೇಲಿದ್ದು, ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಅದು ಹೇಗೆ ನಿಭಾಯಿಸಲಿದೆ ಎಂಬ ಕುತೂಹಲ ಕ್ರಿಕೆಟ್ ಅಭಿಮಾನಿಗಳಲ್ಲಿ ಮನೆ ಮಾಡಿದೆ.

'ಕ್ರೀಡೆ ಹಾಗೂ ದೇಶದ ರಾಜಕೀಯ ಚಟುವಟಿಕೆಗಳು ಬೇರೆ-ಬೇರೆ; ಅವುಗಳನ್ನು ಬದಿಗಿಟ್ಟು ಆಟವನ್ನು ಸವಿಯಬೇಕು' ಎಂಬುದು ಬಹುತೇಕರ ನಿಲುವಾದರೂ, ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಅವು ಬೇರೆಯೇ ಕಥೆಯನ್ನು ಹೇಳುತ್ತದೆ. 1974ರಲ್ಲಿ ಭಾರತದ ಟೆನಿಸ್ ತಂಡ ಪ್ರತಿಷ್ಠಿತ ಡೇವಿಸ್ ಕಪ್ ಟೆನಿಸ್ ಟೂರ್ನಿಯ ಫೈನಲ್ ತಲುಪಿ, ಪ್ರಶಸ್ತಿಯ ಸನಿಹ ಬಂದಾಗಲೂ, ವರ್ಣಭೇದ ನೀತಿಯನ್ನು ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕಾ ಎದುರು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರ ಸೆಣಸುವುದು ತರವಲ್ಲ ಎಂದು ಆಗಿನ ಸರ್ಕಾರ ಫೈನಲ್ ಪಂದ್ಯವನ್ನೇ ಬಹಿಷ್ಕರಿಸಿತ್ತು. ಇದೇ ಮಾದರಿಯಲ್ಲಿ 1986ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ದಕ್ಷಿಣ ಆಫ್ರಿಕಾವನ್ನು ಹೊರಗಿಡದೆ, ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟ ಬ್ರಿಟನ್ ನಿಲುವನ್ನು ಪ್ರತಿಭಟಿಸಿ, ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ಒಟ್ಟಾಗಿ ಕಾಮನ್‌ವೆಲ್ತ್ ಗೇಮ್ಸ್ ಅನ್ನೇ ಬಹಿಷ್ಕರಿಸಿದ್ದವು. ಇಂತಹ ಹಲವಾರು ಉದಾಹರಣೆಗಳನ್ನು ಕಂಡಾಗ, ಪಾಕಿಸ್ತಾನದ ಕುರಿತು ಈಗಿನ ಭಾರತ ಸರ್ಕಾರದ ನಿಲುವನ್ನು ಟೀಕಿಸುವುದು ಎಷ್ಟು ಸಮಂಜಸ ಎಂಬ ಪ್ರಶ್ನೆಯನ್ನು ನಾವೇ ಕೇಳಿಕೊಳ್ಳಬೇಕಿದೆ. ಇಂದಿಗೂ, ನಮ್ಮ ಗಡಿ ಭಾಗಗಳಲ್ಲಿ ಉಗ್ರಗಾಮಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಭಾರತಕ್ಕೆ ಕಂಟಕಪ್ರಾಯವಾಗಿರುವ ದೇಶದೊಂದಿಗೆ ಯಾವುದೇ ಬಗೆಯ ನಂಟು ಬೇಡವೆಂದು ನಮ್ಮ ಸರ್ಕಾರ ಸಂಕಲ್ಪ ಮಾಡಿದೆ. ರಾಜಕೀಯ ವಾತಾವರಣ ಸುಧಾರಿಸಿದ ಬಳಿಕವಷ್ಟೇ ಪಾಕಿಸ್ತಾನದೊಂದಿಗೆ ಮುಂದಿನ ಮಾತು ಎಂಬುದು ಭಾರತದ ದೃಢ ನಿಲುವು. ಅದನ್ನು ಈ ದೇಶದ ಪ್ರಜೆಗಳಾಗಿ ಗೌರವಿಸೋಣ.

ಲೇಖಕ: ಐಟಿ ಉದ್ಯೋಗಿ, ಕ್ರೀಡಾ ಬರಹಗಾರ

ಕ್ರೀಡೆ ಶಾಂತಿ ದೂತ, ಕ್ರೀಡಾಧರ್ಮಕ್ಕೆ ಗಡಿ ಇಲ್ಲ


• ಶೇಷಾಚಲ ಹವಾಲ್ದಾರ್ ತಾಳಿಕೋಟೆ



> ಒಲಿಂಪಿಕ್ಸ್ ಉದ್ಘಾಟನೆ ಸಂದರ್ಭದಲ್ಲಿ ಪಾರಿವಾಳಗಳನ್ನು ಮುಗಿಲಿಗೆ ತೂರಿ ಹಾರಿಸಲಾಗುತ್ತದೆ. ಶಾಂತಿ ಸಾರುವುದು ಅದರ ಉದ್ದೇಶ. ಪಾಕಿಸ್ತಾನದ ರಾಜಕೀಯ ನಿಲುವಿನಲ್ಲಿ ಭಯೋತ್ಪಾದನೆ ಮುಂಚೂಣಿಯಲ್ಲಿ ನಿಂತಿದೆ. ಅದುವೇ ಅದರ ಪ್ರಮುಖ ಅಸ್ತ್ರ. ಇದು ಒಡಲಲ್ಲಿನ ಕೆಂಡ. ಅದೀಗ ಕಾಳ್ಗಿಚ್ಚಾಗಿ ಹೊಗೆ ಉಸಿರುಗಟ್ಟಿಸುತ್ತಿರುವಾಗ ಶಾಂತಿಯ ಪಾರಿವಾಳಗಳನ್ನು ಆ ಕಿಚ್ಚಿನ ಮೇಲೆ ಹಾರಿಸಬೇಕೇ? ಪಾರಿವಾಳದ ರೆಕ್ಕೆ ಪುಕ್ಕಗಳು ಸುಟ್ಟು ಕರಕಲಾಗುವುದಿಲ್ಲವೇ ಎಂಬುದು ಭಾರತದ ಪ್ರಶ್ನೆ. ಕ್ರೀಡೆ ಮತ್ತು ರಾಜಕಾರಣವನ್ನು ಒಂದಾಗಿ ನೋಡುವ ಅಗತ್ಯವೇನೂ ಇಲ್ಲ. ಕ್ರೀಡೆಗೆ ಅವಕಾಶ ನೀಡಿದರೂ, ಉಗ್ರವಾದದ ಬಗ್ಗೆ ಪಾಕಿಸ್ತಾನದ ನಿಲುವಿನ ವಿರುದ್ಧ, ಗಡಿಗಳಲ್ಲಿ ಉಗ್ರರ ಉಪಟಳದ ವಿರುದ್ಧ ಕ್ರಮ ಕೈಗೊಳ್ಳುವ ಸ್ವಾತಂತ್ರ್ಯ ಭಾರತಕ್ಕೆ ಯಾವಾಗಲೂ ಇದ್ದೇ ಇದೆ

ಭಾರತ ಮತ್ತು ಪಾಕಿಸ್ತಾನ ನಡುವೆ ಕ್ರಿಕೆಟ್ ಸಂಬಂಧ ಮತ್ತೆ ಶುರುವಾಗಬೇಕೋ ಬೇಡವೋ ಎಂಬ ಜಿಜ್ಞಾಸೆ ಚಾಂಪಿಯನ್ಸ್ ಟ್ರೋಫಿ ಸಮಯದಲ್ಲಿ ತಲೆ ಎತ್ತಿದೆ. ಯಾವುದೇ ಕಾರಣಕ್ಕೂ ಪಾಕಿಸ್ತಾನಕ್ಕೆ ತಂಡವನ್ನು ಕಳುಹಿಸುವುದಿಲ್ಲ ಎಂಬ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಿಲುವು ವಜ್ರದಷ್ಟು ಕಠೋರವಾಗಿದೆ. ಎರಡೂ ದೇಶಗಳ ರಾಜತಾಂತ್ರಿಕ ಸಂಬಂಧಗಳ ಹಿನ್ನೆಲೆಯಲ್ಲಿ ಈ ನಿಲುವು ಸಮರ್ಪಕ ಎಂದೆನಿಸಬಹುದು. ಆದರೆ, ಅಷ್ಟೊಂದು ಕಠೋರವಾಗುವ ಅಗತ್ಯವಿದೆಯೇ? ಇಂತಹ ನಿಲುವಿನಿಂದ ಕ್ರೀಡೆ ಹಾಗೂ ಲಲಿತ ಕಲೆಗಳು ಉಪವಾಸ ಬೀಳುವುದಂತೂ ಖಂಡಿತ. ಗಂಡ ಹೆಂಡತಿಯರ ಜಗಳದ ನಡುವೆ ಕೂಸು ಬಡವಾಗಬೇಕೇ?

ಹಿಂದೆ ಗಡಿಗಳ ಸಲುವಾಗಿ ಎರಡು ರಾಷ್ಟ್ರ ಅಥವಾ ರಾಜ್ಯ, ಪ್ರಾಂತ್ಯಗಳ ನಡುವೆ ಯುದ್ಧಗಳಾಗುತ್ತಿದ್ದವು. ಅಪಾರ ಪ್ರಮಾಣದ ಸಾವು ನೋವು ಸಂಭವಿಸುತ್ತಿತ್ತು. ಬಳಿಕ ಗಡಿಗಳು ನಿರ್ಧಾರವಾಗಿ ರಾಷ್ಟ್ರ, ರಾಜ್ಯಗಳು ರಚನೆಗೊಂಡು ಯುದ್ಧದ ಜಾಗವನ್ನು ಕ್ರೀಡೆಗಳು ತುಂಬಿದವು. ಯುದ್ಧದಲ್ಲಿ ಸಾವು ನೋವುಗಳಿದ್ದರೆ, ಕ್ರೀಡೆಯಲ್ಲಿ ಜಯಾಪಜಯಗಳಿವೆ. ಎರಡು ವಿರೋಧಿ ರಾಷ್ಟ್ರಗಳ ನಡುವೆ ಕ್ರೀಡಾ ಪಂದ್ಯಗಳು ನಡೆಯುವಾಗ ಅಭಿಮಾನಿಗಳಲ್ಲಿ ಕ್ರೀಡೋನ್ಮಾದ ತುಂಬಿರುತ್ತದೆ. ಸೋತ ತಂಡದ ಅಭಿಮಾನಿಗಳು ನಿರಾಶರಾಗುವುದು ಸಹಜ. ಅದೇ ರೀತಿ, ಗೆದ್ದ ತಂಡದ ಅಭಿಮಾನಿಗಳು ಸಂಭ್ರಮಿಸುವುದು ಸ್ವಾಭಾವಿಕ. ಆದರೆ, ಪಂದ್ಯದಲ್ಲಿ ಪಾಲ್ಗೊಂಡ ಕ್ರೀಡಾಪಟುಗಳು ಅದೊಂದು ಕ್ರೀಡೆ ಎಂದು ಭಾವಿಸಿ ಪರಸ್ಪರ ಅಭಿನಂದಿಸುತ್ತಾರೆ. ಹಸ್ತಲಾಘವ ನೀಡುತ್ತಾರೆ. ಮುಗುಳ್ನಗುತ್ತಾರೆ. ಅಪ್ಪಿಕೊಳ್ಳುತ್ತಾರೆ.



ಒಲಿಂಪಿಕ್ ಕ್ರೀಡಾಕೂಟವು ಜಾಗತಿಕ ಮಟ್ಟದ ಕ್ರೀಡಾಪಟುಗಳ ಜೀವಮಾನದ ಸಾಧನೆಯ ಪ್ರದರ್ಶನ ನೀಡಲೊಂದು ಆಡುಂಬೊಲ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ಮುಕ್ತಾಯಗೊಂಡ ಕೂಟದಲ್ಲಿ ಪಾಕಿಸ್ತಾನದ ಈಟಿ (ಜಾವಲಿನ್) ಎಸೆತಗಾರ ಅರ್ಷದ್ ನದೀಮ್ ಚಿನ್ನದ ಪದಕ ಗೆದ್ದರೆ, ಭಾರತದ ಕಣ್ಮಣಿ ನೀರಜ್ ಚೋಪ್ರಾ ಬೆಳ್ಳಿ ಪದಕ ಗಳಿಸಿದರು. ಈ ಇಬ್ಬರೂ ಶ್ರೇಷ್ಠ ಕ್ರೀಡಾಪಟುಗಳ ಸ್ನೇಹ ಮತ್ತು ನದೀಮ್ ಸಾಧನೆಯ ಹಿಂದೆ ಚೋಪ್ರಾ ಕೊಡುಗೆ ಇದೆ ಎಂಬುದೂ ಎಲ್ಲರಿಗೂ ತಿಳಿದಿರುವುದೇ. ಅದು ಕ್ರೀಡಾ ಧರ್ಮ. ಕೌಶಲಕ್ಕೆ, ಹೃದಯದ ಔದಾರ್ಯಕ್ಕೆ ಗಡಿಗಳಿಲ್ಲವಲ್ಲ! ಇಬ್ಬರ ಸಾಧನೆಯನ್ನು ಕೊಂಡಾಡುತ್ತಾ, ಅವರ ಅಮ್ಮಂದಿರು ಪರಸ್ಪರ ನೀಡಿರುವ ಹೇಳಿಕೆಗಳನ್ನು ಗಮನಿಸಿ. ಅದನ್ನು ನೋಡಿದಾಗ ಭಾರತ ಮತ್ತು ಪಾಕಿಸ್ತಾನದ ನಡುವೆ ಇಷ್ಟೊಂದು ದೊಡ್ಡ ಕಂದಕವಿದೆಯೇ ಎಂದು ಯಾರಿಗಾದರೂ ಅನಿಸಿತ್ತೇ? ಇದು ಕ್ರೀಡೆಗೆ ಇರುವ ಶಕ್ತಿ.

ಭಾರತ ಮತ್ತು ಪಾಕಿಸ್ತಾನದ ನಡುವೆ ಕ್ರಿಕೆಟ್ ನಡೆಯುತ್ತದೆ ಎಂದರೆ, ಭಾರತ ತಂಡದ ರೋಹಿತ್ ಶರ್ಮಾ, ಯಶಸ್ವಿ ಜೈಸ್ವಾಲ್, ಶುಭ್‌ಮನ್ ಗಿಲ್ ಮತ್ತು ವಿರಾಟ್ ಕೊಹ್ಲಿ ಮುಂತಾದ ಆಕ್ರಮಣಶೀಲ ಬ್ಯಾಟರ್‌ಗಳು ಪಾಕಿಸ್ತಾನದ ಪ್ರಚಂಡ ವೇಗದ ಬೌಲರ್‌ಗಳ ಎದುರು ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಮಾಡಲು ಸಿಗುವ ಸುವರ್ಣಾವಕಾಶ. ಹಾಗೆಯೇ ಭಾರತದ ಜಸ್‌ಪ್ರೀತ್ ಬೂಮ್ರಾ , ಅರ್ಷ್‌ದೀಪ್, ಬಿಷ್ಣೋಯಿ, ವರುಣ್ ಚಕ್ರವರ್ತಿ ಇಂತಹ ಪ್ರತಿಭಾನ್ವಿತ ಬೌಲರ್‌ಗಳ ಎದುರು ಪಾಕ್‌ನ ಬಾಬರ್ ಅಜಮ್ ಮತ್ತವರ ಬ್ಯಾಟರ್‌ಗಳು ಹೇಗೆ ಬ್ಯಾಟ್ ಝಳಪಿಸಬಹುದೆಂಬುದೇ ಒಂದು ರೋಚಕ ಕಲ್ಪನೆ. ಕ್ರೀಡಾಭಿಮಾನಿಗಳಿಗೆ ರಸಸೌದಣ ಸಿಗುವ ಸಂದರ್ಭ ಅದು. ನಿಜವಾದ ಕ್ರೀಡಾ ಪ್ರೇಮಿಗಳು ಯಾವತ್ತೂ ಇಂತಹ ಅಪೂರ್ವ ಅವಕಾಶವನ್ನು ಕಳೆದುಕೊಳ್ಳಲು ಬಯಸುವುದಿಲ್ಲ.

ಭಯೋತ್ಪಾದನೆಯ ವಿಚಾರದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಹದಗೆಟ್ಟಿರುವುದು ನಿಜ. ಸಂಬಂಧ ಸುಧಾರಿಸದೇ ಇರಲು ಪಾಕಿಸ್ತಾನದ ರಾಜತಾಂತ್ರಿಕ ನಡೆಗಳು, ನೀತಿಗಳು ಕಾರಣವಾಗಿರಬಹುದು. ಆದರೆ, ಕ್ರಿಕೆಟ್ ಸೇರಿದಂತೆ ಯಾವುದೇ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ರಾಜಕೀಯ, ರಾಜತಾಂತ್ರಿಕ ಸಂಬಂಧಗಳ ಹೊರತಾದ ದೃಷ್ಟಿಕೋನದಿಂದ ನೋಡಬೇಕು. ಎರಡೂ ರಾಷ್ಟ್ರಗಳ ಸಂಬಂಧ ಬಿಗಡಾಯಿಸಿದ್ದ ಸಂದರ್ಭದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ದಿಢೀರ್ ಪಾಕಿಸ್ತಾನಕ್ಕೆ ತೆರಳಿ, ಆಗಿನ ಪ್ರಧಾನಿ ನವಾಜ್ ಷರೀಫ್ ಅವರನ್ನು ಭೇಟಿ ಮಾಡಿ ಅವರಿಗೆ ಹುಟ್ಟುಹಬ್ಬ ಶುಭಾಶಯ ಹೇಳಿದ್ದು ನೆನಪಿರಬಹುದು. ಅದು ನೆರೆಯ ರಾಷ್ಟ್ರದತ್ತ ಸ್ನೇಹದ ಹಸ್ತ ಚಾಚಿದ ಪ್ರಯತ್ನವಾಗಿತ್ತು. ಈಗಲೂ ಉಭಯ ದೇಶಗಳ ನಡುವೆ ಪರಿಸ್ಥಿತಿ ವಿಷಮವಾಗಿದೆ. ರಾಜತಾಂತ್ರಿಕವಾಗಿ ಅಥವಾ ರಾಜಕೀಯವಾಗಿ ಅದು ಸುಧಾರಿಸುವ ಸಾಧ್ಯತೆಯೂ ಕಾಣುತ್ತಿಲ್ಲ. ಅಂತಹ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳು ಕ್ರಿಕೆಟ್ ಮೂಲಕ ಸಂಬಂಧವನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಏಕೆ ಮಾಡಬಾರದು?

ಕ್ರೀಡೆ ಶಾಂತಿಯ ರಾಯಭಾರಿ: ಕ್ರೀಡೆ ಯಾವಾಗಲೂ ಜಾಗತಿಕ ಶಾಂತಿ, ಸಹಬಾಳ್ವೆಯನ್ನು ಬಯಸುತ್ತದೆ. ಅದು ಸೌಹಾರ್ದ ಸಂಬಂಧಗಳ ಸಂವರ್ಧನೆಯ ರಾಯಭಾರಿ. ಒಲಿಂಪಿಕ್ ಕ್ರೀಡಾಕೂಟದ ಉದ್ಘಾಟನೆಯ ಸಂದರ್ಭದಲ್ಲಿ ಪಾರಿವಾಳಗಳನ್ನು ಮುಗಿಲಿಗೆ ತೂರಿ ಹಾರಿಸಲಾಗುತ್ತದೆ. ಶಾಂತಿ ಸಾರುವುದು ಅದರ ಉದ್ದೇಶ.

ನೆರೆ ರಾಷ್ಟ್ರದ ರಾಜಕೀಯ ನಿಲುವಿನಲ್ಲಿ ಭಯೋತ್ಪಾದನೆ ಮುಂಚೂಣಿಯಲ್ಲಿ ನಿಂತಿದೆ. ಅದುವೇ ಅದರ ಪ್ರಮುಖ ಅಸ್ತ್ರ. ಇದು ಒಡಲಲ್ಲಿನ ಕೆಂಡ. ಅದೀಗ ಕಾಳ್ಗಿಚ್ಚಾಗಿ ಹೊಗೆ ಉಸಿರುಗಟ್ಟಿಸುತ್ತಿರುವಾಗ ಶಾಂತಿಯ ಪಾರಿವಾಳಗಳನ್ನು ಆ ಕಿಚ್ಚಿನ ಮೇಲೆ ಹಾರಿಸಬೇಕೇ? ಪಾರಿವಾಳದ ರೆಕ್ಕೆ ಪುಕ್ಕಗಳು ಸುಟ್ಟು ಕರಕಲಾಗದೇ ಎಂಬುದು ಭಾರತದ ಪ್ರಶ್ನೆ. ಈ ಪ್ರಶ್ನೆಯಲ್ಲಿ ಯಾವ ತಪ್ಪೂ ಇಲ್ಲ. ಹಾಗಿದ್ದರೂ ಕ್ರೀಡೆ ಮತ್ತು ರಾಜಕಾರಣವನ್ನು ಒಂದಾಗಿ ನೋಡುವ ಅಗತ್ಯವೇನೂ ಇಲ್ಲ. ಕ್ರೀಡೆಗೆ ಅವಕಾಶ ನೀಡಿದರೂ, ಉಗ್ರವಾದದ ಬಗ್ಗೆ ಪಾಕಿಸ್ತಾನದ ನಿಲುವಿನ ವಿರುದ್ಧ, ಗಡಿಗಳಲ್ಲಿ ಉಗ್ರರ ಉಪಟಳದ ವಿರುದ್ಧ ಕ್ರಮ ಕೈಗೊಳ್ಳುವ ಸ್ವಾತಂತ್ರ್ಯ ಭಾರತಕ್ಕೆ ಯಾವಾಗಲೂ ಇದ್ದೇ ಇದೆ.

ದುಬೈ ಸೇರಿದಂತೆ ತಟಸ್ಥ ಸ್ಥಳಗಳಲ್ಲಿ ನಡೆಯುವ ಪಂದ್ಯಗಳಲ್ಲಿ ಭಾರತ ತಂಡ ಪಾಕಿಸ್ತಾನದೊಂದಿಗ ಆಡುತ್ತಲೇ ಬಂದಿದೆ. ತಟಸ್ಥ ಸ್ಥಳದಲ್ಲಿ ಆಡಬಹುದಾದರೆ ಪಾಕಿಸ್ತಾನದಲ್ಲಿ ಯಾಕೆ ಸಾಧ್ಯವಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಪಾಕಿಸ್ತಾನದಲ್ಲಿ ಭಾರತದ ಆಟಗಾರರ ಸುರಕ್ಷತೆಯ ಬಗ್ಗೆ ಬಿಸಿಸಿಐ ಆತಂಕ ವ್ಯಕ್ತಪಡಿಸಿರುವುದರಲ್ಲಿ ತಪ್ಪಿಲ್ಲ. ಆದರೆ, ಇಡೀ ಟೂರ್ನಿಯು ಐಸಿಸಿಯ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ಆಟಗಾರರ ಭದ್ರತೆಯ ಜವಾಬ್ದಾರಿ ಪಾಕಿಸ್ತಾನಕ್ಕೆ ಇದ್ದಷ್ಟೇ ಐಸಿಸಿಗೂ ಇದೆ ಎಂಬುದನ್ನು ಯಾರೂ ಮರೆಯಬಾರದು. ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್‌ನಂತಹ ರಾಷ್ಟ್ರಗಳು ತಮ್ಮ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುತ್ತಿವೆ. ಅಲ್ಲಿ ಅವರು ನಿರ್ಭೀತಿಯಿಂದ ಆಡುತ್ತಿದ್ದಾರೆ. ಹೀಗಿರುವಾಗ, ನಮ್ಮ ತಂಡವೂ ಅಲ್ಲಿಗೆ ಹೋದರೆ, ಪಾಕ್ ತಂಡವೂ ನಮ್ಮಲ್ಲಿಗೆ ಬಂದು ಆಡಿದರೆ ಎಷ್ಟು ಚೆಂದವಲ್ಲವೇ?

ಮೊದಲೇ ಹೇಳಿದಂತೆ, ಕ್ರೀಡೆ ಶಾಂತಿಯ ದೂತ. ಇಲ್ಲಿ ಸಾವಿಲ್ಲ. ಸೋಲು ಮತ್ತು ಗೆಲುವಷ್ಟೇ ಇರುತ್ತದೆ. ಆಟದ ಮೂಲಕ ರಕ್ತಪಾತ ರಹಿತ ಶಾಂತಿಯನ್ನು ಸಾಧಿಸಬಹುದು. ಹೀಗಿರುವಾಗ ಭಾರತ ಮತ್ತು ಪಾಕಿಸ್ತಾನ ದೊಡ್ಡ ಮನಸ್ಸು ಮಾಡಿ ಪರಸ್ಪರ ಕ್ರೀಡಾ ಚಟುವಟಿಕೆಗಳ ಮೂಲಕ ಮುರಿದು ಬಿದ್ದ ಸಂಬಂಧವನ್ನು ಮತ್ತೆ ಹಳಿಗೆ ತರಲು ಪ್ರಯತ್ನ ಪಡಬಹುದು. ಇದಕ್ಕೆ ಚಾಂಪಿಯನ್ಸ್ ಟ್ರೋಫಿಯನ್ನು ಚಿಮ್ಮು ಹಲಗೆಯನ್ನಾಗಿ ಬಳಸಬಹುದು.

ಲೇಖಕ: ನಿವೃತ್ತ ಇತಿಹಾಸ ಉಪನ್ಯಾಸಕ



ಪದಬಂಧ 5870


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸಂಗಾತಿ ಹೇಳಿದ ವಿಷಯವಿಲ್ಲಿ ತಿರುವುಮುರುವಾಗಿದೆ (3)
3.ಅಕ್ಷಿ ಎನ್ನುತ್ತಾ ಕಣ್ಣಿನಿಂದ ನೋಡಿದವನು! (2)
4.ಕರುವಿನಲ್ಲಿರುವ ಬೆನ್ನೆಲುಬು (3)
6.ಚಾರ ಮಾಡಿರುವ ವಿರುದ್ಧ ಆಚರಣೆ (4)
8.ರೇಷ್ಮೆ ನಾಡು ಎಂದು ಪ್ರಸಿದ್ಧವಾದ ಜಿಲ್ಲೆ (5)
10.ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ (4)
12.ಪಾಂಡುರಾಜನ ತಮ್ಮ (3)
13.ತಣ್ಣನೆಯ ಗಾಳಿ ಬೀಸಿದಾಗ ಮೈನಡುಕ (2)
14.ನೆರೆಮನೆಯವನು ನಿರ್ಮಿಸಿದ ತಡಿಕೆ (3)

ಮೇಲಿಂದ ಕೆಳಕ್ಕೆ

2.ಅತಿಯಾದ ತಾಪ (3)
3.ಆಧಾರ ಸಹಿತವಾದುದು (3)
4.ಬಣ್ಣದ ತೊಟ್ಟಿಲಿಗೆ ಪ್ರಸಿದ್ಧಿ ಪಡೆದಿರುವ ಧಾರವಾಡ ಜಿಲ್ಲೆಯ ತಾಲ್ಲೂಕು (5)
5.ಎಡದೊರೆ ನಾಡೆಂದು ಪ್ರಸಿದ್ಧವಾದ ಜಿಲ್ಲೆ ಉಲ್ಟಾ ಕಾಣುತ್ತಿದೆ (4)
6.ಬಾಗಲಕೋಟೆಯ ಈ ಪಟ್ಟಣವು ಕರದಂಟು ಖಾದ್ಯಕ್ಕೆ ಹೆಸರುವಾಸಿ (5)
7.ಗುಮ್ಮಟ ನಗರಿ ಎಂದು ಪ್ರಸಿದ್ಧವಾಗಿರುವ ಜಿಲ್ಲೆ (5)
9.ಕವಿ ಇರುವ ಈ ಊರು ಬಾಗಲಕೋಟೆಯ ಜಿಲ್ಲೆಯಲ್ಲಿದೆ! (4)
10.ದಾಳಿ ಮಾಡಿದಾಗ ಉದಾರಿ ಕಾಣಿಸಿದನಲ್ಲಾ! (3)
11.ಒಳ್ಳೆಯ ಅಥವಾ ಕೆಟ್ಟ ನಾತ (3)



5869ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಆತ್ಮಪ್ರಶಂಸೆ 6.ಕರುಳು
7.ಕೆಡುಕ 8.ಹವನ
10.ರಿಕ್ತಹಸ್ತ 11.ವೀರಗಾಥೆ
12.ಪರವಶ 13.ರಕ್ಷಾಪತ್ರ
14.ಲವಣ 16.ಕಲಭ
18.ದಾಸ್ತಾನು 20.ವಸತಿಗೃಹ

ಮೇಲಿಂದ ಕೆಳಕ್ಕೆ:
1.ಬಿಂಕ 2.ಆಳು
3.ಪ್ರಭಾವ 4.ಸೆಕೆ 5.ಶಕ
8.ಹಸ್ತಕೌಶಲ 9.ನವೀಕರಣ
15.ವರ್ಧಂತಿ 16.ಕಣ
17.ಭವ 18.ದಾಹ
19.ನುಚ್ಚು

ಸುಡೊಕು 6255

3	4				8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6254 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಷ್ಟಮಿ ಗಂ. 19-58 ನಕ್ಷತ್ರ: ಮಘ ಗಂ. 19-27 ಯೋಗ: ಐಂದ್ರ ಗಂ. 11-42 ಕರಣ: ಬಾಲವ ಗಂ. 06-58, ವೃಶ್ಚಿಕ ಮಾಸದ 07 ನೇ ದಿನ, ಮಳೆನಕ್ಷತ್ರ: ಅನುರಾಧ 2.
ರಾಹುಕಾಲ : ಬೆಳಗ್ಗೆ 09-00 – 10-30
ಸೂರ್ಯೋದಯ : 06-37 **ಸೂರ್ಯಾಸ್ತ :** 05-57
ಮುಸ್ಲಿಂ ದಿನಾಂಕ : 20 ಜುಮಾದುಲ್ಲಾವಲ್
ದಿನ ವಿಶೇಷ : ಕಲಾಷ್ಟಮಿ, ಅದೃಷ್ಟ ಸಂಖ್ಯೆ : 5, 11

ಮೇಷ: ಊರಿನ ಪ್ರಮುಖರಿಂದ ಅಪೇಕ್ಷೆ ಇಲ್ಲದಿದ್ದರೂ ಬೇಕಾದ ಕೆಲಸಗಳು ನಡೆಯಬಹುದು. ಒಟ್ಟಿನಲ್ಲಿ ಯಾವುದೇ ಬದಲಾವಣೆ ಇದ್ದರೂ ಸೂಕ್ತವಾದ ಕಾಲ. ಹಣದ ವಿಚಾರದಲ್ಲಿ ಮಿತ ವ್ಯಯಿಗಳಾಗುವಿರಿ.

ವೃಷಭ: ತೈಲ ವ್ಯಾಪಾರ ವ್ಯವಹಾರಗಳಲ್ಲಿ ಪೈಪೋಟಿಗಳು ಹೆಚ್ಚಿದ್ದರೂ ಯೋಚನೆಗೆ ಸರಿಯಾದ ತೃಪ್ತಿಕರ ಆದಾಯವಿರುವುದು. ಉದ್ದೇಶದಲ್ಲಿಯೂ ಯಾರಿಗೂ ಸಾಲದ ರೂಪದಲ್ಲಿ ಹಣ ನೀಡಬೇಡಿ.

ಮಿಥುನ: ಲೆಕ್ಕಪತ್ರಗಳಿಲ್ಲದೆ ಕೇವಲ ನಂಬಿಕೆಯಲ್ಲಿ ವ್ಯವಹಾರ ಮಾಡುವುದು ಸರಿಯಲ್ಲ. ಸತ್ಕಾರ್ಯದ ಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ. ಗೆಳೆಯರ ಅಪರೂಪದ ಭೇಟಿ ಜತೆ ಮಾತುಕತೆ ನಡೆಯುವುದು.

ಕರ್ಕಾಟಕ: ಕೈಗೊಂಡ ಸಂಸ್ಥೆಯ ಅಥವಾ ವೈಯಕ್ತಿಕವಾದ ಅಭಿವೃದ್ಧಿಯ ಕಾರ್ಯಗಳೆಲ್ಲಾ ಉತ್ತಮ ರೀತಿಯಲ್ಲಿ ನಡೆದು ಹೋಗುವುದು. ಸಾಂಸಾರಿಕ ಸುಖದಲ್ಲಿ ಅಭಿವೃದ್ಧಿಯನ್ನು ಇಂದು ನೀವು ಅಪೇಕ್ಷಿಸಬಹುದು.

ಸಿಂಹ: ಆಪ್ತರ ಕಷ್ಟಗಳ ಕಡೆಗೆ ಗಮನ ಕೊಡಿ. ಅದರಿಂದ ಸಂಬಂಧಗಳೂ ವೃದ್ಧಿಯಾಗುತ್ತವೆ. ಜತೆಯಲ್ಲಿ ಪುಣ್ಯ ಸಂಪಾದನೆಯೂ ಆಗುವುದು. ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ ಶುಭವಾಗುವುದು.

ಕನ್ಯಾ: ಕಾರ್ಯರಂಗದಲ್ಲಿ ಉತ್ಸಾಹದ ಚಟುವಟಿಕೆಯಿಂದ ಸಂತೋಷ ಇರುವುದು. ಮನೆಯ ವಿಷಯಗಳತ್ತ ಹಾಗೂ ದೈನಂದಿನ ಆಗುಹೋಗುವ ಬಗ್ಗೆ ಗಮನಹರಿಸಿ. ಮಕ್ಕಳಿಗೆ ಜೀವನದ ಪಾಠವನ್ನು ಹೇಳುವಿರಿ.

ತುಲಾ: ಸದಾಕಾಲ ಕಾರ್ಯಪ್ರವೃತ್ತರಾಗಿ ದುಡಿಯುವ ಉತ್ತಮ ಫಲಗಳು ಅನುಭವಕ್ಕೆ ಬರಲಿವೆ. ಅನ್ಯರಿಗೆ ಸಹಾಯ ಮಾಡುವಾಗ ಪ್ರತಿಫಲವನ್ನು ಅಪೇಕ್ಷಿಸಬೇಡಿ. ಹೊಸವಾಹನ ಅಥವಾ ಮನೆ ಖರೀದಿಯ ಯೋಗವಿದೆ.

ವೃಶ್ಚಿಕ: ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಕೆಲಸಗಳನ್ನು ಅಂತಿಮ ಹಂತಕ್ಕೆ ತಲುಪಿಸಲು ಸಾಧ್ಯವಾಗುತ್ತದೆ. ಪಾಲುದಾರಿಕೆಯಲ್ಲಿ ಮೋಸ ಹೋಗುವ ಲಕ್ಷಣಗಳಿರುವುದರಿಂದ ಹೆಚ್ಚಿನ ಗಮನವಿರಲಿ.

ಧನು: ವಂಚನೆಯ ಕಡೆಗೆ ಕರೆದೊಯ್ಯುವ ಪ್ರಯತ್ನ ಸ್ನೇಹಿತರ ಬಳಗದಲ್ಲಿ ನಡೆಯಲಿದೆ. ಉದ್ಯೋಗ ವ್ಯವಹಾರದಲ್ಲಿನ ತಲ್ಲೀನತೆ ಧನಾರ್ಜನೆಗೆ ಕಾರಣವಾಗುವುದು. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ.

ಮಕರ: ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವು ಪಡೆಯುವಲ್ಲಿ ಯಶಸ್ವಿಯಾಗುವಿರಿ. ಅತಿ ಸರಳತೆಯನ್ನು ಸಹಚರರು ದುರುಪಯೋಗ ಪಡಿಸಿಕೊಳ್ಳುವರು. ಸ್ವತಂತ್ರವಾಗಿ ಮಾಡುವ ವ್ಯವಹಾರದಲ್ಲಿ ಯಶಸ್ಸು ಲಭಿಸುವುದು.

ಕುಂಭ: ಪೀಠೋಪಕರಣಗಳ ವ್ಯಾಪಾರಸ್ಥರು ಪ್ರದರ್ಶನ ಮಾರಾಟದಂಥ ಯೋಜನೆಯಿಂದ ಅಥವಾ ಜಾಹೀರಾತುಗಳ ಮೂಲಕ ಬೆಳಕಿಗೆ ಬರುವ ಪ್ರಯತ್ನ ಮಾಡಬಹುದು. ಧಾರ್ಮಿಕ ಶ್ರದ್ಧೆ ಬೆಳೆಸಿಕೊಳ್ಳಿ.

ಮೀನ: ವ್ಯವಹಾರದಲ್ಲಿ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ತಂದುಕೊಳ್ಳುವುದು ಅನಿವಾರ್ಯ. ಮಕ್ಕಳ ಸಂಗೀತ ಹಾಗೂ ಚಿತ್ರಕಲೆಯ ಅಭಿರುಚಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವುದು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

ANJANAPURA 10TH Block 30x40 S/F Very Good Location, Immediate Construction 2km From Bannerghatta Road: 9964627255

BDA SITE for Sale, Residential and Commercial Anjanapura BDA Layout Narayananagara BCMC Layout, Judicial Layout, Vakil Garden, Kanakapura Road 30x40, 40x60, 50x80 BDA E AUCTION and corner sites available. 80% Bank Loan, 9916592400

ANJANAPURA SITE for sale 4th Block 30x40 Facing south good location immediate construction near last Busstop. 9845132011, 9663554448

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE for Sale, Residential and Prime Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80, 80% Bank Loan. 9916592400

SITE FOR Sale NF 1561, 6th stage 4th 'H' Block, BSK further extn. Rs. 85 lakhs negotiable. No brokers. 9686622834

MANTRALAYA ENTERPRISES: BUYING And SELLING BDA/`A` Khatha SITES. BANASHANKARI 6th Stage, Anjanapura, Vishweswaraiah Layout. 9945724472.

Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

Jayanagar

BDA SITE for Sale, Residential and Prime Commercial Jayanagara, JP Nagara, BTM Layout, HSR Layout, Koramangala 30x40, 40x60, 50x80, 80% Bank Loan. 9916592400

J P Nagar

SALE 30X40, 40X60 BDA Prime Corner Property J.P.Nagar 2nd Phase Near Innisfree House School Only Genuine Buyers Call:9986490019

SALE BDA SITE 30x40 SOUTH FACING GOOD RESIDENTIAL Location J.P.NAGAR Clear Title Call Satish: 9845341034

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kanakapura Road

SITE FOR SALE Narayana Nagar 1st Block, 40x60 E/F, BDA, 40 Feet Road. Call: 6363726250/ 9880606768.

Kempegowda Layout

NADAPRABHU KEMPEGOWDA Layout 7th block F Sector 50x80 W/F, 8th Block B sector 40x60 W/F and Vishveshwaraiah Layout-3rd-block 40x60 E/F. Contact:9686469799

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

30X45 EAST Facing Site NGEF Layout, Nagarabhavi. BDA APPROVED Prime Residential Location. Contact: 7022662105

Nelamangala

NELAMANGALA NEAR NH-4, RASHI LAYOUT 30x50 BMRDA Site Sale West Facing 4500/- Per Sqft: 9845488488

Rajarajeshwari Nagar

RAJARAJESWARI NAGAR, IDEAL Homes Near Metro Station East: 40 X 52 and South: 85 X 55 for sale. 9900522163

30X42 SITE WF Remco (BHEL) Layout, Kenchenahalli, Rajarajeshwari Nagar, Near Metro, E-Katha, 14500/- Owner 9916799511

Vishweshwariah Layout

"VISVESHWARAIAH LAYOUT 2nd Block attached Kanakashree Layout 30x50 West`facing BDA Katha 40`feet Road, Opp.Park. 9164089633/ 9663226688"

AVAILABLE 40X60 BDA Site Vishveshwaraiah Layout 60ft Road, 3rd Block Ullal Main Road Amma Asharam: 9844603127

SITE SALE Vishweshwaraiah Layout 2nd Block, 40X60 South Facing, Near 80ft Road Good Location: 8553908699

"VISHVESHWARAIAH LAYOUT Wanted BDA Sites 20x30,30x40, 40x60, 50x80 for Immediate Settlement, "Anugraha Construction"- 9886294610"

House

Jakkur

MCECHS LAYOUT beautiful new luxurious house on 30x40, east'facing G+3 4BHK with lift, semi-furnished, Ready to move for sale 3.35cr. Call 9535479091

J P Nagar

HOUSE SALE: J.P.Nagar, 6th Phase, BDA site, E/F, 4 bedroom, Separate car shed. Contact: 9880402575.

Whitefield

WHITE MEADOWS 'A' Type Villa for Sale 11.25Cr for Rent 3.25 Lac 'SETTLER' 9880225333/ 9845035333

Vidyaranyapura

RESIDENTIAL HOUSE for SALE, at Vidyaranyapura, North East Corner, 40 Square Building, Duplex with Lift, BDA, Layout BBMP Katha. Contact: 9731474000

T C Palya

"TC.PALYA GATED Community BBMP B-Katha New Independent House Ground and First Floor 1.4`Crore. Owner. 9449008336"

Flat

Basaveshwaranagar

BASAWESHWARA NAGAR Shankar Mutt East`Facing New`Flat for`Sale. 3BHK Attached Bathroom Granite Flooring Modular Kitchen, POP Ceiling, Lift CarParking. Call: 7975072170.

J P Nagar

"2BHK FURNISHED Apartment for sale ₹72`Lakhs, First Phase JP.Nagar, Genuine Buyers Contact. Owner- 9449008336"

Mysore Road

AVILABLE LEASE OR SALE 3BHK APARTMENT FLAT TOP FLOOR WITH CARPARK MYSORE ROAD 9738223432/ 8105273951

Commerical

Vishweshwariah Layout

VISHWESHWARAIAH LAYOUT 6th Block,50x80 Commercial 80feet Road Near Bharat Petrol Bunk 16000/- owner meeting: 9845600007

Peenya

FOR SALE



@ PEENYA
PRIME PROPERTY
with RENTAL INCOME
Assured for 10 years
Only Investors / Buyers
Call: 9880956229

Kumarapark

FOR-SALE FAIR Field Layout Behind Chalukya-Hotel 3650sft Ground Floor Flat Suitable for- Office, Residence, Clinics Heart of Bangalore 7829203369

Nagarabhavi

COMMERCIAL 50X80 East Facing Site for Sale, Nagarabhavi BDA Complex 100 Feet Road. Call: 8105688602.

HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

Commercial Land

Whitefield

SALE 22,000 sqft. Commercial Land Suitable for Apartments, Hotel, Hospital, opp ITPL Whitefield. CALL: 7411255535

LAND FOR SALE

Total 2 Acres 22 Guntas Industrial Converted Land.
Location
Janavi Industrial Layout, Kunigal Highway Road, Hanchipura.
4 KMS from Nelamangala Town Before Kunigal Road Toll
Contact No:
97428 84788, 94480 89863

IMMEDIATE SALE

Wilson Graden, Bengaluru
5th Cross Road, (Near Police Station)
Site No. 162
East West: 80 ft. North South: 40 ft.
Total - 3200 sqft,
Built up area - Main House 28 sqft.
Out House 15 sqft,
Vacant House, City Center,
Both Commercial and Residence
Contact:
8904343166, 9886274515

Lotus Enclave

BMRDA & NPA APPROVED
Residential Sites
Near ನಿವೇಶನಗಳು ಮಾರಾಟಕ್ಕಿವೆ
Nelamangala
100% Released from BMRDA, Bank Loan Available,100% Developed Layout
Ready For Registration & Construction
Layout Video Scan Here
Call: 8956 412 000

LAND FOR SALE

Suitable for Residential / Godown / School
at Sir M Vishweshwaraiah Layout - Ullalu
Bengaluru-560110
18,513 Sqft. South Facing
at Sir M Visweshwaraiah Layout - Ullalu
Yeshwantapura Hobli,
Bengaluru North Taluk,
with clear title deeds for sale.
Interested parties
for more details please contact :
99019 85699

Agricultural Land

Doddabalapur

AGRICULTURE LAND for sale @ Doddaballapura 2 & 4 acres, General Property, Tar road access, Clear Title, Near Upcoming KWIN City . 9886835762

Ramanagar

"CHANNAPATNA 17`GUNTAS FULLY-FENCED MANGO, COCONUT TREES, TAR-ROAD SUITABLE FOR FARM HOUSE, 54 Lakhs. Owner- 9449008336"

Ramanagara

9 ACRES Agriculture Land for SALE NEAR CHANNAPATNA at MYSORE ROAD in Good Location. 9916551395

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

REAL ESTATE BUYING

Flat

Mysore Road

WANTED TO Buy 2/3 BHK Flat at SATTVA DIVINITY next to Nayandahalli Metro, Mysore Road. Contact Buyer Aradhya 9620219486.

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Yelahanka

"WANTED 30X40, 30x50 BIAPA Approved Site near Rajankunte, IVC Road, Surendarapur, Chapardkal Road Surrounding. 9845178335"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

MORE Classifieds Ads on Subsequent Pages

RENTAL PROPERTIES

Accommodation Available

Commercial

LONG TERM OFFICE Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

OFFICE SPACE for rent 1950sqft 52 workstations, 2'MD conference and 400sft 16 workstations, power backup carpark Jayanagar opposite Sagar Hospital 9845522122/ 9591908228

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವನ್ಯಜೀವಿಧಾಮದ 548 ಎಕರೆಯಲ್ಲಿ ಪವನ ವಿದ್ಯುತ್ ಯೋಜನೆ– ಕೇಂದ್ರ ಅರಣ್ಯ ಸಚಿವಾಲಯ ಅಸ್ತು

ಅಕ್ರಮಕ್ಕೆ ‘ದಂಡ’– ನವೀಕರಣದ ಭಕ್ಷೀಸು

• ಮಂಜುನಾಥ ಹೆಬ್ಬಾರ್

ನವದೆಹಲಿ: ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಹಾಗೂ ಮಾರಿಕಣಿವೆ ವನ್ಯಜೀವಿಧಾಮಗಳಲ್ಲಿ ಎನಾರ್‌ಕಾನ್ (ಇಂಡಿಯಾ) ಸಂಸ್ಥೆಯು 201 ಎಕರೆ (80 ಹೆಕ್ಟೇರ್) ಪ್ರದೇಶದಲ್ಲಿ ಅಕ್ರಮವಾಗಿ ಪವನ ವಿದ್ಯುತ್ ಉತ್ಪಾದಿಸಿರುವುದು ಖಚಿತವಾಗಿದೆ. ನಿಯಮ ಉಲ್ಲಂಘಿಸಿರುವುದಕ್ಕೆ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಸೂಕ್ತ ದಂಡ ವಿಧಿಸಬೇಕು ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಪ್ರಾದೇಶಿಕ ಕಚೇರಿ ಶಿಫಾರಸು ಮಾಡಿದೆ.

ವನ್ಯಜೀವಿಧಾಮದ 548 ಎಕರೆಯಲ್ಲಿ (221 ಹೆಕ್ಟೇರ್) ಪವನ ವಿದ್ಯುತ್ ಉತ್ಪಾದನೆಯ ಗುತ್ತಿಗೆಯನ್ನು ಮತ್ತೆ 15 ವರ್ಷ ವಿಸ್ತರಿಸ ಬಹುದು ಎಂದೂ ಶಿಫಾರಸು ಮಾಡಿದೆ. ‘ಕಂಪನಿಯು ಈ ಪ್ರದೇಶದಲ್ಲಿ 100ಕ್ಕೂ ಅಧಿಕ ಪವನ ವಿದ್ಯುತ್ ಉತ್ಪಾದನೆಯ ಪರಿವರ್ತಕಗಳನ್ನು ಅಳವಡಿಸಿದೆ. ಹೊಸದಾಗಿ ಯಾವುದೇ ಮರಗಳನ್ನು ಕಡಿಯದೆ ಅಥವಾ ಹೊಸದಾಗಿ ಅರಣ್ಯ ನಾಶ ಮಾಡದೆ ಪವನ ವಿದ್ಯುತ್ ಉತ್ಪಾದಿಸುವ ಈ ಯೋಜನೆಯು ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಅನುಕೂಲ ಮಾಡಿ ಕೊಡಲಿದೆ ಎಂದು ಸಮಜಾಯಿಷಿ ನೀಡಿದೆ. ಜತೆಗೆ, ನಿಯಮಗಳನ್ನು ಉಲ್ಲಂಘಿಸಿ ಪವನ ವಿದ್ಯುತ್ ಉತ್ಪಾದಿಸಲು ಕಂಪೆನಿಗೆ ಅನುವು ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ.

ಕ್ರಮಕ್ಕೆ ಶಿಫಾರಸು

- ಜೋಗಿಮಟ್ಟಿ ವನ್ಯಜೀವಿ-ಧಾಮದಲ್ಲಿ ಪವನ ವಿದ್ಯುತ್ ಯೋಜನೆ
- ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದ್ದ ಕೇಂದ್ರ ಪರಿಸರ ಸಚಿವಾಲಯ
- ಪ್ರಾದೇಶಿಕ ಕಚೇರಿಯಿಂದ ಸಚಿವಾಲಯಕ್ಕೆ ವರದಿ ಸಲ್ಲಿಕೆ
- ಅಕ್ರಮಕ್ಕೆ ಅನುವು ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು



ವನ್ಯಜೀವಿಧಾಮದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಪವನ ವಿದ್ಯುತ್ ಉತ್ಪಾದಿಸಿದ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅರಣ್ಯ ಸಚಿವಾಲಯವು ಪ್ರಾದೇಶಿಕ ಕಚೇರಿಗೆ ತಾಕೀತು ಮಾಡಿತ್ತು. ಪ್ರಾದೇಶಿಕ ಕಚೇರಿ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಸಚಿವಾಲ ಯಕ್ಕೆ ಇದೇ 18ರಂದು ವರದಿ ಸಲ್ಲಿಸಿದ್ದಾರೆ.

ಪವನ ವಿದ್ಯುತ್ ಉತ್ಪಾದನೆಯ ಗುತ್ತಿಗೆಯನ್ನು ಮತ್ತೆ 15 ವರ್ಷಗಳಿಗೆ ನವೀಕರಿಸಬೇಕು ಎಂದು ಕರ್ನಾಟಕ ರಾಜ್ಯ ನವೀಕರಿಸಬಹುದಾದ ಇಂಧನ ನಿಗಮವು (ಕೆಆರ್‌ಇಡಿಎಲ್) ರಾಜ್ಯ ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿತ್ತು. ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆಗೆ ಗುತ್ತಿಗೆ ಪಡೆದ ಕಂಪೆನಿಗೆ (ವಿಂಡ್ ವರ್ಲ್ಡ್ ಇಂಡಿಯಾ ಲಿಮಿಟೆಡ್) ದಂಡ ವಿಧಿಸುವ ಷರತ್ತುಗಳೊಂದಿಗೆ ರಾಜ್ಯ ಸರ್ಕಾರವು ಪ್ರಸ್ತಾವನೆಗೆ ಅನುಮೋದನೆ ನೀಡಿತ್ತು. ಬಳಿಕ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಸೆಪ್ಟೆಂಬರ್ 23ರಂದು ನಡೆದ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾವನೆ ಕುರಿತು ಚರ್ಚಿಸಲಾಗಿತ್ತು. ’ಸಚಿವಾಲಯದ ಪ್ರಾದೇಶಿಕ ಕಚೇರಿಯು ಸ್ಥಳ ಪರಿಶೀಲನೆಯ ವರದಿ ಸಲ್ಲಿಸಬೇಕು. ನಿಯಮ ಉಲ್ಲಂಘನೆಯ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು’ ಎಂದು ಸಮಿತಿ ನಿರ್ದೇಶನ ನೀಡಿತ್ತು.

‘ಪವನ ವಿದ್ಯುತ್ ಉತ್ಪಾದಿಸಲು ಕಂಪನಿಗೆ 221 ಹೆಕ್ಟೇರ್ ಪ್ರದೇಶವನ್ನು ಗುತ್ತಿಗೆಗೆ ನೀಡಲಾಗಿತ್ತು. ಆದರೆ, ಕಂಪನಿಯು ಮಂಜೂರಾದ ಜಾಗ ಬಿಟ್ಟು ಅದರ ಆಚೆಗಿನ 45.27 ಹೆಕ್ಟೇರ್‌ನಲ್ಲಿ (112 ಎಕರೆ) ನಿರಂತರವಾಗಿ ವಿದ್ಯುತ್ ಉತ್ಪಾದಿಸಿದೆ. ಅಲ್ಲದೇ, 35 ಹೆಕ್ಟೇರ್‌ನಲ್ಲಿ ಭೂಬಳಕೆಯ ಬದಲಾವಣೆ ಮಾಡಲಾಗಿದೆ. ಇದು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸ್ಪಷ್ಟ ಉಲ್ಲಂಘನೆ’ ಎಂದು ಪ್ರಾದೇಶಿಕ ಕಚೇರಿ ವರದಿಯಲ್ಲಿ ಉಲ್ಲೇಖಿಸಿದೆ. ಈಗ ಇಡೀ ಯೋಜನೆಯು ವನ್ಯಜೀವಿ ಧಾಮದೊಳಗೆ ಬರುತ್ತಿದೆ. ಹೀಗಾಗಿ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆ ಪಡೆದು ಕಾಡುಪ್ರಾಣಿಗಳ ಸಂರಕ್ಷಣಾ ಕಾರ್ಯ ನಡೆಸಬೇಕು ಎಂದು ಸೂಚಿಸಿದೆ.

ವರದಿ ಸಲ್ಲಿಕೆ ಅವಧಿ ವಿಸ್ತರಣೆ

ಕೆಆರ್‌ಎಸ್ ಬಳಿ ಗಣಿಗಾರಿಕೆ ಉದ್ದೇಶಕ್ಕೆ ಸ್ಫೋಟ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಜಲಾಶಯದ (ಕೆಆರ್‌ಎಸ್) ಸುತ್ತಮುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ಉದ್ದೇಶಕ್ಕಾಗಿ ಸ್ಫೋಟ ಚಟುವಟಿಕೆ ನಡೆಸುತ್ತಿರುವ ಘಟಕಗಳನ್ನು ಪರಿಶೀಲಿಸಿ ಸಮಗ್ರ ವರದಿ ಸಲ್ಲಿಸಲು ‘ಜಲಾಶಯ ಸುರಕ್ಷತಾ ಸಮಿತಿ’ಗೆ ನೀಡಲಾಗಿದ್ದ ಅವಧಿಯನ್ನು ಹೈಕೋರ್ಟ್ ಪುನಃ ಆರು ತಿಂಗಳಿಗೆ ವಿಸ್ತರಿಸಿದೆ.

ಗಣಿಗಾರಿಕೆ ಪರವಾನಗಿ ನೀಡುವಾಗ ಜಿಲ್ಲಾಧಿಕಾರಿ ಭೂ ಪರಿವರ್ತನೆಗೆ ವಿಧಿಸಿದ್ದ ಷರತ್ತನ್ನು ಪ್ರಶ್ನಿಸಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಸಿ.ಜಿ. ಕುಮಾರ್ ಸಲ್ಲಿಸಿರುವ ಮೂಲ ಅರ್ಜಿಯ ಜೊತೆ ಸಲ್ಲಿಸಲಾಗಿರುವ ಮಧ್ಯಂತರ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎನ್.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.



‘ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ಮನವಿಯನ್ನು ಪುರಸ್ಕರಿಸಿ ಜಲಾಶಯ ಸುರಕ್ಷತಾ ಸಮಿತಿಗೆ ನೀಡಲಾಗಿರುವ ಅವಧಿಯನ್ನು ಪುನಃ ಆರು ತಿಂಗಳಿಗೆ ವಿಸ್ತರಿಸಲಾಗಿದೆ. ಅಷ್ಟರಲ್ಲಿ ಪರಿಶೀಲನೆ ಕಾರ್ಯ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು. ಸ್ಫೋಟ ಚಟುವಟಿಕೆ ನಡೆಸದೇ ಇರುವ ಅರ್ಜಿಗಳನ್ನು 30ರೊಳಗೆ ಇತ್ಯರ್ಥ ಮಾಡಬೇಕು’ ಎಂದು ನ್ಯಾಯಪಿಠ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಗಣಿಗಾರಿಕೆ ಪುನರಾರಂಭಕ್ಕೆ ಅನುಮತಿ ಕೋರಿರುವ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಲಾಗುವುದು. ಅರ್ಜಿದಾರರು ಯಾವುದೇ ಸ್ಫೋಟ ಚಟುವಟಿಕೆ ನಡೆಸುವುದಿಲ್ಲ ಎಂಬ ಮುಚ್ಚಳಿಕೆ ನೀಡಬೇಕು. ಇದರ ಅನುಸಾರ ಸಮಿತಿಯು ಗಣಿಗಾರಿಕೆ ಇಲಾಖೆಯ ತಜ್ಞರ ಜೊತೆ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂಬ ಅಡ್ವೊಕೇಟ್ ಜನರಲ್ ಅವರ ವಿವರಣೆ ನ್ಯಾಯಯುತವಾಗಿದೆ’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

‘ಕೆಆರ್‌ಎಸ್ ಜಲಾಯಶಯದ ಸುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಹಾಗೂ ಅದರಾಚೆಗೂ ಕೂಡಾ ಯಾವುದೇ ಕಲ್ಲು ಗಣಿಗಾರಿಕೆ ಹಾಗೂ ಸ್ಫೋಟ ಚಟುವಟಿಕೆಗಳಿಗೆ ಸಂಬಂಧಿಸಿದ ತಕರಾರುಗಳಿಗೆ ಪರಿಹಾರ ಪಡೆಯಲು, ಕರ್ನಾಟಕ ರಾಜ್ಯ ಜಲಾಶಯಗಳ ಸುರಕ್ಷತಾ ಸಮಿತಿಯ ಮುಂದೆಯೇ ಮನವಿ ಸಲ್ಲಿಸಬೇಕು. ಈ ವಿಚಾರದಲ್ಲಿ ಸಮಿತಿಯ ತೀರ್ಮಾನವೇ ಅಂತಿಮ’ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಮೊದಲು ಆದೇಶಿಸಿತ್ತು.

ಡಿಕುನ್ಹ ಕ್ಷಮೆ ಕೇಳಿದ ಸಚಿವ ಜೋಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಹಗರಣದ ಕುರಿತ ವರದಿ ಬಗ್ಗೆ ನೀಡಿದ್ದ ಹೇಳಿಕೆ ವಿವಾದ ಸೃಷ್ಟಿಸಿದ ಕಾರಣ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಅವರಿಗೆ ಪತ್ರ ಬರೆದು ಕ್ಷಮೆ ಕೋರಿದ್ದಾರೆ.

ವಿಧಾನಸಭೆ ಉಪ ಚುನಾವಣೆ ಪ್ರಚಾರ ಭಾಷಣದಲ್ಲಿ ಜೋಶಿ ಅವರು ಡಿಕುನ್ಹ ಅವರನ್ನು ಟೀಕಿಸಿದ್ದರು. ತಮ್ಮ ವಿವಾದಾತ್ಮಕ ಹೇಳಿಕೆಯಿಂದ ಡಿಕುನ್ಹ ಮನಸ್ಸಿಗೆ ನೋವುಂಟು ಮಾಡಿದ್ದರೆ ಅದಕ್ಕಾಗಿ ಪ್ರಾಮಾಣಿಕವಾಗಿ ಕ್ಷಮೆ ಯಾಚಿಸುವೆ ಎಂದು ಪತ್ರದಲ್ಲಿ ಹೇಳಿದ್ದಾರೆ.

‘ನನ್ನ ಸುದೀರ್ಘ ವರ್ಷಗಳ ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಯಾವತ್ತೂ ಪ್ರತ್ಯಕ್ಷ-ಪರೋಕ್ಷವಾಗಿ ನ್ಯಾಯಾಂಗದ ಸದಸ್ಯರ ಘನತೆಗೆ ಚ್ಯುತಿ ಬರುವಂತೆ ನಡೆದುಕೊಂಡಿಲ್ಲ ಮತ್ತು



ಹೇಳಿಕೆಯನ್ನೂ ನೀಡಿಲ್ಲ’ ಎಂದು ಜೋಶಿ ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ತರಾತುರಿಯಲ್ಲಿ ಆಯೋಗದಿಂದ ವರದಿ ತರಿಸಿಕೊಂಡಿದೆ ಎಂದು ಹೇಳಿದ್ದೇನೆಯೇ ಹೊರತು ತಮ್ಮ ಮೇಲೆ ಯಾವುದೇ ವೈಯಕ್ತಿಕ ಹೇಳಿಕೆ ನೀಡಿಲ್ಲ. ತಮಗೆ ಮತ್ತು ಆಯೋಗಕ್ಕೆ ಅಪಕೀರ್ತಿ ತರುವ ಉದ್ದೇಶ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿವಾಹ ಪ್ರಮಾಣಪತ್ರ: ವಕ್ಫ್ ಅಧಿಕಾರಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಾಹಿತ ಮುಸ್ಲಿಂ ದಂಪತಿಗೆ ವಿವಾಹ ಪ್ರಮಾಣ ಪತ್ರ ನೀಡುವ ಅಧಿಕಾರವನ್ನು ರಾಜ್ಯ ವಕ್ಫ್ ಮಂಡಳಿಗೆ ನೀಡಿದ್ದ ರಾಜ್ಯ ಸರ್ಕಾರದ ಆದೇಶವನ್ನು ಅಮಾನತಿನಲ್ಲಿ ಇರಿಸಿ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ.

‘ವಕ್ಫ್ ಮಂಡಳಿಗಳಿಗೆ ಮುಸ್ಲಿಂ ವಿವಾಹಗಳನ್ನು ಕಡ್ಡಾಯ ವಾಗಿ ನೋಂದಾಯಿಸುವ ಯಾವುದೇ ಶಾಸನಾತ್ಮಕ ಅಧಿಕಾರ ಇಲ್ಲ’ ಎಂದು ಆಕ್ಷೇಪಿಸಿ ಎ.ಆಲಂ ಪಾಷ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ಅರ್ಜಿದಾರರ ಆಕ್ಷೇಪವನ್ನು ಪುಷ್ಟೀಕರಿಸುವಂತಹ ಪ್ರಬಲ ಕಾರಣ ಮೇಲ್ನೋಟಕ್ಕೆ ಕಂಡು ಬಂದಿದೆ. ಹಾಗಾಗಿ, ರಾಜ್ಯ ಸರ್ಕಾರ ವಕ್ಫ್ ಮಂಡಳಿ ಮತ್ತು ಅದರ ಅಧಿಕಾರಿಗಳಿಗೆ ಮುಸ್ಲಿಂ ದಂಪತಿಗಳ ವಿವಾಹ ಪ್ರಮಾಣ ಪತ್ರಗಳನ್ನು ವಿತರಿಸಲು ನೀಡಿರುವ ಅನುಮತಿಯನ್ನು 2025ರ ಜನವರಿ 7ರವರೆಗೆ ಅಮಾನತಿನಲ್ಲಿ ಇರಿಸಲಾಗಿದೆ’ ಎಂದು ನ್ಯಾಯಪೀಠ ಆದೇಶಿಸಿದೆ. ಅಂತೆಯೇ, ರಾಜ್ಯ ವಕ್ಫ್ ಮಂಡಳಿಗೆ ನೋಟಿಸ್ ಜಾರಿಗೊಳಿಸಲೂ ಆದೇಶಿಸಿದೆ.

‘ವಕ್ಫ್ ಮಂಡಳಿ ಅಥವಾ ಅದರ ಅಧಿಕಾರಿಗಳು ಸರ್ಕಾರದ ಆದೇಶದ ನೆಪದಲ್ಲಿ ವಿವಾಹ ಪ್ರಮಾಣ ಪತ್ರಗಳನ್ನು ಮುಂದಿನ ಆದೇಶದವರೆಗೆ ವಿತರಣೆ ಮಾಡುವಂತಿಲ್ಲ’ ಎಂದೂ ಆದೇಶದಲ್ಲಿ ವಿವರಿಸಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಎಂ.ಸರಸ್ವತಿ ವಾದ ಮಂಡಿಸಿದರು.

ಕೋರಿಕೆ: ‘ರಾಜ್ಯ ಸರ್ಕಾರದ ಅಲ್ಪಸಂಖ್ಯಾತ, ವಕ್ಫ್ ಮತ್ತು ಹಜ್ ಇಲಾಖೆ 2023ರ ಆಗಸ್ಟ್ 30ರಂದು ಆದೇಶವೊಂದನ್ನು ಹೊರಡಿಸಿದೆ. ಇದರನ್ವಯ ಮುಸ್ಲಿಂ ಸಮುದಾಯದ ವಿವಾಹ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸುವ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಲಾಗಿದೆ. ಇದು ವಕ್ಫ್ ಕಾಯ್ದೆ-1995ರ ನಿಯಮಗಳಿಗೆ ವಿರುದ್ಧವಾಗಿದೆ. ಆದ್ದರಿಂದ, ಸರ್ಕಾರದ ಈ ಆದೇಶವನ್ನು ರದ್ದುಗೊಳಿಸಬೇಕು.

ಈ ಮೊದಲಿದ್ದ ವ್ಯವಸ್ಥೆಯನ್ನೇ ಮುಂದುವರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ವಾಲ್ಮೀಕಿ ನಿಗಮ: ತನಿಖಾ ವರದಿ ಸಲ್ಲಿಕೆಗೆ ಸಿಬಿಐಗೆ ನಿರ್ದೇಶನ



ಬೆಂಗಳೂರು: ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಿಸಿಕೊಂಡಿರುವ ಎಫ್‌ಐಆರ್ ಅನುಸಾರ ಈತನಕ ನಡೆಸಲಾಗಿರುವ ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸಿ’ ಎಂದು ಹೈಕೋರ್ಟ್, ಸಿಬಿಐಗೆ ನಿರ್ದೇಶಿಸಿದೆ.

ಈ ಸಂಬಂಧ ಬಿಜೆಪಿಯ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ವಾದ ಮಂಡಿಸಿ, ‘ಸಿಬಿಐ ತನಿಖೆಯನ್ನು ಹೈಕೋರ್ಟ್ ನಿಗಾದಲ್ಲಿಯೇ ನಡೆಸಬೇಕು. ಪ್ರತಿ ಹದಿನೈದು ದಿನಗಳಿಗೊಮ್ಮೆ ಸಿಬಿಐ ತನಿಖೆಯ ಪ್ರಗತಿ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು ಮತ್ತು ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶಿಸಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, ತನಿಖೆಯ ಪ್ರಗತಿ ವರದಿಯನ್ನು ಸಲ್ಲಿಸುವಂತೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಅತ್ಯಾಚಾರ ಆರೋಪ: ಪ್ರಜ್ವಲ್ ಅರ್ಜಿ ವಜಾ



ಬೆಂಗಳೂರು: ಜನಪ್ರತಿನಿಧಿ ಮಹಿಳೆಯೊಬ್ಬರ ಮೇಲಿನ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯ ಮೇಲಿನ ಕಾಯ್ದಿರಿಸಿದ್ದ ಆದೇಶವನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಶುಕ್ರವಾರ ಪ್ರಕಟಿಸಿದರು. ಅರ್ಜಿದಾರರ ಪರ ವಕೀಲ ಜಿ.ಅರುಣ್, ‘ಅರ್ಜಿ ಹಿಂಪಡೆಯಲಾಗುವುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದರಾದರೂ, ನ್ಯಾಯ ಪೀಠವು ‘ದೂರನ್ನಷ್ಟೇ ಆಧರಿಸಿ, ವಜಾ ಮಾಡಲಾಗಿದೆ’ ಎಂದು ಹೇಳಿತು.


ಪ್ರಕರಣ: ‘ಹಾಸನದಲ್ಲಿ 2021ರಲ್ಲಿ ಬಿಸಿಎಂ ಹಾಸ್ಟೆಲ್‌ನಲ್ಲಿ ಬಾಲಕಿಯರಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸುವ ಕುರಿತು ಚರ್ಚಿಸಲು ನಾನು ಪ್ರಜ್ವಲ್ ಅವರ ಕಚೇರಿಗೆ ತೆರಳಿದ್ದೆ. ಈ ಸಮಯದಲ್ಲಿ ಅವರು ನನಗೆ ಗನ್ ತೋರಿಸಿ, ಬೆದರಿಸಿ ಅತ್ಯಾಚಾರ ಎಸಗಿದ್ದರು. ಈ ಕೃತ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆನಂತರ ಹಲವು ಬಾರಿ ವಿಡಿಯೊ ಕರೆ ಮಾಡಿ ನಗ್ನವಾಗುವಂತೆ ಸೂಚಿಸಿ, ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದರು. ಈ ವಿಚಾರವನ್ನು ಬಹಿರಂಗಪಡಿಸಿದರೆ ಗಂಭೀರ ಕ್ರಮದ ಬೆದರಿಕೆ ಹಾಕಿದ್ದರು’ ಎಂದು ಸಂತ್ರಸ್ತೆ ದೂರು ನೀಡಿದ್ದರು. ಈ ಸಂಬಂಧ ಬೆಂಗಳೂರಿನ ಸಿಐಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟ ಶ್ರೀನಿವಾಸ ಪೂಜಾರಿ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆ ಚುನಾವಣೆ ವೇಳೆ ಮಾಡಲಾದ ಭಾಷಣದಲ್ಲಿ ನೀತಿ ಸಂಹಿತೆ ಉಲ್ಲಂಘಿಸಲಾಗಿದೆ’ ಎಂದು ಆರೋಪದಡಿ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಮತ್ತು ಇತರರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಆರೋಪಿಗಳಾದ ಕೋಟ ಶ್ರೀನಿವಾಸ ಪೂಜಾರಿ, ಕಾಪು ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ,



ಮಾಜಿ ಶಾಸಕ ಲಾಲ್‌ಜಿ ಆರ್.ಮೆಂಡನ್ ಮತ್ತು ತ್ರಿಶಾ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎಸ್. ಗೋಪಾಲಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಚುನಾವಣಾ ಸಂಚಾರ ಜಾಗೃತದಳದ ಅಧಿಕಾರಿಯು ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 188ರ ಅಡಿಯಲ್ಲಿ ದೂರು ದಾಖಲಿಸಿದ್ದಾರೆ. ಈ ದೂರು ದಾಖಲಿಸುವ ಅಧಿಕಾರ ವ್ಯಾಪ್ತಿಯನ್ನು ಅಧಿಕಾರಿ ಹೊಂದಿಲ್ಲ. ದೂರು ದಾಖಲಿಸುವಲ್ಲಿ ಕಾನೂನು ಉಲ್ಲಂಘನೆಯಾಗಿದ್ದು, ಈ ಖಾಸಗಿ ದೂರನ್ನು ರದ್ದುಪಡಿಸಬೇಕು’ ಎಂಬ ವಾದವನ್ನು ಮನ್ನಿಸಿದ ನ್ಯಾಯಪೀಠ ಪ್ರಕರಣ ರದ್ದುಪಡಿಸಿ ಆದೇಶಿಸಿತು.

ಪ್ರಕರಣವೇನು?: ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರು, ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಕಟಪಾಡಿ ಗ್ರಾಮದ ಖಾಸಗಿ ಕಾಲೇಜು ಆವರಣದಲ್ಲಿ 2024ರ ಮಾರ್ಚ್ 30ರಂದು ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

‘ಚುನಾವಣಾ ಅಧಿಕಾರಿಗಳ ಅನುಮತಿ ಪಡೆಯದೇ ಕಾರ್ಯಕ್ರಮ ನಡೆಸಲಾಗಿದೆ. ಭಾಷಣದಲ್ಲಿ; ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ ವಿದ್ಯಾರ್ಥಿ ವೃಂದಕ್ಕೆ ಹಲವು ಉಚಿತ ಯೋಜನೆ ಜಾರಿಗೊಳಿಸಲಾಗುವುದು ಎಂಬ ಭರವಸೆ ನೀಡಿದ್ದಾರೆ. ಈ ಮೂಲಕ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಲಾಗಿದೆ’ ಎಂಬ ಆರೋಪದಡಿ ಕಾಪು ವಿಧಾನಸಭಾ ಕ್ಷೇತ್ರದ ಚುನಾವಣಾ ಸಂಚಾರ ಜಾಗೃತದಳದ ಅಧಿಕಾರಿಯು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ 2024ರ ಏಪ್ರಿಲ್ 4ರಂದು ಖಾಸಗಿ ದೂರು ದಾಖಲಿಸಿದ್ದರು.

ದೂರನ್ನು ಪರಿಗಣಿಸಿದ್ದ ನ್ಯಾಯಾಲಯ, ‘ಪ್ರಕರಣವನ್ನು ದಾಖಲಿಸಿ ತನಿಖೆ ನಡೆಸಬೇಕು’ ಎಂದು ಸ್ಥಳೀಯ ಠಾಣಾ ಪೊಲೀಸರಿಗೆ ನಿರ್ದೇಶಿಸಿತ್ತು. ಅಂತೆಯೇ, ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಇತರ ಮೂವರು ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು.

ವಕ್ಫ್ ನೋಟಿಸ್: ರಾಜ್ಯವ್ಯಾಪಿ ಬಿಜೆಪಿ ಪ್ರತಿಭಟನೆ

ಒಂದನೇ ಪುಟದಿಂದ...

ರಾಯಚೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಟಿಪ್ಪುಸುಲ್ತಾನ್ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿ, ‘ಶಾಂತಿ, ಸಾಮರಸ್ಯದ ನಾಡಾಗಿದ್ದ ಕರ್ನಾಟಕವನ್ನು ಆತಂಕದ ಸ್ಥಿತಿಗೆ ತಳ್ಳುತ್ತಿದೆ. ರೈತರ, ಮಠ–ಮಂದಿರಗಳ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ದಾಖಲೆಗಳಲ್ಲಿ ಸೇರ್ಪಡೆ ಮಾಡಲಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಾವಣಗೆರೆಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಸಚಿವ ಜಮೀರ್ ನೇತೃತ್ವದಲ್ಲಿ ರೈತರ ಮತ್ತು ಮಠಗಳ ಆಸ್ತಿ ಕಬಳಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಆರೋಪಿಸಿದರು.

ಕೊಪ್ಪಳದಲ್ಲಿ ಬಿಜೆಪಿ ಕಾರ್ಯಕರ್ತರು ಮತ್ತು ರೈತರು ಪ್ರತಿಭಟನೆ ನಡೆಸಿದರು. ‘ನಮ್ಮ ರೈತರ ಆಸ್ತಿ ಪಾಕಿಸ್ತಾನದಿಂದ ಬಂದ ಭೂಮಿ ಅಲ್ಲ. ರೈತರ ಹೊಟ್ಟೆ ಉರಿಸುತ್ತಿರುವ ರಾಜ್ಯ ಸರ್ಕಾರ ಉದ್ಧಾರ ಆಗಲ್ಲ‘ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೀದರ್‌ನಲ್ಲಿ ಬಿಜೆಪಿಯ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಯಿತು. ‘ವಕ್ಫ್ ಆದಾಲತ್ ನಡೆಸದಂತೆ ತಕ್ಷಣ ತಡೆ ನೀಡಬೇಕು. ವಕ್ಫ್ ಗೆಜೆಟ್ ಅಧಿಸೂಚನೆ ರದ್ದುಗೊಳಿಸಬೇಕು’ ಎಂದು ಆಗ್ರಹಿಸಲಾಯಿತು.

ಕಲಬುರಗಿಯಲ್ಲಿ ನೇಗಿಲ ಯೋಗಿ ಸ್ವಾಭಿಮಾನಿ ವೇದಿಕೆಯಡಿ ‘ವಕ್ಫ್ ಹಠಾವೋ, ಅನ್ನದಾತ ಬಚಾವೋ’ ಹೆಸರಿನಲ್ಲಿ ಎರಡನೇ ದಿನವೂ ಪ್ರತಿಭಟನೆ ನಡೆಯಿತು. ವಿಜಯಪುರ ಜಿಲ್ಲೆಯ ಸಿಂದಗಿಯ ಭೀಮಾಶಂಕರ ಮಠದ ದತ್ತಪ್ಪಯ್ಯ ಸ್ವಾಮೀಜಿ, ಚಿಂಚೋಳಿ ಶಾಸಕ ಅವಿನಾಶ ಜಾಧವ ಪಾಲ್ಗೊಂಡಿದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿಯ ವತಿಯಿಂದ ನಡೆದ ವಕ್ಫ್ ಅಕ್ರಮದ ವಿರುದ್ಧ ನಮ್ಮ ಭೂಮಿ ನಮ್ಮ ಹಕ್ಕು ಪ್ರತಿಭಟನೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕರು ಹಾಗೂ ಸದಸ್ಯರು ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್

ಮಂಗಳೂರಿನಲ್ಲಿ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಪ್ರತಿ ಹಿಂದೂವಿನ, ಬಡವರ ಭೂಮಿ ರಕ್ಷಣೆಗಾಗಿ ಬಿಜೆಪಿ ಮಹಾ ಅಭಿಯಾನ ನಡೆಸುತ್ತಿದೆ. ಪ್ರತಿ ಮನೆಗೆ ನಮ್ಮ ಕಾರ್ಯಕರ್ತರು ಹೋಗಿ ಆರ್‌ಟಿಸಿ ನೋಡಿ ನಮ್ಮ ಭೂಮಿ ನಮಗೇ ಉಳಿದಿದೆಯಾ ಎಂದು ಪರೀಕ್ಷಿಸಲಿದ್ದಾರೆ’ ಎಂದರು.

ಧಾರವಾಡದಲ್ಲಿ ಬಿಜೆಪಿ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಪಕ್ಷವು ಮುಸ್ಲಿಮರ ಓಲೈಕೆ ರಾಜಕಾರಣ ಮಾಡುತ್ತಿದೆ. ವಕ್ಫ್ ಹೆಸರಿನಲ್ಲಿ ರೈತರ ಜಮೀನು, ಮಠ– ಮಾನ್ಯಗಳ ಜಮೀನು ಕಬಳಿಸುವ ಹುನ್ನಾರ ನಡೆಸಿದೆ. ಸಚಿವ ಜಮೀರ್ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಆಗ್ರಹಿಸಿದರು.

ಮನೆಗೆ ತಂತಿ ಬೇಲಿ ನಿರ್ಮಿಸಿದ ಸಚಿವ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಗುಂಪು ದಾಳಿಯಿಂದ ರಕ್ಷಿಸಿಕೊಳ್ಳಲು ಪೂರ್ವ ಇಂಫಾಲ್ ಜಿಲ್ಲೆಯ ತಮ್ಮ ಪೂರ್ವಜರ ಮನೆಗೆ ಸಚಿವರೊಬ್ಬರು ಮುಳ್ಳು ತಂತಿ ಸಹಿತ ಕಬ್ಬಿಣದ ಬೇಲಿ ಹಾಗೂ ಭದ್ರತಾ ಸಿಬ್ಬಂದಿಗೆ ಬಂಕರ್‌ಗಳನ್ನು ನಿರ್ಮಿಸಿದ್ದಾರೆ.

ಮಣಿಪುರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಎಲ್. ಸುಸಿಂದ್ರೊ ಸಿಂಗ್ ಮೈತೇಯಿಗೆ ಸೇರಿದ ಪೂರ್ವಜರ ಮನೆಯ ಮೇಲೆ ನ.16ರಂದು ಗುಂಪೊಂದು ದಾಳಿ ನಡೆಸಿತ್ತು. ಇದಾದ ಬಳಿಕ ಅವರು ಈ ಕ್ರಮ ಕೈಗೊಂಡಿದ್ದಾರೆ.

ಮಣಿಪುರಕ್ಕೆ ಹೆಚ್ಚುವರಿಯಾಗಿ ಸಿಆರ್‌ಪಿಎಫ್‌ನ 70 ತುಕಡಿ

ಗುವಾಹಟಿ: ಕಳೆದ ವರ್ಷ ಮೇನಿಂದ ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಘರ್ಷಣೆಯಲ್ಲಿ ಮೃತಪಟ್ಟವರ ಸಂಖ್ಯೆ 258ಕ್ಕೆ ಏರಿದೆ. ಕೇಂದ್ರದ ಭದ್ರತಾ ಸಲಹೆಗಾರ ಕುಕ್‌ದೀಪ್ ಸಿಂಗ್ ಅವರು ಇಂಫಾಲ್‌ನಲ್ಲಿ ಶುಕ್ರವಾರ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

ಹೊಸ ಪ್ರಭೇದಕ್ಕೆ ‘ಒಫಿಯೊಫೇಗಸ್ ಕಾಳಿಂಗ’ ಎಂದು ನಾಮಕರಣ ಮಾಡಿ ಘೋಷಣೆ ಹೊರಡಿಸಿದ ಅರಣ್ಯ ಸಚಿವ

ಕನ್ನಡದ ‘ಕಾಳಿಂಗ’ ಸರ್ಪ ಇನ್ನು ವಿಶ್ವವಿಖ್ಯಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಗುಂಬೆಯ ಕಾಳಿಂಗ ಫೌಂಡೇಷನ್ ಮುಖ್ಯಸ್ಥ ಗೌರಿಶಂಕರ್ ಮತ್ತು ತಂಡ ಪತ್ತೆ ಮಾಡಿರುವ ಕಾಳಿಂಗ ಸರ್ಪದ ಹೊಸ ಪ್ರಭೇದಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ‘ಒಫಿಯೊಫೇಗಸ್ ಕಾಳಿಂಗ’ ಎಂದು ನಾಮಕರಣ ಮಾಡಿ, ಘೋಷಿಸಿದರು.

ನಂತರ ಮಾತನಾಡಿದ ಅವರು, ‘ಜಗತ್ತಿನಲ್ಲಿರುವುದು ಕಾಳಿಂಗ ಸರ್ಪದ ಒಂದೇ ಪ್ರಭೇದವಲ್ಲ, ಇನ್ನೂ ಮೂರು ಪ್ರಭೇದಗಳಿವೆ ಎಂದು ಗೌರಿಶಂಕರ್ ಮತ್ತು ತಂಡ ಸಂಶೋಧನೆ ಮಾಡಿ ಗುರುತಿಸಿದ್ದಾರೆ. ಅದಕ್ಕೆ ಹೊಸ ಹೆಸರಿಡಲಾಗಿದೆ. ಇನ್ನು ಮುಂದೆ ಕರ್ನಾಟಕದ ಕಾಳಿಂಗ ಸರ್ಪ ಪ್ರಭೇದವನ್ನು ವಿಶ್ವದಾದ್ಯಂತ ‘ಒಫಿಯೊಫೇಗಸ್ ಕಾಳಿಂಗ’ ಎಂಬ ಹೆಸರಿನಿಂದಲೇ ಕರೆಯಲಾಗುತ್ತದೆ. ಇದು ನಮ್ಮ ನಾಡಿಗೇ ಹೆಮ್ಮೆಯ ಸಂಗತಿ’ ಎಂದು ಶ್ಲಾಘಿಸಿದರು.

‘ಇಂಥ ಪ್ರಭೇದಗಳ ಸಂಶೋಧನೆ ಜೊತೆಗೆ, ಸಂರಕ್ಷಣೆ ಕೂಡ ಆಗಬೇಕು. ಆಗ, ಯಾವ ಸರ್ಪ ಕಚ್ಚಿದರೆ, ಯಾವ ವಿಷ ನಿರೋಧಕ ಔಷಧಿ ಕೊಡಬೇಕೆಂಬುದು ತಿಳಿಯಬಹುದು. ಈ ಮೂಲಕ ಅಮೂಲ್ಯವಾದ ಜೀವಗಳನ್ನು ಉಳಿಸಲು ಸಾಧ್ಯವಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

‘ಈ ತಂಡ ನಾಡು ಹೆಮ್ಮೆಪಡುವಂತಹ ಸಂಶೋಧನೆ ಮಾಡಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಕುರಿತು ಸಂಶೋಧನೆ ನಡೆಸಲು ಅರಣ್ಯ ಇಲಾಖೆ ಸಂಪೂರ್ಣ ಸಹಕಾರ ನೀಡುತ್ತದೆ. ಈ ಸಂಶೋಧನೆಯನ್ನು ಬಳಸಿಕೊಂಡು, ಹಾವು ಕಡಿತಕ್ಕೆ ಚಿಕಿತ್ಸೆ ನೀಡಲು ಬಳಸುವ ವಿಷ ನಿರೋಧಕ ಔಷಧಿ ತಯಾರಿಸುವಂತಹ ಕೆಲಸಗಳನ್ನು ಮಾಡುವುದಿದ್ದರೂ, ಸರ್ಕಾರ ನೆರವು ನೀಡಲು ಸಿದ್ಧವಿದೆ’ ಎಂದು ಭರವಸೆ ನೀಡಿದರು.



ಕಾಳಿಂಗ ಫೌಂಡೇಶನ್ ಆಯೋಜಿಸಿದ ಕಾಳಿಂಗ ಸರ್ಪದ ಹೊಸ ಪ್ರಭೇದ ಅನ್ವೇಷಣೆಯ ಪ್ರಕಟಣೆ ಕಾರ್ಯಕ್ರಮದಲ್ಲಿ ಫೌಂಡೇಶನ್ ಮುಖ್ಯಸ್ಥ ಪಿ.ಗೌರಿಶಂಕರ್, ಪತ್ನಿ ಶರ್ಮಿಳಾ ರಾಜಶೇಖರ್ ಅವರು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಸ್ಮರಣಿಕೆ ನೀಡಿದರು. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಸುಭಾಷ್ ಕೆ. ಮಾಲ್ಖಡೆ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಕಾಳಿಂಗ ಫೌಂಡೇಷನ್ ಮುಖ್ಯಸ್ಥ ಹಾಗೂ ಹೊಸ ಪ್ರಭೇದಗಳ ಸಂಶೋಧಕ ಗೌರಿಶಂಕರ, 12 ವರ್ಷಗಳ ಸಂಶೋಧನೆ ಕುರಿತು ಅನುಭವ ಹಂಚಿಕೊಂಡರು. ಮಾಜಿ ಶಾಸಕ ಕಿಮ್ಮನೆ ರತ್ನಾಕರ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಕೆ. ಮಾಲ್ಖಡೆ, ಐಐಎಸ್‌ಸಿ ವಿಜ್ಞಾನಿ ಕಾರ್ತಿಕ್ ಶಂಕರ್ ಮಾತನಾಡಿದರು. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಆರ್. ಮಂಜುನಾಥ ಗೌಡ, ನಟ ವಿನಯ್ ರಾಜಕುಮಾರ್, ಸಂಗೀತ ನಿರ್ದೇಶಕ ರಿಕ್ಕಿ ಕೇಜ್ ಭಾಗವಹಿಸಿದ್ದರು.

‘ಹಾವು ಕಡಿತಕ್ಕೆ ಎಲ್ಲೆಡೆ ಔಷಧ ಲಭ್ಯ’

‘ಪ್ರಸ್ತುತ ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲೂ ಹಾವು ಕಡಿತಕ್ಕೆ ಚಿಕಿತ್ಸೆ (ಆಂಟಿ ವಿನೋಮ್) ಲಭ್ಯವಿದೆ. ಎಲ್ಲ ಹಂತದ ಆಸ್ಪತ್ರೆಗಳಲ್ಲೂ ಈ ಚಿಕಿತ್ಸೆ ಇರಬೇಕೆಂದು ಸೂಚನೆ ಕೊಟ್ಟಿದ್ದೇವೆ’ ಎಂದು ಈಶ್ವರ ಖಂಡ್ರೆ ಹೇಳಿದರು.

‘ಔಷಧ ಲಭ್ಯವಿದ್ದರೆ ಸಾಲದು. ಜನರಲ್ಲಿ ಹಾವು ಕಚ್ಚಿದ ನಂತರ ಔಷಧ ಪಡೆಯುವ ಕುರಿತು ಜಾಗೃತಿ ಮೂಡಿಸಬೇಕಿದೆ’ ಎಂದು ತಿಳಿಸಿದರು.

‘ದೇಶದಲ್ಲಿ ವರ್ಷಕ್ಕೆ 58 ಸಾವಿರ ಜನ ಹಾವು ಕಡಿತದಿಂದ ಮೃತಪಡುತ್ತಾರೆ. 10 ಲಕ್ಷಕ್ಕಿಂತಲೂ ಹೆಚ್ಚು ಹಾವು ಕಡಿತ ಪ್ರಕರಣಗಳು ದಾಖಲಾಗುತ್ತವೆ. ರಾಜ್ಯದಲ್ಲಿ 50ರಿಂದ 60 ಮಂದಿ ಹಾವು ಕಚ್ಚಿ ಸಾಯಬಹುದು. ಹೀಗೆ ಹೊಸ ಪ್ರಭೇದಗಳ ಸಂಶೋಧನೆಗಳು, ವಿಷ ನಿರೋಧಕ ಔಷಧಿ ತಯಾರಿಸಲು ಸಹಾಯವಾಗುತ್ತವೆ. ಯಾವ ಹಾವು ಕಚ್ಚಿದರೆ, ಯಾವ ಔಷಧ ಕೊಡಬಹುದು ಎಂಬುದನ್ನು ಪತ್ತೆ ಮಾಡಬಹುದು. ಇದರಿಂದ ಜೀವಗಳನ್ನು ಉಳಿಸಬಹುದು’ ಎಂದರು.

ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ • ಮೃತರಲ್ಲಿ ಮೂವರು ಮಹಿಳೆಯರು

ಛತ್ತೀಸಗಢ: ಹತ್ತು ನಕ್ಸಲರ ಹತ್ಯೆ



ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶುಕ್ರವಾರ ಬೆಳಿಗ್ಗೆ ಭದ್ರತಾ ಪಡೆಗಳ ಜೊತೆಗೆ ನಡೆದ ಗುಂಡಿನ ಚಕಮಕಿಯಲ್ಲಿ ಹತ್ತು ಮಂದಿ ನಕ್ಸಲರು ಹತರಾಗಿದ್ದಾರೆ. ಮೃತ ನಕ್ಸಲರಲ್ಲಿ ಮೂವರು ಮಹಿಳೆಯರು ಸೇರಿದ್ದಾರೆ.

'ಭೇಜಿ ಠಾಣೆ ವ್ಯಾಪ್ತಿಯ ಅರಣ್ಯದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗೆ ಸಿಬ್ಬಂದಿ ತೆರಳಿದ್ದಾಗ ಚಕಮಕಿ ನಡೆದಿದೆ. ಮೃತರಲ್ಲಿ ಇಬ್ಬರನ್ನು ಮದ್‌ಕಂ ಮಾಸಾ (42) ಮತ್ತು ಲಖ್ಮಾ ಮಾಡ್ವಿ ಎಂದು ಗುರುತಿಸಲಾಗಿದೆ' ಎಂದು ಐಜಿಪಿ ಪಿ.ಸುಂದರರಾಜ್ ತಿಳಿಸಿದ್ದಾರೆ.

ಈ ಇಬ್ಬರ ಸುಳಿವು ನೀಡಿದವರಿಗೆ ಕ್ರಮವಾಗಿ ₹ 8 ಲಕ್ಷ ಮತ್ತು ₹ 5 ಲಕ್ಷ ನಗದು ಬಹುಮಾನ ನೀಡಲಾಗುವುದು ಎಂದು ಘೋಷಿಸಲಾಗಿತ್ತು. ಮಾಸಾ ಪತ್ನಿ ದುಧಿ ಹುನಿ, ರಕ್ಷಕ ಕೊವಾಸಿ ಕೆಸ, ಮದಕಂ ಜಿತು, ಮದ್‌ಕಂ ಕೊಸಿ ಅವರು ಸಾವಿಗೀಡಾಗಿದ್ದಾರೆ. ಹತರಾಗಿರುವ ಇತರ ನಕ್ಸಲರ ಗುರುತು ಪತ್ತೆಯಾಗಬೇಕಿದೆ ಎಂದು ಐಜಿಪಿ ವಿವರಿಸಿದರು.

ಗುಂಡಿನ ಚಕಮಕಿಯಲ್ಲಿ 'ಸಮವಸ್ತ್ರ'ದಲ್ಲಿದ್ದ 10 ನಕ್ಸಲರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಕೆ–47, ಐಎನ್‌ಎಸ್‌ಎಎಸ್ ರೈಫಲ್, ಗ್ರೆನೇಡ್ ಲಾಂಚರ್‌ಗಳು, ಸ್ವಯಂಚಾಲಿತ ರೈಫಲ್ (ಎಸ್‌ಎಲ್‌ಆರ್) ಸೇರಿ ಹಲವು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ತಿಳಿಸಿದ್ದಾರೆ.

ಕೊಂಟಾ, ಕಿಸ್ತರಂ ಪ್ರದೇಶದ ಸಮಿತಿಗಳ ಮಾವೋವಾದಿಗಳು ಕೋರಜ್‌ಗುಡ, ನಗರಂ, ದಾಂಟೇಸಪುರ ಮತ್ತು ಭಂಡಾರ್‌ಪಡಾರ್ ಗ್ರಾಮ ವ್ಯಾಪ್ತಿಯ ಅರಣ್ಯದಲ್ಲಿದ್ದಾರೆ ಎಂಬ ಖಚಿತ ಸುಳಿವು ಆಧರಿಸಿ ಭದ್ರತಾ ಪಡೆಗಳು ಕಾರ್ಯಾಚರಣೆ ಕೈಗೊಂಡಿದ್ದವು ಎಂದರು.

ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ), ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಕಾರ್ಯಾಚರಣೆ ಕೈಗೊಂಡಿದ್ದವು ಎಂದು ಹೇಳಿದರು.

ಈ ಘಟನೆಯೊಂದಿಗೆ ಛತ್ತೀಸಗಢ ಬಸ್ತರ್ ವಲಯದಲ್ಲಿ ಈ ವರ್ಷ ಗುಂಡಿನ ಚಕಮಕಿಯಲ್ಲಿ ಹತರಾದವರ ನಕ್ಸಲರ ಸಂಖ್ಯೆ 207ಕ್ಕೆ ಏರಿದೆ. ಬಸ್ತರ್ ವಲಯವು ಸುಕ್ಮಾ ಸೇರಿದಂತೆ ಒಟ್ಟು ಏಳು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದೆ.

ಈ ವಲಯದಲ್ಲಿ ಇದೇ ವರ್ಷ ಇಲ್ಲಿಯವರೆಗೂ 787 ನಕ್ಸಲರನ್ನು ಬಂಧಿಸಲಾಗಿದೆ. 789 ಮಂದಿ ಶರಣಾಗಿದ್ದಾರೆ. 262 ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹತ್ಯೆ ಕಾರ್ಯಾಚರಣೆ ಯಶಸ್ವಿಯಾದ ಕಾರಣ ಭದ್ರತಾ ಪಡೆಗಳು ಸ್ಥಳೀಯ ಜನಪ್ರಿಯ ಗೀತೆಗಳ ಸಂಗೀತದ ಹಿನ್ನೆಲೆಯಲ್ಲಿ ಕುಣಿದು ಸಂಭ್ರಮಿಸಿದ್ದಾರೆ. ಈ ಕುರಿತ ವಿಡಿಯೊಗಳು ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿವೆ.

ಹತ್ಯೆ ಶ್ಲಾಘನೀಯ, ಇದು ಶಾಂತಿಯ ಕಾಲ –ಸಿ.ಎಂ



ವಿಷ್ಣುದೇವ್ ಸಾಯ್

ಸುಕ್ಮಾ (ಪಿಟಿಐ): ನಕ್ಸಲರ ಹತ್ಯೆ ಮಾಡಿದ ಭದ್ರತಾ ಪಡೆಗಳ ಕಾರ್ಯ ಶ್ಲಾಘನೀಯ. ಇದು, ಶಾಂತಿಯ ಕಾಲ. ಬಸ್ತರ್ ವಲಯ ಪ್ರಗತಿಯತ್ತ ಮರಳುತ್ತಿದೆ' ಎಂದು ಸಿ.ಎಂ ವಿಷ್ಣುದೇವ್ ಸಾಯ್ ಪ್ರತಿಕ್ರಿಯಿಸಿದರು.

'ನಕ್ಸಲ್ ಪಿಡುಗಿನ ನಿರ್ಮೂಲನೆಗೆ ಸರ್ಕಾರ ನೀತಿ ರೂಪಿಸುತ್ತಿದೆ. ಬಸ್ತರ್ ವಲಯದಲ್ಲಿ ಶಾಂತಿ ಸ್ಥಾಪನೆ ಮತ್ತು ಅಭಿವೃದ್ಧಿಗೆ ಒತ್ತು ನೀಡುವುದೇ ಆದ್ಯತೆ' ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

2026ರ ಮಾರ್ಚ್ ವೇಳೆಗೆ ಛತ್ತೀಸಗಢದಲ್ಲಿ ನಕ್ಸಲ್ ಪಿಡುಗು ಅಂತ್ಯ ಗೊಳಿಸುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗುರಿ ಸಾಧನೆಗಾಗಿ ಹಂತ ಹಂತವಾಗಿ ಕ್ರಮಜರುಗಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಡೊಮೇನ್ ತಜ್ಞರ ನೇಮಕಕ್ಕೆ ಸೇನೆ ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಯುದ್ಧದ ಸ್ವರೂಪವನ್ನು ತಂತ್ರಜ್ಞಾನ ಬದಲಾಯಿಸಿರುವ ಸಂದರ್ಭದಲ್ಲಿ ಶತ್ರುಗಳ ತಂತ್ರಜ್ಞಾನ ದಾಳಿ ತಡೆಗೆ ಭಾರತೀಯ ಸೇನೆಯು 'ಡೊಮೇನ್ ಪರಿಣತ'ರ ನೇಮಕಕ್ಕೆ ಸಜ್ಜಾಗಿದೆ.

ಬಾಹ್ಯಾಕಾಶ ಮತ್ತು ಲೇಸರ್ ಶಸ್ತ್ರಾಸ್ತ್ರಗಳಿಂದಿಡಿದು ಐಒಟಿ (ಇಂಟರ್ನೆಟ್ ಆಫ್ ಥಿಂಗ್ಸ್), 3ಡಿ ಪ್ರಿಂಟಿಂಗ್ ಮತ್ತು ರೊಬೊಟಿಕ್ಸ್‌ವರೆಗಿನ ವೈವಿಧ್ಯಮಯ ಕ್ಷೇತ್ರಗಳಲ್ಲಿ ಸೇನೆಯು 16 ತಂತ್ರಜ್ಞಾನ ಕ್ಲಸ್ಟರ್‌ಗಳನ್ನು ತೆರೆದ ಬೆನ್ನಲ್ಲೇ ಈ ಹೊಸ ನೇಮಕಾತಿಗೆ ಮುಂದಾಗಿದೆ.

'ಕಾಲಕ್ಕೆ ತಕ್ಕಂತೆ ನಾವು ಹೆಜ್ಜೆ ಇಡಲು ಭಾರತೀಯ ಸೇನೆಯನ್ನು ಮರುರೂಪಿಸುತ್ತಿದ್ದೇವೆ. ಸೇನೆಯ ಪುನರ್ ರಚನೆಗಾಗಿ ಡೊಮೇನ್ ತಜ್ಞರನ್ನು ಅಧಿಕಾರಿಗಳು ಮತ್ತು ಜೂನಿಯರ್ ಕಮಿಷನ್ಡ್ ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಮೊದಲ ಬ್ಯಾಚ್ ನೇಮಕ 2025ರ ಮಧ್ಯದಲ್ಲಿ ನಡೆಯಲಿದೆ. ಇದಕ್ಕಾಗಿ ಒಂದು ತಿಂಗಳಲ್ಲಿ ಜಾಹೀರಾತು ನೀಡಲಾಗುವುದು' ಎಂದು ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಕೇಶ್ ಕಪೂರ್ ಹೇಳಿದ್ದಾರೆ.

'ತುರ್ತು ಪರಿಸ್ಥಿತಿ ವೇಳೆಯ ಸಂಸತ್‌ನ ನಿರ್ಧಾರಗಳೆಲ್ಲ ಅನೂರ್ಜಿತ ಎನ್ನಲಾಗದು'

ನವದೆಹಲಿ(ಪಿಟಿಐ): 'ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿ ಸೇರಿದಂತೆ ಸಂಸತ್ ಕೈಗೊಂಡಿರುವ ನಿರ್ಧಾರಗಳೆಲ್ಲವೂ ಅನೂರ್ಜಿತ ಎಂಬುದಾಗಿ ತಾನು ಹೇಳುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

'1976ರಲ್ಲಿ ತಿದ್ದುಪಡಿ ಮೂಲಕ ಸಂವಿಧಾನದ ಪ್ರಸ್ತಾವನೆಯಲ್ಲಿ 'ಸಮಾಜವಾದಿ', 'ಜಾತ್ಯತೀತ' ಹಾಗೂ 'ಸಮಗ್ರತೆ' ಎಂಬ ಪದಗಳನ್ನು ಸೇರಿಸಲಾಯಿತು. ಸಂಸತ್‌ನ ಈ ನಿರ್ಧಾರವನ್ನು ನ್ಯಾಯಾಂಗವು ವಿಮರ್ಶೆಗೆ ಒಳಪಡಿಸಿದೆ. ಈ ಪದಗಳ ಸೇರ್ಪಡೆಯೂ ಸೇರಿದಂತೆ ತುರ್ತು ಪರಿಸ್ಥಿತಿ ವೇಳೆ ಸಂಸತ್ ಕೈಗೊಂಡ ಎಲ್ಲ ನಿರ್ಧಾರಗಳು ಅನೂರ್ಜಿತ ಎಂಬುದಾಗಿ ಸುಪ್ರೀಂ ಕೋರ್ಟ್ ಹೇಳುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯಕುಮಾರ್ ಅವರಿದ್ದ ನ್ಯಾಯಪೀಠ ಹೇಳಿದೆ.

ಸಂವಿಧಾನದ ಪ್ರಸ್ತಾವನೆಯಲ್ಲಿ 'ಸಮಾಜವಾದಿ', 'ಜಾತ್ಯತೀತ' ಹಾಗೂ 'ಸಮಗ್ರತೆ' ಎಂಬ ಪದಗಳನ್ನು ಸೇರ್ಪಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ವೇಳೆ ಪೀಠ ಈ ಮಾತು ಹೇಳಿದ ಪೀಠವು, ನ.25ಕ್ಕೆ ತೀರ್ಪನ್ನು ಕಾಯ್ದಿರಿಸಿತು.

'ಅದಾನಿ ವಿಷಯ: ಕಾಂಗ್ರೆಸ್ ಇಬ್ಬಗೆ ನೀತಿ'

ಬಿಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಆರೋಪ • ಒಪ್ಪಂದಗಳ ರದ್ದುಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ



ರಾಮರಾವ್

ಹೈದರಾಬಾದ್: ಉದ್ಯಮಿ ಗೌತಮ್ ಅದಾನಿ ವಿಷಯದಲ್ಲಿ ಕಾಂಗ್ರೆಸ್ ಇಬ್ಬಗೆ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿರುವ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್, 'ಕಾಂಗ್ರೆಸ್ ಆಡಳಿತವಿರುವ ತೆಲಂಗಾಣವು ಅದಾನಿ ಗ್ರೂಪ್ ಜತೆ ಮಾಡಿಕೊಂಡಿರುವ ಒಪ್ಪಂದಗಳನ್ನು ರದ್ದುಗೊಳಿಸುತ್ತದೆಯೇ? ಈ ನಿಟ್ಟಿನಲ್ಲಿ ತೆಲಂಗಾಣ ಸರ್ಕಾರಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚಿಸುವರೇ' ಎಂದು ಪ್ರಶ್ನಿಸಿದರು.

ಬಿಆರ್‌ಎಸ್ ಅಡಳಿತವಿದ್ದ 10 ವರ್ಷಗಳ ಅವಧಿಯಲ್ಲಿ ಆಗಿನ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಅದಾನಿ ಅವರಿಗೆ ತೆಲಂಗಾಣ ಪ್ರವೇಶಕ್ಕೆ ಅವಕಾಶ ನೀಡಲಿರಲಿಲ್ಲ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಅದಾನಿ ಅವರಿಗೆ ಅಮೆರಿಕ ನ್ಯಾಯಾಲಯ ಬಂಧನದ ವಾರಂಟ್ ಹೊರಡಿಸಿದ ಬೆನ್ನಲ್ಲೇ, ಕೆನ್ಯಾ ದೇಶವು ಅದಾನಿ ಗ್ರೂಪ್ ಜತೆಗಿನ ಎಲ್ಲ ವ್ಯವಹಾರಿಕ ಸಂಬಂಧಗಳನ್ನು ಕಡಿತಗೊಳಿಸುವುದಾಗಿ ಪ್ರಕಟಿಸಿದೆ. ಸಾರಿಗೆ, ಇಂಧನ, ವಿದ್ಯುತ್ ಮತ್ತು ವಿಮಾನ ನಿಲ್ದಾಣ ನಿರ್ವಹಣಾ ಕ್ಷೇತ್ರಗಳಲ್ಲಿನ ಗುತ್ತಿಗೆಗಳನ್ನು ಕೆನ್ಯಾ ರದ್ದುಗೊಳಿಸಿದೆ. ರಾಹುಲ್ ಗಾಂಧಿ ಅವರು ಅದಾನಿ ಅವರನ್ನು ಖಳನಾಯಕ ಎಂದು ಕರೆಯುತ್ತಾರೆ. ಹಾಗಾದರೆ ಕೆನ್ಯಾ ಸರ್ಕಾರದಂತೆಯೇ, ತೆಲಂಗಾಣ ಸರ್ಕಾರವೇಕೆ ಅದಾನಿ ಜತೆಗಿನ ಒಪ್ಪಂದಗಳನ್ನು ರದ್ದುಗೊಳಿಸಬಾರದು. ನಿಮ್ಮ ಪಕ್ಷದ ಆಡಳಿತವು ರಾಜ್ಯದಲ್ಲಿ ₹ 12,400 ಕೋಟಿ ಮೊತ್ತದ ವ್ಯವಹಾರಿಕ ಒಪ್ಪಂದಗಳನ್ನು ಮಾಡಿಕೊಂಡಿದೆ. ಅವುಗಳನ್ನು ರದ್ದುಗೊಳಿಸಲು ನೀವು ಮುಖ್ಯಮಂತ್ರಿಗೆ ಸೂಚಿಸಿ' ಎಂದು ಅವರು ಒತ್ತಾಯಿಸಿದರು.

'ಅದಾನಿ ಜತೆಗೆ ಪ್ರಧಾನಿ ಅವರ ಸ್ನೇಹವನ್ನು ಖಂಡಿಸುವ ರಾಹುಲ್ ಗಾಂಧಿ ಅವರು, ರೇವಂತ್ ರೆಡ್ಡಿ ವಿಚಾರದಲ್ಲಿ ಏಕೆ ಮೌನವಾಗಿದ್ದಾರೆ. ಅದಾನಿ ಅವರು ದೇಶಕ್ಕೆ ಹಾನಿಕಾರಕ ಎಂದು ರಾಹುಲ್ ಪ್ರತಿಪಾದಿಸುತ್ತಾರೆ. ಅದು ನಿಜವಾಗಿದ್ದರೆ, ಅಂಥವರಿಂದ ತೆಲಂಗಾಣಕ್ಕೆ ಏನು ಪ್ರಯೋಜನ?' ಎಂದು ಅವರು ಪ್ರಶ್ನಿಸಿದರು.

'ಬಿಆರ್‌ಎಸ್ ಅಧಿಕಾರಾವಧಿಯಲ್ಲಿ ಅದಾನಿ ಹಲವು ಬಾರಿ ತೆಲಂಗಾಣದಲ್ಲಿ ಹೂಡಿಕೆ ಮಾಡಲು ಬಂದಿದ್ದರು. ಆದರೆ, ಅವರಿಗೆ ಚಹಾ ನೀಡಿ, ಹಾಗೆಯೇ ಕಳುಹಿಸಿದ್ದೆವು. ಅವರೊಂದಿಗೆ ಯಾವುದೇ ರೀತಿಯ ವ್ಯಾವಹಾರಿಕ ಒಪ್ಪಂದವನ್ನು ನಮ್ಮ ಸರ್ಕಾರ ಮಾಡಿಕೊಳ್ಳಲಿಲ್ಲ. ಆದರೆ ಕಾಂಗ್ರೆಸ್‌ನದ್ದು ಇಬ್ಬಗೆ ನೀತಿ ಎಂಬುದು ಅದು ಮಾಡಿಕೊಂಡಿರುವ ಒಪ್ಪಂದಗಳಿಂದಲೇ ಸ್ಪಷ್ಟವಾಗುತ್ತದೆ' ಎಂದು ಅವರು ಟೀಕಿಸಿದರು.

'ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಒಪ್ಪಿಗೆಯಿಲ್ಲದೆ ಏನೇನೂ ನಡೆಯುವುದಿಲ್ಲ. ಸಣ್ಣ ನಗರ ಪಾಲಿಕೆಯ ಹುದ್ದೆಗಳ ಹಂಚಿಕೆಯಿಂದ ಹಿಡಿದು ಸಂಪುಟ ವಿಸ್ತರಣೆವರೆಗೂ ಅಲ್ಲಿ ಹೈಕಮಾಂಡ್ ಒಪ್ಪಿಗೆ ಅತ್ಯಗತ್ಯ. ಹೀಗಿರುವಾಗ ಹೈಕಮಾಂಡ್ ಅನುಮತಿಯಿಲ್ಲದೇ ರಾಜ್ಯ ಸರ್ಕಾರ ಅದಾನಿ ಜತೆಗೆ ಒಪ್ಪಂದಗಳನ್ನು ಮಾಡಿಕೊಂಡಿದೆ ಎಂದು ನಾವು ನಂಬಬೇಕೆ? ನಿತ್ಯ ಅದಾನಿಯನ್ನು ಟೀಕಿಸುವ ರಾಹುಲ್ ಗಾಂಧಿ ಅವರು ಈ ಒಪ್ಪಂದಗಳನ್ನು ಬೆಂಬಲಿಸಿದ್ದಾರೆಯೇ? ಈ ಬಗ್ಗೆ ಅವರು ಸ್ಪಷ್ಟಪಡಿಸಬೇಕು' ಎಂದು ಕೆಟಿಆರ್ ಒತ್ತಾಯಿಸಿದರು.

'ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವು ಅದಾನಿ ಅವರಿಂದ ₹ 100 ಕೋಟಿ ದೇಣಿಗೆ ಪಡೆದಿದೆ. ಇದು ರಾಹುಲ್ ಅವರಿಗೆ ತಿಳಿದಿದೆಯೇ? ಅಥವಾ ಅವರ ಗಮನಕ್ಕೆ ಬರದಂತೆ ಇದನ್ನು ಸ್ವೀಕರಿಸಲಾಗಿದೆಯೇ?' ಎಂದು ಅವರು ಪ್ರಶ್ನೆ ಮಾಡಿದರು.



ಉದ್ಯಮಿ ಗೌತಮ್ ಅದಾನಿ ಬಂಧನಕ್ಕೆ ಒತ್ತಾಯಿಸಿ ಕೋಲ್ಕತ್ತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು–ಎಎಫ್‌ಪಿ ಚಿತ್ರ

'ಅದಾನಿ ಪ್ರದೇಶ'ವನ್ನಾಗಿಸಿದ ಜಗನ್: ಶರ್ಮಿಳಾ



ಶರ್ಮಿಳಾ

ಹೈದರಾಬಾದ್ (ಪಿಟಿಐ): ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು, ರಾಜ್ಯವನ್ನು ಅದಾನಿ ಅವರಿಗೆ 'ಖಾಲಿ ಚೆಕ್'ನಂತೆ ನೀಡುವ ಮೂಲಕ, ಆಂಧ್ರ ಪ್ರದೇಶವನ್ನು 'ಅದಾನಿ ಪ್ರದೇಶ'ವನ್ನಾಗಿ ಪರಿವರ್ತಿಸಿದ್ದಾರೆ ಎಂದು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ (ಎಪಿಸಿಸಿ) ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಆರೋಪಿಸಿದರು.

'ಆಂಧ್ರದ ಜನರ ಭಾವನೆಗಳನ್ನು ₹ 1,750 ಕೋಟಿ ಲಂಚಕ್ಕೆ ಅಡಮಾನ ಇಟ್ಟ ಜಗನ್ ಅವರಿಂದ ವೈಎಸ್‌ಆರ್ ಕುಟುಂಬ ಮತ್ತು ಇಡೀ ರಾಜ್ಯಕ್ಕೆ ಅಪಮಾನ ಆಗಿದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ದೂರಿದರು.

ಲಂಚ ಆರೋಪ ಸುಳ್ಳು: ಬಿಜೆಡಿ

ಭುವನೇಶ್ವರ(ಪಿಟಿಐ): 'ಅದಾನಿ ಸಮೂಹದಿಂದ ರಾಜ್ಯ ಸರ್ಕಾರದ ಅಧಿಕಾರಿಗಳು ಲಂಚ ಪಡೆದಿದ್ದಾರೆ ಎಂಬ ಅರೋಪಗಳು ಸುಳ್ಳು' ಎಂದು ಬಿಜೆಡಿ ಶುಕ್ರವಾರ ಹೇಳಿದೆ.

'ಕೇಂದ್ರ ಸರ್ಕಾರ ಒಡೆತನದ ಸಂಸ್ಥೆಯಿಂದ ರಾಜ್ಯಕ್ಕೆ ಸೌರ ವಿದ್ಯುತ್ ಪೂರೈಕೆ ಗುತ್ತಿಗೆ ನೀಡುವುದಕ್ಕಾಗಿ ಅದಾನಿ ಸಮೂಹದಿಂದ ರಾಜ್ಯದ ಅಧಿಕಾರಿಗಳು ಲಂಚ ಪಡೆದಿದ್ದರು ಎಂಬುದು ಸುಳ್ಳು' ಎಂದು ಒಡಿಶಾದ ಮಾಜಿ ಇಂಧನ ಸಚಿವ ಹಾಗೂ ಹಾಲಿ ಶಾಸಕ ಪಿ.ಕೆ.ದೇವ್ ಹೇಳಿದ್ದಾರೆ.

'ಒಡಿಶಾದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಣ ಮಾಡಲಾಗಿದೆ. ವಿದ್ಯುತ್ ವಿತರಣೆ ಕುರಿತು ಗ್ರಿಡ್‌ಕೊ, ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಇಸಿಐ) ನಡುವೆ ಒಪ್ಪಂದವಾಗಿದೆ' ಎಂದು ದೇವ್ ಹೇಳಿದ್ದಾರೆ.

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಬಲವಾದ ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಅದಾನಿ ವಿರುದ್ಧದ ಲಂಚದ ಆರೋಪದಿಂದ ಎದುರಾಗಿರುವ ಬಿಕ್ಕಟ್ಟನ್ನು ಸರಿ ದಿಕ್ಕಿನಲ್ಲಿ ನಿರ್ವಹಿಸಬಹುದು

ಕರೀನ್ ಜೀನ್ ಪಿಯರ್

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ

ಮಹಾರಾಷ್ಟ್ರಕ್ಕೆ ಜಿ. ಪರಮೇಶ್ವರ 'ಕೈ' ವೀಕ್ಷಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ಸನ್ನಿವೇಶದ ಮೇಲ್ವಿಚಾರಣೆ ನೋಡಿಕೊಳ್ಳಲು ಕಾಂಗ್ರೆಸ್ ಪಕ್ಷವು ಆರು ಹಿರಿಯ ನಾಯಕರನ್ನು ವೀಕ್ಷಕರನ್ನಾಗಿ ಶುಕ್ರವಾರ ನೇಮಿಸಿದೆ.

ಕರ್ನಾಟಕದ ಗೃಹ ಸಚಿವ ಜಿ. ಪರಮೇಶ್ವರ, ಮಾಜಿ ಮುಖ್ಯಮಂತ್ರಿಗಳಾದ ಅಶೋಕ ಗೆಹಲೋತ್ (ರಾಜಸ್ಥಾನ) ಹಾಗೂ ಭೂಪೇಶ್ ಬಘೆಲ್ (ಛತ್ತೀಸಘಡ) ಅವರಿಗೆ ಮಹಾರಾಷ್ಟ್ರದ ಹೊಣೆ ವಹಿಸಲಾಗಿದೆ. ಹಿರಿಯ ನಾಯಕ ತಾರಿಕ್ ಅನ್ವರ್, ತೆಲಂಗಾಣದ ಉಪಮುಖ್ಯಮಂತ್ರಿ ಎಂ. ಭಟ್ಟಿ ವಿಕ್ರಮಾರ್ಕ ಹಾಗೂ ಪಕ್ಷದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಕೃಷ್ಣ ಅಲ್ಲವೂರು ಅವರು ಜಾರ್ಖಂಡ್ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ.

ಅತಂತ್ರ ಫಲಿತಾಂಶ ಅಥವಾ ನಿಕಟ ಫಲಿತಾಂಶ ಬಂದಲ್ಲಿ ಈ ನಾಯಕರು ರಾಜಕೀಯ ಪರಿಸ್ಥಿತಿ ಎದುರಿಸಿ ಕಾರ್ಯತಂತ್ರಗಳನ್ನು ರೂಪಿಸಲು ರಾಜ್ಯ ನಾಯಕತ್ವಕ್ಕೆ ಸಹಾಯ ಮಾಡಲಿದ್ದಾರೆ.

ಅದಾನಿ ವಿರುದ್ಧ ಸೆಬಿ ತನಿಖೆ?

ಒಂದನೇ ಪುಟದಿಂದ...

ಅಮೆರಿಕದ ನ್ಯಾಯಾಂಗ ಇಲಾಖೆಯಿಂದ ನಡೆಯುತ್ತಿದ್ದ ತನಿಖೆ ಬಗ್ಗೆ ಅದಾನಿ ಸಮೂಹಕ್ಕೆ ಈ ಮೊದಲೇ ಮಾಹಿತಿ ಇತ್ತು. ಅಲ್ಲಿನ ಭ್ರಷ್ಟಾಚಾರ ವಿರೋಧಿ ಕಾನೂನುಗಳನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದ ಬಗ್ಗೆ ಕಂಪನಿಗೆ ಸಂಬಂಧ ಇಲ್ಲದ ಮೂರನೇ ವ್ಯಕ್ತಿಯಿಂದ ತನಿಖೆ ನಡೆಯುತ್ತಿದೆ ಎಂದು ಅದಾನಿ ಗ್ರೀನ್ ಎನರ್ಜಿ ಕಂಪನಿಯು, ಮಾರ್ಚ್ 19ರಂದು ಷೇರುಪೇಟೆಗೆ ಮಾಹಿತಿ ನೀಡಿತ್ತು ಎಂದು ಮೂಲಗಳು ಹೇಳಿವೆ.

ವಿವರಣೆ ಕೋರಿಕೆ: ಕೆನ್ಯಾ ಸರ್ಕಾರವು ವಿಮಾನ ನಿಲ್ದಾಣದ ನಿರ್ವಹಣೆ ಸಂಬಂಧ ಅದಾನಿ ಸಮೂಹದೊಟ್ಟಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದುಪಡಿಸಿದೆ. ಅಮೆರಿಕದ ಕೋರ್ಟ್‌ನಲ್ಲಿ ಲಂಚ ಪ್ರಕರಣ ಸಂಬಂಧ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಈ ಪ್ರಕರಣಗಳಲ್ಲಿ ಷೇರುಪೇಟೆ ನಿಯಮಾವಳಿಗಳು ಉಲ್ಲಂಘನೆಯಾಗಿವೆಯೇ ಎನ್ನುವ ಬಗ್ಗೆ ವಿವರಣೆ ನೀಡುವಂತೆ ಅದಾನಿ ಸಮೂಹಕ್ಕೆ, ಷೇರು ವಿನಿಮಯ ಕೇಂದ್ರಗಳು ಸೂಚಿಸಿವೆ.

ಒಂದು ತನಿಖೆಯಷ್ಟೇ ಬಾಕಿ

ವಾಸ್ತವಿಕ ಬೆಲೆಗಿಂತ ಶೇ 80ರಷ್ಟು ಹೆಚ್ಚು ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್ ಕಳೆದ ವರ್ಷದ ಜನವರಿಯಲ್ಲಿ ಆರೋಪಿಸಿತ್ತು.

ಹಿಂಡನ್‌ಬರ್ಗ್ ಆರೋಪ ಸೇರಿದಂತೆ ಅದಾನಿ ಸಮೂಹದ ವಿರುದ್ಧ ಸೆಬಿಯು ಒಟ್ಟು 24 ತನಿಖೆಗಳನ್ನು ಕೈಗೆತ್ತಿಕೊಂಡಿತ್ತು. ಹಿಂಡನ್‌ಬರ್ಗ್ ಆರೋಪಕ್ಕೆ ಸಂಬಂಧಿಸಿದ ಒಂದು ತನಿಖೆಯಷ್ಟೇ ಪ್ರಗತಿಯಲ್ಲಿದೆ. ಉಳಿದ ತನಿಖೆಗಳು ಪೂರ್ಣಗೊಂಡಿವೆ ಎಂದು ಪ್ರಸಕ್ತ ವರ್ಷದ ಆಗಸ್ಟ್‌ನಲ್ಲಿ ಸೆಬಿ ಹೇಳಿಕೆ ನೀಡಿತ್ತು.

ಅಧ್ಯಯನ ಬಳಿಕ ಕ್ರಮ: ನಾಯ್ಡು

ಒಂದನೇ ಪುಟದಿಂದ....

ವಿಧಾನಸಭೆಯಲ್ಲಿ ಚರ್ಚೆ ವೇಳೆ ಮಾತನಾಡಿದ ಅವರು, ಅದಾನಿ ಸಮೂಹ ಹಾಗೂ ಈ ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಕೇಳಿ ಬಂದಿರುವ ಲಂಚದ ಆರೋಪ ಕುರಿತು ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದಾರೆ.

'ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾ- (ಎಸ್‌ಇಸಿಐ) ಮೂಲಕ ಸೌರ ವಿದ್ಯುತ್ ಮಾರಾಟ ಒಪ್ಪಂದ ಪಡೆಯಲು 2021ರಲ್ಲಿ ಗೌತಮ್ ಅದಾನಿ ಹಾಗೂ ಇತರರು, ಆಂಧ್ರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಉನ್ನತ ಅಧಿಕಾರಿಗಳಿಗೆ ಲಂಚ ನೀಡಲು ಮುಂದಾಗಿದ್ದರು ಎಂದು ಅಮೆರಿಕದ ಕೋರ್ಟ್ ಆರೋಪ ಹೊರಿಸಿದೆ' ಎಂದು ನಾಯ್ಡು ಹೇಳಿದರು.

'ಈ ಹಿಂದಿನ ವೈಎಸ್‌ಆರ್ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಕೇಳಿಬಂದಿರುವ ಆರೋಪಗಳಿಂದಾಗಿ ಆಂಧ್ರಪ್ರದೇಶದ ಘನತೆಗೆ ಧಕ್ಕೆಯುಂಟಾಗಿದೆ' ಎಂದರು.

ಜಲಾಂತರ್ಗಾಮಿಗೆ ನೌಕೆ ಡಿಕ್ಕಿ: ಇಬ್ಬರು ಮೀನುಗಾರರ ನಾಪತ್ತೆ

ನವದೆಹಲಿ (ಪಿಟಿಐ): ಗೋವಾ ಕರಾವಳಿಯಿಂದ 70 ನಾಟಿಕಲ್ ಮೈಲಿ ದೂರದಲ್ಲಿ ಮೀನುಗಾರರ ನೌಕೆಯೊಂದು ಭಾರತೀಯ ನೌಕಾದಳದ ಜಲಾಂತರ್ಗಾಮಿ ನೌಕೆಗೆ ಡಿಕ್ಕಿ ಹೊಡೆದ ಘಟನೆ ಗುರುವಾರ ನಡೆದಿದೆ. ಈ ವೇಳೆ ನಾಪತ್ತೆಯಾಗಿರುವ ಇಬ್ಬರು ಮೀನುಗಾರರ ಶೋಧಕ್ಕೆ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ಶುಕ್ರವಾರ ಹೇಳಿದ್ದಾರೆ. ಮೀನುಗಾರಿಕಾ ದೋಣಿ ಮಾರ್ಥೋಮಾದಲ್ಲಿ ಒಟ್ಟು 13 ಮೀನುಗಾರರಿದ್ದರು. ಇದರಲ್ಲಿನ 11 ಜನರನ್ನು ರಕ್ಷಿಸಲಾಗಿದ್ದು, ಇನ್ನಿಬ್ಬರ ರಕ್ಷಣೆಗಾಗಿ ಹುಡುಕಾಟ ನಡೆದಿದೆ ಎಂದು ನೌಕಾದಳ ತಿಳಿಸಿದೆ.

ಜ್ಞಾನವಾಪಿ: ಮುಸ್ಲಿಂ ಅರ್ಜಿದಾರರಿಗೆ ನೋಟಿಸ್

ನವದೆಹಲಿ: ಜ್ಞಾನವಾಪಿ ಮಸೀದಿಯಲ್ಲಿ 'ಶಿವಲಿಂಗ' ಪತ್ತೆಯಾಗಿದ್ದ ಕಡೆ ಎಎಸ್‌ಐ ಸಮೀಕ್ಷೆ ನಡೆಸಲು ಕೋರಿದ್ದ ಹಿಂದೂ ಪರ ಅರ್ಜಿದಾರರ ಅರ್ಜಿ ಕುರಿತು ಪ್ರತಿಕ್ರಿಯೆ ದಾಖಲಿಸುವಂತೆ ಸೂಚಿಸಿ ಮಸೀದಿಯ ಮೇಲ್ವಿಚಾರಣೆ ಸಮಿತಿಗೆ ಸುಪ್ರೀಂ ನೋಟಿಸ್ ಜಾರಿ ಮಾಡಿದೆ.

ಕೋರ್ಟ್‌ನ ನಿರ್ದೇಶನದಂತೆ ಹಿಂದೆ ಸಮೀಕ್ಷೆ ವೇಳೇ ಮಸೀದಿ ಕೊಳದಲ್ಲಿ ಶಿವಲಿಂಗ ಕಂಡು ಬಂದಿತ್ತು. ಆ ಆವರಣವನ್ನು ಸುಪರ್ದಿಗೆ ಪಡೆದು ಪ್ರವೇಶಕ್ಕೆ ನಿರ್ಬಂಧ ಹೇರಲು ಕೋರ್ಟ್ ಹಿಂದೆ ಆದೇಶಿಸಿತ್ತು. ಮುಸ್ಲಿಂ ಅರ್ಜಿದಾರರು 'ಅದು ಕಾರಂಜಿ' ಎಂದು ವಾದಿಸಿದ್ದರು.

ಸಮೀಕ್ಷೆ ಕೋರಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯನ್ ಅವರಿದ್ದ ಪೀಠವು ಡಿ.17ರ ಒಳಗೆ ಪ್ರತಿಕ್ರಿಯಿಸಲು ಸೂಚಿಸಿತು.

ಉಪಚುನಾವಣೆ: ಯಾರಿಗೆ ಸಿಹಿ?

ಒಂದನೇ ಪುಟದಿಂದ...


ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದ ಬಿಜೆಪಿಯ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್‌ನ ಇ. ತುಕಾರಾಂ ಹಾಗೂ ಜೆಡಿಎಸ್‌ನ ಎಚ್‌.ಡಿ. ಕುಮಾರಸ್ವಾಮಿ ಅವರು ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿದ ಕಾರಣ ಈ ಮೂರು ಕ್ಷೇತ್ರಗಳಿಗೆ ಉಪ ಚುನಾವಣೆ ನಡೆದಿತ್ತು. ಈ ಮೂರೂ ಕ್ಷೇತ್ರಗಳಲ್ಲೂ ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ- ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ನಡುವೆ ನೇರ ಪೈಪೋಟಿ ಇತ್ತು. ಸಂಡೂರು (ಕಾಂಗ್ರೆಸ್), ಶಿಗ್ಗಾವಿ (ಬಿಜೆಪಿ), ಚನ್ನಪಟ್ಟಣ (ಜೆಡಿಎಸ್) ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಳ್ಳಲು ಮೂರೂ ಪಕ್ಷಗಳು ಅಬ್ಬರದ ಪ್ರಚಾರ ನಡೆಸಿದ್ದವು.

ಕಾಂಗ್ರೆಸ್ ಅಭ್ಯರ್ಥಿಗಳ ಪರ ಸಿ.ಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು ಭರ್ಜರಿ ಪ್ರಚಾರ ನಡೆಸಿದರು. ಶಿಗ್ಗಾವಿ ಮತ್ತು ಸಂಡೂರಿನಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಲ್ಹಾದ ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಪ್ರಮುಖರು ಮತ ಯಾಚನೆ ನಡೆಸಿದ್ದರು.

ಚನ್ನಪಟ್ಟಣದಲ್ಲಿ ಪ್ರಚಾರ ಜೋರಾಗಿತ್ತು. ಡಿ.ಕೆ. ಶಿವಕುಮಾರ್ ಮತ್ತು ಎಚ್‌. ಡಿ. ಕುಮಾರಸ್ವಾಮಿ ನಡುವಿನ ಕದನ ಎಂಬಂತೆ ಈ ಕ್ಷೇತ್ರದ ಉಪ ಚುನಾವಣೆ ಬಿಂಬಿತಗೊಂಡಿದ್ದರಿಂದ ವಾಕ್ಸಮರಕ್ಕೆ ದಾರಿ ಮಾಡಿಕೊಟ್ಟಿತ್ತು. ಕ್ಷೇತ್ರದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಪ್ರಚಾರ ನಡೆಸಿದ್ದರು.

ಕ್ಷೇತ್ರ	ಮತ ಎಣಿಕೆ ಕೇಂದ್ರ
ಶಿಗ್ಗಾವಿ	ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ದೇವಗಿರಿ
ಸಂಡೂರು	ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ಬಳ್ಳಾರಿ
ಚನ್ನಪಟ್ಟಣ	ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರ

ಕ್ಷೇತ್ರ - ಅಭ್ಯರ್ಥಿಗಳು



'ಮಹಾ', ಜಾರ್ಖಂಡ್ ಕುತೂಹಲಕ್ಕೆ ಇಂದು ತೆರೆ

ಒಂದನೇ ಪುಟದಿಂದ...

ಜನಾದೇಶ ತಮ್ಮ ಪರವಾಗಿಯೇ ಇರಲಿದೆ ಎಂದು ಎನ್‌ಡಿಎ ಹಾಗೂ 'ಇಂಡಿಯಾ' ಒಕ್ಕೂಟ ಎರಡೂ ಆತ್ಮವಿಶ್ವಾಸದಿಂದ ಬೀಗುತ್ತಿದ್ದು, ಸೋಮವಾರದಿಂದ ಆರಂಭವಾಗಲಿರುವ ಸಂಸತ್‌ನ ಚಳಿಗಾಲದ ಅಧಿವೇಶನದ ಮೇಲೂ ಈ ಫಲಿತಾಂಶವು ಪ್ರಭಾವ ಬೀರುವ ನಿರೀಕ್ಷೆ ಇದೆ.

ಅದಾನಿ ಸಮೂಹದ ವಿರುದ್ಧದ ಆರೋಪಗಳು, ಮಣಿಪುರದಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದಿರುವುದು ಸೇರಿದಂತೆ ಹಲವು ವಿಚಾರಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಕಟ್ಟಿ ಹಾಕಲು ಸಜ್ಜಾಗಿವೆ.

ಮಹಾರಾಷ್ಟ್ರ: ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಮಹಾಯುತಿಗೆ ಬಹುಮತ ಸಿಗಲಿದೆ ಎಂದು ಭವಿಷ್ಯ ನುಡಿದಿವೆ.

ಜಾರ್ಖಂಡ್: ಜಾರ್ಖಂಡ್‌ನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ, ಜೆಎಂಎಂ ಮುಂದಾಳತ್ವದ 'ಇಂಡಿಯಾ' ಮೈತ್ರಿಕೂಟ ಮತ್ತೆ ಅಧಿಕಾರದ ಗದ್ದುಗೆ ಏರುವುದನ್ನು ತಡೆಯುವ ವಿಶ್ವಾಸದಲ್ಲಿದೆ.

'ಇಂಡಿಯಾ' ಮೈತ್ರಿಕೂಟ ಮತ್ತೆ ಅಧಿಕಾರ ಬರುವ ಸಾಧ್ಯತೆಗಳು ಕ್ಷೀಣ ಎಂದು ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಹೇಳಿವೆ. ಒಂದು ವೇಳೆ, ಬಹುಮತ ಪಡೆದಲ್ಲಿ, ಜೆಎಂಎಂ ನಾಯಕ ಹೇಮಂತ್ ಸೋರೇನ್ 2ನೇ ಅವಧಿಗೆ ಮುಖ್ಯಮಂತ್ರಿಯಾಗುವರು ಎನ್ನಲಾಗುತ್ತಿದೆ.

ಒಂದು ವೇಳೆ, ಎನ್‌ಡಿಎಗೆ ಬಹುಮತ ಸಿಕ್ಕಲ್ಲಿ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದನ್ನು ಬಿಜೆಪಿ ಬಹಿರಂಗಪಡಿಸಿಲ್ಲ.

ಉಪಚುನಾವಣೆ: ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸ್ಪರ್ಧಿಸಿರುವ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರ ಉಪ ಚುನಾವಣೆ ಸಾಕಷ್ಟು ಗಮನ ಸೆಳೆದಿದೆ. ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ರಾಜೀನಾಮೆಯಿಂದ ತೆರವಾಗಿತ್ತು.

'ಮಹಾ' ಸಿ.ಎಂ ಆಯ್ಕೆಗೆ ಸೂತ್ರ ಯಾವುದು?

ಬಿಜೆಪಿ ನೇತೃತ್ವದ ಮಹಾಯುತಿ ಇಲ್ಲವೇ ಕಾಂಗ್ರೆಸ್-ಶಿವಸೇನಾ(ಯುಬಿಟಿ) ಹಾಗೂ ಎನ್‌ಸಿಪಿ(ಶರದ್ ಪವಾರ್) ಪಕ್ಷಗಳನ್ನು ಒಳಗೊಂಡ ಎಂವಿಎ ಪೈಕಿ ಯಾವುದೇ ಮೈತ್ರಿಕೂಟಕ್ಕೆ ಬಹುಮತ ಲಭಿಸಿದರೂ, ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ಯಾರು ಎಂಬುದನ್ನು ನಿರ್ಧರಿಸುವ ಅಂಶಗಳು ಯಾವವು ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ.

ಸಂಖ್ಯಾ ಬಾಹುಳ್ಯವೇ, ಸ್ಟ್ರೈಕ್ ರೇಟ್ ಇಲ್ಲವೇ ನಿಷ್ಠೆ ಮಾನದಂಡದ ಆಧಾರದಲ್ಲಿ ಮುಖ್ಯಮಂತ್ರಿ ಆಯ್ಕೆ ನಡೆಯಲಿದೆ ಎಂಬ ಪ್ರಶ್ನೆಗಳು ಕೇಳಿ ಬರುತ್ತಿವೆ.


ಇನ್ನೊಂದೆಡೆ, ಫಲಿತಾಂಶದ ನಂತರ ಮಹಾರಾಷ್ಟ್ರವು ಮತ್ತಷ್ಟು 'ರಾಜಕೀಯ ಮರುಹೊಂದಾಣಿಕೆ'ಗೆ ಸಾಕ್ಷಿಯಾಗಲಿದೆಯೇ ಎಂಬ ಪ್ರಶ್ನೆಯೂ ಉದ್ಭವವಾಗಿದೆ.

ಲೆಕ್ಕಾಚಾರ: ಒಂದು ವೇಳೆ ಪಕ್ಷವು ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಿದಲ್ಲಿ, ಮಿತ್ರ ಪಕ್ಷಗಳಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಲು ಬಿಜೆಪಿ ನಾಯಕತ್ವ ಸಿದ್ಧವಿಲ್ಲ ಎನ್ನಲಾಗುತ್ತಿದೆ.

ಪಕ್ಷದ ಕಾರ್ಯಕರ್ತರು ಹಾಗೂ ಹಲವು ಮುಖಂಡರು, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೇ ಮುಖ್ಯಮಂತ್ರಿಯಾಗಬೇಕು ಎಂಬ ಒಲವು ವ್ಯಕ್ತಪಡಿಸಿದ್ದಾರೆ.

'ಮಹಾಯುತಿ'ಯ ಭಾಗವಾಗಿರುವ ಶಿವಸೇನಾ(ಶಿಂದೆ ಬಣ)ದ ನಾಯಕ, ಹಾಲಿ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಎರಡನೇ ಅವಧಿಗೆ ಸಿ.ಎಂ ಕುರ್ಚಿ ಏರುವ ಬಯಕೆ ಹೊಂದಿದ್ದಾರೆ. ಎಂವಿಎ ಅಂಗಪಕ್ಷ ಶಿವಸೇನಾ(ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

ಷೇರುಪೇಟೆ ವಹಿವಾಟು 1961



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,349
ಇಂದಿನ ಅಂತ್ಯ	23,907
▲	557
ದಿನದ ಗರಿಷ್ಠ	23,956

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹78
ಮೈಸೂರು	
100ಕ್ಕೆ	₹597

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹370-610
ದ್ವಿತಳಿ (ಬಿ.ವಿ)	₹403-735

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹176
ಗುಡ್ ಲಾಟ್	₹171

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹19500
ಎಸಿ	₹11200
ಆರ್‌ಪಿ	₹19000
ಆರ್‌ಸಿ	₹10860

ಕೇಂದ್ರ ಸರ್ಕಾರದ ನೆರವು ಕೇಳಿದ ಕ್ಯಾಂಪ್ಕೊ

ಅಡಿಕೆ ಕ್ಯಾನ್ಸರ್‌ಕಾರಕ: ನಿರ್ಣಯ ಮರುಪರಿಶೀಲನೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ



ಮಂಗಳೂರು: ಅಡಿಕೆ ಕ್ಯಾನ್ಸರ್‌ಕಾರಕ ಎಂಬ ನಿರ್ಣಯ ಏಕಪಕ್ಷೀಯವಾಗಿದ್ದು, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮರುಪರಿಶೀಲಿಸಬೇಕು ಎಂದು ಕ್ಯಾಂಪ್ಕೊ ಒತ್ತಾಯಿಸಿದೆ.

ಈ ಸಂಬಂಧ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್), ನವದೆಹಲಿಯ ಭಾರತೀಯ ಕೃಷಿ ಮಂಡಳಿ (ಐಸಿಎಆರ್), ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಅಥವಾ ಭಾರತೀಯ ವಿಜ್ಞಾನ ಸಂಸ್ಥೆಯಂತಹ ಸರ್ಕಾರಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅಧ್ಯಯನ ನಡೆಸಿ ವರದಿ ಮಂಡಿಸಲು ಸಹಕಾರ ನೀಡಬೇಕು ಎಂದು ಕೇಂದ್ರ ಸರ್ಕಾರವನ್ನು ವಿನಂತಿಸಿದೆ.

ಅಡಿಕೆಯು ಆಯುರ್ವೇದೀಯ ಗುಣಗಳನ್ನು ಹೊಂದಿದ್ದರೂ, ಅದು ಕ್ಯಾನ್ಸರ್‌ಕಾರಕವೆಂದು ವಿಶ್ವ ಆರೋಗ್ಯ ಸಂಸ್ಥೆ ಏಕಪಕ್ಷೀಯ ನಿರ್ಣಯ ಮಾಡಿದೆ. ಪುರಾತನ ಕಾಲದಿಂದಲೂ ಅಡಿಕೆಯು ಭಾರತೀಯ ಸಂಸ್ಕೃತಿಯಲ್ಲಿ ಪವಿತ್ರ ಸ್ಥಾನ ಪಡೆದಿದೆ ಎಂದು ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್‌ಕುಮಾರ್ ಕೊಡ್ಗಿ ಹೇಳಿದ್ದಾರೆ.

> **ಅಡಿಕೆ ಕ್ಯಾನ್ಸರ್‌ಕಾರಕವಲ್ಲ. ಆರೋಗ್ಯಕ್ಕೂ ಹಾನಿ ಆಗಲ್ಲ ಎಂಬ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿ ವರದಿ ನೀಡಲು ರಾಜ್ಯ ಸರ್ಕಾರ ಮುಂದಾಗಬೇಕು**
> **ವಿಶ್ವೇಶ್ವರ ಹೆಗಡೆ ಕಾಗೇರಿ,** ಸಂಸದ

ಔಷಧೀಯ ಗುಣ ಹೊಂದಿದ ಕಾರಣಕ್ಕೆ ಆಯುರ್ವೇದ ಶಾಸ್ತ್ರದಲ್ಲಿಯೂ ವಿಶೇಷ ಸ್ಥಾನವಿದೆ. ಅಡಿಕೆ, ಕಫ ಮತ್ತು ಪಿತ್ತದ ಸಮಸ್ಯೆ ಶಮನಗೊಳಿಸುವ ಮತ್ತು ಜೀರ್ಣಕ್ರಿಯೆ ಉದ್ದೀಪನಗೊಳಿಸುವ ಗುಣ ಹೊಂದಿದೆ. ಆದರೆ, ಡಬ್ಲ್ಯುಎಚ್‌ಒ ನೀಡಿರುವ ವರದಿ ಅಡಿಕೆ ಬೆಳೆಗಾರರನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ ಎಂದು ತಿಳಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯ ಅಂಗಸಂಸ್ಥೆಯಾಗಿರುವ ಇಂಟರ್ ನ್ಯಾಷನಲ್ ಏಜೆನ್ಸಿ ಫಾರ್ ರಿಸರ್ಚ್ ಆ್ಯಂಡ್ ಕ್ಯಾನ್ಸರ್ (ಐಎಆರ್‌ಸಿ) ವರದಿಯು ಸಂಶೋಧನೆಯ ಪೂರ್ಣ ಮಾಹಿತಿ ಬಹಿರಂಗಪಡಿಸಿಲ್ಲ. ಹೀಗಾಗಿ, ಸತ್ಯ ಮುಚ್ಚಿಟ್ಟಿರಬಹುದು ಅಥವಾ ವರದಿ ತಿರುಚಿರಬಹುದೆಂಬ ಸಂಶಯ ಮೂಡುತ್ತದೆ ಎಂದು ಹೇಳಿದ್ದಾರೆ.

ಕ್ಯಾಂಪ್ಕೊ ಈಗಾಗಲೇ ಹಲವು ಸಂಶೋಧನೆಗಳನ್ನು ನಡೆಸಿದ್ದು, ಎಲ್ಲ ವರದಿಗಳು ಅಡಿಕೆ ಕ್ಯಾನ್ಸರ್ ಕಾರಕವಲ್ಲ. ಬದಲಾಗಿ ರೋಗಶಮನಗೊಳಿಸುವ ಔಷಧೀಯ ಗುಣ ಹೊಂದಿರುವ ಬಗ್ಗೆ ದೃಢಪಡಿಸಿವೆ. ಅನೇಕ ಸಂಸ್ಥೆಗಳು ಸಹ ಸಂಶೋಧನೆ ನಡೆಸಿ, ಅಡಿಕೆಯಲ್ಲಿರುವ ಔಷಧೀಯ ಗುಣಗಳನ್ನು ತಿಳಿಸಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ವಿಜ್ಞಾನಿ ಸೌಮ್ಯಾ ಸ್ವಾಮಿನಾಥನ್ ಅವರನ್ನು ಭೇಟಿ ಮಾಡಿ ಚರ್ಚಿಸಿದಾಗ, ಐಸಿಎಂಆರ್ ಮತ್ತು ಐಸಿಎಆರ್ ಸಂಶೋಧನೆ ನಡೆಸಿ, ಅಡಿಕೆ ಕ್ಯಾನ್ಸರ್ ಕಾರಕ ಎಂಬ ವಾದವನ್ನು ಸಮರ್ಥವಾಗಿ ಪ್ರಶ್ನಿಸುವಂತೆ ಸಲಹೆ ನೀಡಿದ್ದಾರೆ ಎಂದು ಹೇಳಿದ್ದಾರೆ.

ಟೊಮೆಟೊ ವೈನ್ ತಯಾರಿಕೆ

ಮೌಲ್ಯವರ್ಧನೆ: 28 ನವೋದ್ಯಮಗಳಿಗೆ ನೆರವು– ಕೇಂದ್ರ

ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಯಲ್ಲಿನ ದರ ಏರಿಳಿತದಿಂದ ಟೊಮೆಟೊ ಬೆಳೆಗಾರರು ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ, ಟೊಮೆಟೊದಿಂದ ವೈನ್ ತಯಾರಿಕೆ ಸೇರಿದಂತೆ ಹೆಚ್ಚಿನ ಮೌಲ್ಯವರ್ಧನೆ ಮೂಲಕ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ.



ಸಂಸ್ಕರಣಾ ಹಂತದಲ್ಲಿ ಟೊಮೆಟೊ ಪೂರೈಕೆಯನ್ನು ಸದೃಢಗೊಳಿಸುವ ಮೂಲಕ ವ್ಯಾಪಾರವನ್ನು ಉತ್ತಮಪಡಿಸಲಾಗುವುದು. ಮೌಲ್ಯವರ್ಧನೆಗೆ ಮುಂದಾಗಿರುವ 28 ನವೋದ್ಯಮಗಳಿಗೆ ಆರ್ಥಿಕ ನೆರವು ನೀಡಲಾಗುವುದು ಎಂದು ಹೇಳಿದೆ.

ಬೆಲೆ ಏರಿಕೆಗೆ ಕಡಿವಾಣ ಹಾಕಲು ಕಳೆದ ವರ್ಷದ ಜೂನ್‌ನಲ್ಲಿ 'ಟೊಮೆಟೊ ಗ್ರ್ಯಾಂಡ್ ಚಾಲೆಂಜ್'ಗೆ (ಟಿಜಿಸಿ) ಚಾಲನೆ ನೀಡಲಾಗಿತ್ತು. ಟೊಮೆಟೊ ಪೂರೈಕೆ ಸರಪಳಿ ಸದೃಢಗೊಳಿಸುವಿಕೆ, ಗ್ರಾಹಕರಿಗೆ ಕೈಗೆಟುಕುವ ಬೆಲೆಯಲ್ಲಿ ಸರಕು ದೊರೆಯುವಂತೆ ಮಾಡುವುದು ಹಾಗೂ ಬೆಳೆಗಾರರ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ ಎಂದು ವಿವರಿಸಿದೆ.

'ಕೇಂದ್ರ ಶಿಕ್ಷಣ ಸಚಿವಾಲಯದ (ನಾವೀನ್ಯ ಕೋಶ) ಸಹಭಾಗಿತ್ವದಡಿ ಗ್ರಾಹಕ ವ್ಯವಹಾರಗಳ ಸಚಿವಾಲಯವು ಈ ಟಿಜಿಸಿ ರೂಪಿಸಿತ್ತು. ಮೌಲ್ಯವರ್ಧನೆ ಬಗ್ಗೆ ಹೊಸ ಕಲ್ಪನೆಗಳನ್ನು ಮಂಡಿಸಲು ವಿದ್ಯಾರ್ಥಿಗಳು, ಸಂಶೋಧನಾ ಸಂಸ್ಥೆಗಳು, ನವೋದ್ಯಮಗಳಿಗೆ ಆಹ್ವಾನ ನೀಡಲಾಗಿತ್ತು' ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

'ಒಟ್ಟು 1,376 ಹೊಸ ಕಲ್ಪನೆಗಳನ್ನು ಸ್ವೀಕರಿಸಲಾಗಿತ್ತು. ಈ ಪೈಕಿ 423 ಯೋಜನೆಗಳನ್ನು ಆಯ್ಕೆ ಮಾಡಲಾಗಿತ್ತು. ಅಂತಿಮವಾಗಿ 28 ನವೋದ್ಯಮಗಳು ಮಂಡಿಸಿರುವ ಯೋಜನೆಗಳ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ. ಈ ಪೈಕಿ 14 ನವೋದ್ಯಮಗಳು ಪೇಟೆಂಟ್ ಹೊಂದಿವೆ' ಎಂದು ತಿಳಿಸಿದ್ದಾರೆ.

ಸಚಿವಾಲಯವು ಈ ನವೋದ್ಯಮಗಳಿಗೆ ಆರ್ಥಿಕ ನೆರವು ನೀಡಲಿದೆ. ಹೂಡಿಕೆದಾರರ ಭೇಟಿಗೂ ಅವಕಾಶ ಕಲ್ಪಿಸಲಿದೆ. ಇದರಿಂದ ಅವರ ವ್ಯಾಪಾರ ವಹಿವಾಟು ಹೆಚ್ಚಳವಾಗಲಿದೆ ಎಂದು ತಿಳಿಸಿದ್ದಾರೆ.

ಭಾರತದಲ್ಲಿ ವಾರ್ಷಿಕ 20 ದಶಲಕ್ಷ ಟನ್ ಟೊಮೆಟೊ ಬೆಳೆಯಲಾಗುತ್ತದೆ.

ಮಿರ್ ಗ್ರೂಪ್: ₹1,500 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಟಲಿಯ ಮಿರ್ ಗ್ರೂಪ್ ಮಂಗಳೂರು ವಿಶೇಷ ಆರ್ಥಿಕ ವಲಯದಲ್ಲಿ (ಎಂಎಸ್‌ಇಝಡ್) ಘಟಕ ತೆರೆಯಲು ಮುಂದಾಗಿದೆ.

ಶುಕ್ರವಾರ ನಡೆದ ಸಮಾರಂಭದಲ್ಲಿ ಈ ಕುರಿತ ಒಪ್ಪಂದ ಪತ್ರಗಳನ್ನು ಎಂಎಸ್‌ಇಝಡ್ ಲಿಮಿಟೆಡ್ ಸಿಇಒ ಸೂರ್ಯನಾರಾಯಣ ವಿ. ಮತ್ತು ಮಿರ್ ಗ್ರೂಪ್ ಸಿಇಒ ರಫಾಲೆ ಮೊರಾರ್ಝೊ ವಿನಿಮಯ ಮಾಡಿಕೊಂಡರು.



ಘಟಕ ಸ್ಥಾಪನೆಗೆ ಸಂಬಂಧಿಸಿದ ದಾಖಲೆಗಳನ್ನು ಇಟಲಿಯ ಮಿರ್ ಗ್ರೂಪ್ ಸಿಇಒ ರಫಾಲೆ ಮೊರಾರ್ಝೊ ಮತ್ತು ಎಸ್‌ಇಝಡ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೂರ್ಯನಾರಾಯಣ ವಿನಿಮಯ ಮಾಡಿಕೊಂಡರು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಮಿರ್ ಗ್ರೂಪ್ ಕಾರ್ಯನಿರ್ವಾಹಕ ನಿರ್ದೇಶಕ ನಿತಿಕ್ ರತ್ನಾಕರ್, ರತನ್ ಹಾಗೂ ಮಿರ್ ಗ್ರೂಪ್ ಕಾನೂನು ವಿಭಾಗದ ಮುಖ್ಯಸ್ಥ ಕ್ಲಾಡಿಯೊ ಪಾಲ್ಗೊಂಡಿದ್ದರು

ಸಭೆಯ ನಂತರ ಪತ್ರಕರ್ತರ ಜೊತೆಗೆ ಮಾತನಾಡಿದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ₹1,500 ಕೋಟಿ ಮೊತ್ತದ ಹೂಡಿಕೆಗೆ ಮಿರ್ ಗ್ರೂಪ್ ಮುಂದಾಗಿದೆ. ನೇರವಾಗಿ 500 ಮಂದಿಗೆ ಉದ್ಯೋಗ ಸಿಗುವ ಸಾಧ್ಯತೆ ಇದೆ. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿದ 'ಬ್ಯಾಕ್ ಟು ಊರು' ಚಿಂತನೆಯ ಮೊದಲ ಯೋಜನೆ ಇದಾಗಿದೆ. ತಾವು ಮತ್ತು ಮಿರ್ ಗ್ರೂಪ್ ಪ್ರತಿನಿಧಿಗಳು ಶನಿವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡುತ್ತೇವೆ ಎಂದು ತಿಳಿಸಿದರು.

ಸೂರ್ಯನಾರಾಯಣ ಮಾತನಾಡಿ, ಕಟ್ಟಡ ನಿರ್ಮಾಣ ಮತ್ತು ವಿನ್ಯಾಸಕ್ಕೆ ಸಂಬಂಧಿಸಿದ ಸಾಮಗ್ರಿಗಳ ಉತ್ಪಾದನೆಗೆ ಮಿರ್ ಗ್ರೂಪ್ ಮುಂದಾಗಿದೆ ಎಂದರು.

ಇಲ್ಲಿಯವರೆಗೆ ಮಂಗಳೂರು ವಿಶೇಷ ಆರ್ಥಿಕ ವಲಯದಿಂದ (ಎಂಎಸ್‌ಇಝಡ್) ₹50 ಸಾವಿರ ಕೋಟಿ ಮೊತ್ತದ ಉತ್ಪನ್ನಗಳು ರಫ್ತು ಆಗಿವೆ. ಎಂಎಸ್‌ಇಝಡ್‌ನಲ್ಲಿ ಸದ್ಯ 900 ಎಕರೆ ಪ್ರದೇಶದಲ್ಲಿ 10 ಕಂಪನಿಗಳು ಇದ್ದು ಇನ್ನೂ 160 ಎಕರೆ ಜಾಗ ಉಳಿದಿದೆ. ಅದರಲ್ಲಿ 60 ಎಕರೆ ಜಾಗವನ್ನು ಗ್ರೀನ್ ಹೈಡ್ರೋಜನ್ ಉತ್ಪಾದಿಸುವ ಕಂಪನಿಗಳಿಗೆ ಮೀಸಲಿಡಲಾಗುವುದು ಎಂದರು.

'70 ಎಕರೆ ಪ್ರದೇಶದಲ್ಲಿ ಒಎನ್‌ಜಿಸಿ ಘಟಕ ತೆರೆಯಲಿದ್ದು ಗೇಲ್‌ನ ಮಂಗಳೂರು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಜಿಎಂಪಿಎಲ್) ಮುಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಕಾರ್ಯಾರಂಭ ಮಾಡಲಿದೆ' ಎಂದು ವಿವರಿಸಿದರು.

ಸಂಕ್ಷಿಪ್ತ ಸುದ್ದಿ

ಓಲಾದ 500 ನೌಕರರು ವಜಾ

ನವದೆಹಲಿ (ಪಿಟಿಐ): ವಿದ್ಯುತ್‌ಚಾಲಿತ ವಾಹನ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, 500 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಕಂಪನಿಯಲ್ಲಿ ಅಗತ್ಯಕ್ಕಿಂತ ಹೆಚ್ಚಿರುವ ಉದ್ಯೋಗದ ಕಡಿತಕ್ಕೆ ಕ್ರಮವಹಿಸಲಾಗಿದೆ. ಜುಲೈನಿಂದಲೇ ಈ ಪ್ರಕ್ರಿಯೆ ಆರಂಭವಾಗಿದ್ದು, ಈ ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ. ಕಂಪನಿಯ ಇ-ಸ್ಕೂಟರ್‌ಗಳ ಮಾರಾಟ ಕಡಿಮೆಯಾಗಿದೆ. ಇದರಿಂದ ಲಾಭದ ಪ್ರಮಾಣವು ತಗ್ಗಿದೆ. ವೆಚ್ಚ ಸರಿದೂಗಿಸುವ ಉದ್ದೇಶಕ್ಕೆ ಕಂಪನಿಯ ಎಲ್ಲಾ ಹಂತದಲ್ಲಿ ಇರುವ ಹೆಚ್ಚುವರಿ ಉದ್ಯೋಗಿಗಳನ್ನು ವಜಾಗೊಳಿಸಲು ಮುಂದಾಗಿದೆ ಎಂದು ಹೇಳಿವೆ.

ಚಿನ್ನ: 10 ಗ್ರಾಂಗೆ ₹1,100 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,100 ಏರಿಕೆಯಾಗಿದ್ದು, ₹80,400 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ, ₹80 ಸಾವಿರ ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹300 ಏರಿಕೆಯಾಗಿ, ₹93,300ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಉಕ್ರೇನ್: ಸಂಸತ್ ಕಲಾಪ ರದ್ದು

ಕೀವ್ (ಎಪಿ): ರಷ್ಯಾವು ನೂತನ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ನಡೆಸಿದ ನಂತರ ಭದ್ರತೆಯನ್ನು ಬಿಗಿಗೊಳಿಸಿದ ಕಾರಣದಿಂದ ಶುಕ್ರವಾರ ನಡೆಯಬೇಕಿದ್ದ ಉಕ್ರೇನ್ ಸಂಸತ್‌ನ ಕಲಾಪವನ್ನು ರದ್ದು ಮಾಡಲಾಯಿತು.

ಉಕ್ರೇನ್ ದೂರಗಾಮಿ ಕ್ಷಿಪಣಿ ದಾಳಿಗೆ ಪ್ರತಿಯಾಗಿ ರಷ್ಯಾ ಗುರುವಾರ ಉಕ್ರೇನ್‌ನ ಡಿನಿಪ್ರೊ ನಗರದ ಮೂಲ ಸೌಕರ್ಯಗಳನ್ನು ಗುರಿಯಾಗಿಸಿ ಮಧ್ಯಮ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿ ನಡೆಸಿತ್ತು.

ರಷ್ಯಾ ಪ್ರಯೋಗಿಸಿದ್ದ ಕ್ಷಿಪಣಿಯು, ಆರ್‌ಎಸ್-26 ರುಬೇಝ್ ಇಂಟರ್ ಕಾಂಟಿನೆಂಟಲ್ ಬ್ಯಾಲಿಸ್ಟಿಕ್ ಕ್ಷಿಪಣಿ ಆಧರಿಸಿದ ಪ್ರಾಯೋಗಿಕ ಮಧ್ಯಮ ವ್ಯಾಪ್ತಿಯ ಕ್ಷಿಪಣಿಯಾಗಿದೆ ಎಂದು ಅಮೆರಿಕದ ರಕ್ಷಣಾ ಇಲಾಖೆ 'ಪೆಂಟಗಾನ್' ದೃಢಪಡಿಸಿದೆ.


ಸುದ್ದಿ 2 ನಿಮಿಷ

ಸೆನ್ಸೆಕ್ಸ್ 1,961 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಗೂಳಿಯ ನಾಗಾಲೋಟದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ.

ದೇಶೀಯ ಸಾಂಸ್ಥಿಕ ಹೂಡಿಕೆದಾರರು ಹೆಚ್ಚು ಷೇರುಗಳನ್ನು ಖರೀದಿಸಿದ್ದರಿಂದ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಹೂಡಿಕೆದಾರರ ಸಂಪತ್ತು ₹7.32 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,961 ಅಂಶ ಏರಿಕೆ ಕಂಡು, 79,117 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 2,062 ಅಂಶ ಏರಿಕೆ ಕಂಡಿತ್ತು.



ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 557 ಅಂಶ ಏರಿಕೆ ಕಂಡು, 23,907 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ಲಾ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಿಸಿಎಸ್, ಟೈಟನ್, ಐಟಿಸಿ, ಇನ್ಫೊಸಿಸ್, ಎಲ್ ಆ್ಯಂಡ್ ಟಿ, ರಿಲಯನ್ಸ್ ಇಂಡಸ್ಟ್ರೀಸ್, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,320 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹4,200 ಕೋಟಿ ಮೌಲ್ಯದ ಷೇರು ಖರೀದಿಸಿದ್ದಾರೆ.

ರೂಪಾಯಿ ಮೌಲ್ಯ 9 ಪೈಸೆ ಏರಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 9 ಪೈಸೆ ಏರಿಕೆಯಾಗಿದ್ದು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹84.41 ಆಗಿದೆ.

ಅದಾನಿ ಸಮೂಹದ 6 ಕಂಪನಿ ಷೇರಿನ ಮೌಲ್ಯ ಚೇತರಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ 10 ಕಂಪನಿಗಳ ಪೈಕಿ ಆರು ಕಂಪನಿಗಳ ಷೇರಿನ ಮೌಲ್ಯವು ಶುಕ್ರವಾರ ಚೇತರಿಕೆ ಕಂಡಿದೆ.

ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಂಗ ಇಲಾಖೆ ಮತ್ತು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಕಮಿಷನ್ (ಎಸ್‌ಇಸಿ) ಲಂಚದ ಆರೋಪ ಮಾಡಿದ್ದರಿಂದ ಗುರುವಾರದ ವಹಿವಾಟಿನಲ್ಲಿ ಕುಸಿತ ಕಂಡಿದ್ದವು.

ಅಂಬುಜಾ ಸಿಮೆಂಟ್ಸ್ ಶೇ 3.50, ಎಸಿಸಿ ಶೇ 3.17, ಅದಾನಿ ಎಂಟರ್‌ಪ್ರೈಸಸ್ ಶೇ 2.16, ಅದಾನಿ ಪೋರ್ಟ್ಸ್ ಶೇ 2.05, ಅದಾನಿ ಟೋಟಲ್ ಗ್ಯಾಸ್ ಶೇ 1.18, ಎನ್‌ಡಿಟಿವಿ ಷೇರಿನ ಮೌಲ್ಯದಲ್ಲಿ ಶೇ 0.65ರಷ್ಟು ಏರಿಕೆಯಾಗಿದೆ.

ಅದಾನಿ ಗ್ರೀನ್ ಎನರ್ಜಿ ಶೇ 8.20, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 6.92, ಅದಾನಿ ಪವರ್ ಶೇ 3.23 ಹಾಗೂ ಅದಾನಿ ವಿಲ್ಮರ್ ಷೇರಿನ ಮೌಲ್ಯದಲ್ಲಿ ಶೇ 0.73ರಷ್ಟು ಇಳಿಕೆಯಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಶಿವಮೊಗ್ಗ			
ಚಾಲಿ	33090-36420	ಬೆಟ್ಟೆ	48599-57419	ಕೋಕ	20009-27899
ಚಿಪ್ಪು	22009-27089	ಗೊರಬಲು	17510-32199	ಕೆಂಪುಗೋಟು	20119-26019
ಕೋಕ	6049-23019	ಹೊಸತು	47069-49809	ರಾಶಿ	42099-46959
ಫ್ಯಾಕ್ಟರಿ	4009-19279	ರಾಶಿ	41009-50049	ತಟ್ಟಿಬೆಟ್ಟೆ	26019-33709
ಹಳೆಚಾಲಿ	36319-39499	ಸರಕು	55199-89999	ಶಿರಸಿ	
ಹೊಸಚಾಲಿ	21019-26589	ಸಿದ್ದಾಪುರ		ಬೆಟ್ಟೆ	27019-35009
ಪುತ್ತೂರು		ಬಿಳಿಗೋಟು	24619-27599	ಬಿಳಿಗೋಟು	25300-30599
ಹೊಸತು	25000-33500	ಚಾಲಿ	32889-36409	ಚಾಲಿ	34298-37811
ಹಳತು	36000-48000			ರಾಶಿ	41599-46689

ಅಪರಾಧ ಚಟುವಟಿಕೆ: ಮೋದಿ, ಜೈಶಂಕರ್, ಡೊಭಾಲ್ ಪಾತ್ರ ಅಲ್ಲಗಳೆದ ಕೆನಡಾ

ಒಟ್ಟಾವಾ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಸೇರಿದಂತೆ ಕೆನಡಾದ ಕೆಲ ಅಪರಾಧ ಚಟುವಟಿಕೆಗಳಿಗೆ ಸಂಚು ರೂಪಿಸುವಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರ ಪಾತ್ರವಿದೆ ಎಂದು ಆರೋಪಿಸಿ ಪ್ರಕಟವಾಗಿರುವ ಅಲ್ಲಿನ ಮಾಧ್ಯಮ ವರದಿಯನ್ನು ಕೆನಡಾ ಸರ್ಕಾರ ತಳ್ಳಿಹಾಕಿದೆ.

ವರದಿಯು ಊಹಾತ್ಮಕವಾಗಿದ್ದು, ನಿಖರವಾಗಿಲ್ಲ ಎಂದು ಅದು ಹೇಳಿದೆ.

ಈ ವರದಿಯು ಸುಳ್ಳು ಆರೋಪಗಳ ಮೂಲಕ ಕಳಂಕ ಹಚ್ಚುವ ಅಭಿಯಾನದಂತಿದೆ ಎಂದು ಭಾರತ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಬೆನ್ನಲ್ಲೇ, ಕೆನಡಾ ಪ್ರಧಾನಿಯ ರಾಷ್ಟ್ರೀಯ ಭದ್ರತೆ ಮತ್ತು ಗುಪ್ತಚರ ಸಲಹೆಗಾರ ನಥಾಲಿ ಜಿ ಡ್ರೂಯಿನ್ ಪ್ರತಿಕ್ರಿಯೆ ನೀಡಿದ್ದಾರೆ.

ನಿಜ್ಜರ್ ಹತ್ಯೆ ಮತ್ತು ಇತರ ಹಿಂಸಾತ್ಮಕ ಕೃತ್ಯಗಳ ಸಂಚಿನ ಬಗ್ಗೆ ಪ್ರಧಾನಿ ಮೋದಿ ಅವರಿಗೆ ತಿಳಿದಿತ್ತು ಎಂದು ಕೆನಡಾದ ಭದ್ರತಾ ಏಜೆನ್ಸಿಗಳು ನಂಬುತ್ತವೆ ಎಂದು ಕೆನಡಾದ ರಾಷ್ಟ್ರೀಯ ಭದ್ರತಾ ಅಧಿಕಾರಿಯ ಹೆಸರನ್ನು ಉಲ್ಲೇಖಿಸದೇ 'ದಿ ಗ್ಲೋಬ್ ಮತ್ತು ಮೇಲ್' ಪತ್ರಿಕೆ ಮಂಗಳವಾರ ವರದಿ ಮಾಡಿತ್ತು.

ಈ ಆರೋಪವನ್ನು ತಳ್ಳಿಹಾಕಿರುವ ಡ್ರೂಯಿನ್, 'ಕೆನಡಾದೊಳಗಿನ ಗಂಭೀರ ಅಪರಾಧ ಚಟುವಟಿಕೆಗಳಿಗೆ ಪ್ರಧಾನಿ ಮೋದಿ, ಸಚಿವ ಜೈಶಂಕರ್ ಅಥವಾ ಎನ್‌ಎಸ್‌ಎ ಡೊಭಾಲ್ ಅವರ ಸಂಬಂಧವಿದೆಯೆಂದು ಕೆನಡಾ ಸರ್ಕಾರ ಹೇಳಿಲ್ಲ. ಈ ಕುರಿತ ಪುರಾವೆಗಳ ಬಗ್ಗೆಯೂ ತಿಳಿದಿಲ್ಲ' ಎಂದಿದ್ದಾರೆ.

ದೆಹಲಿ: ಸುಧಾರಿಸದ ವಾಯು ಗುಣಮಟ್ಟ

ನವದೆಹಲಿ (ಪಿಟಿಐ): ದೇಶದ ರಾಜಧಾನಿ ದೆಹಲಿಯಲ್ಲಿ ವಾಯು ಗುಣಮಟ್ಟ ತೀವ್ರ ಕಳಪೆ ಹಂತದಲ್ಲಿಯೇ ಮುಂದುವರಿದಿದ್ದು, ಶುಕ್ರವಾರ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) 373 ದಾಖಲಾಗಿತ್ತು. ಅದರ ಜತೆಗೆ ದೆಹಲಿಯಲ್ಲಿ ಕನಿಷ್ಠ ತಾಪಮಾನ 11.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ದೆಹಲಿಯಲ್ಲಿ 38 ಮೇಲ್ವಿಚಾರಣಾ ಕೇಂದ್ರಗಳಲ್ಲಿ ಒಂಬತ್ತರಲ್ಲಿ ಎಕ್ಯೂಐ ತೀವ್ರ ಕಳಪೆ ಹಂತದ ವ್ಯಾಪ್ತಿಯಲ್ಲಿದೆ. ಆನಂದ ವಿಹಾರ್, ಬವಾನಾ, ಜಹಾಂಗಿರ್‌ಪುರಿ, ಮುಂಡ್ಕಾ, ನೆಹರೂ ನಗರ, ಶಾದಿಪುರ, ಸೋನಿಯಾ ವಿಹಾರ್, ವಿವೇಕ್ ವಿಹಾರ್, ವರ್ಜೀಪುರ ತೀವ್ರ ಕಳಪೆ ಹಂತದ ವ್ಯಾಪ್ತಿಯಲ್ಲಿರುವ ಪ್ರದೇಶಗಳಾಗಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂಕಿ ಅಂಶಗಳು ತಿಳಿಸಿವೆ.

ದೆಹಲಿಯಲ್ಲಿ ಭಾನುವಾರದಿಂದ ಗಾಳಿಯ ಗುಣಮಟ್ಟ ತೀವ್ರ ಅಪಾಯಕಾರಿ ಹಂತಕ್ಕೆ ಕುಸಿದಿತ್ತು. ಇದರ ಬೆನ್ನಲ್ಲೇ ಸೋಮವಾರ ಬೆಳಿಗ್ಗೆಯಿಂದ 'ಜಿಆರ್‌ಎಪಿ -4' (ಗ್ರೇಡೆಡ್ ರೆಸ್ಪಾನ್ಸ್ ಆ್ಯಕ್ಷನ್ ಪ್ಲಾನ್) ನಿರ್ಬಂಧಗಳನ್ನು ದೆಹಲಿ ಸರ್ಕಾರ ಜಾರಿಗೊಳಿಸಿದೆ.

> **'ರಾಷ್ಟ್ರೀಯ ತುರ್ತು ಪರಿಸ್ಥಿತಿ ಎಂದು ಪರಿಗಣಿಸಿ'**
>
> ಉತ್ತರ ಭಾರತದ ವಾಯು ಮಾಲಿನ್ಯವನ್ನು ರಾಷ್ಟ್ರೀಯ ತುರ್ತು ಪರಿಸ್ಥಿತಿ ಎಂದು ಪರಿಗಣಿಸುವಂತೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಒತ್ತಾಯಿಸಿದ್ದಾರೆ.
>
> ಈ ಬಿಕ್ಕಟ್ಟನ್ನು ಪರಿಹರಿಸುವ ಕುರಿತು ಮುಂಬರುವ ಸಂಸತ್ ಅಧಿವೇಶನದಲ್ಲಿ ಎಲ್ಲರೂ ಒಟ್ಟಾಗಿ ಚರ್ಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ವಾಯು ಮಾಲಿನ್ಯದ ಬಿಕ್ಕಟ್ಟು ಪರಿಹಾರಕ್ಕೆ ರಾಷ್ಟ್ರ ಮಟ್ಟದಲ್ಲಿ ಸಾಮೂಹಿಕ ಪ್ರಯತ್ನ ನಡೆಯಬೇಕಿದೆ. ಈ ವಿಷಯದಲ್ಲಿ ರಾಜಕೀಯದ ಆಟಗಳಿಂದ ಪ್ರಯೋಜನವಿಲ್ಲ ಎಂದು ಅವರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 22-11-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1490)
ಒಂದು ವಾರದ ಡೆಲಿವರಿ	1475 (1485)
ಪಾಮ್ ವಾರದ ಡೆಲಿವರಿ	1338 (1368)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1345)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ **₹77,350** (76,550)

ಬೆಳ್ಳಿ ಕೆ.ಜಿ **₹90,600** (90,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	84.41
£ ಪೌಂಡ್	105.65
€ ಯುರೊ	87.85
¥ ಯೆನ್ (100ಕ್ಕೆ)	55

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1470 (1480)
ಸೋಯಾ (ರಿಫೈನ್ಡ್)	₹1325 (1330)
ಸೂರ್ಯಕಾಂತಿ (ರಿಫೈನ್ಡ್)	₹1400 (1400)
ಪಾಮೋಲಿನ್	₹1340 (1370)

ಅಟಾರ್ನಿ ಜನರಲ್ ಆಗಿ ಪಾಮ್ ಬಾಂಡಿ ನೇಮಕ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಫ್ಲಾರಿಡಾದ ಅಟಾರ್ನಿ ಜನರಲ್ ಪಮ್ ಬಾಂಡಿ ಅವರನ್ನು ಅಟಾರ್ನಿ ಜನರಲ್ ಹುದ್ದೆಗೆ ನಾಮನಿರ್ದೇಶನ ಮಾಡಿದ್ದಾರೆ.

ಇದಕ್ಕೂ ಮುನ್ನ ಮ್ಯಾಟ್ ಗೇಟ್ಜ್ ಅವರನ್ನು ಆಯ್ಕೆ ಮಾಡಿದ್ದರು. ಆದರೆ, ಅವರ ವಿರುದ್ಧ ಲೈಂಗಿಕ ದುರ್ನಡತೆ ಆರೋಪ ಕೇಳಿಬಂದ ನಂತರ ಅವರು ಹಿಂದೆ ಸರಿದಿದ್ದರು.

ಈ ಬೆನ್ನಲ್ಲೇ ಬಾಂಡಿ ಅವರನ್ನು ನಾಮನಿರ್ದೇಶನ ಮಾಡಿದ್ದಾರೆ.

'ಬಾಂಡಿ ಅವರು ಸುಮಾರು 20 ವರ್ಷಗಳ ಕಾಲ ಪ್ರಾಸಿಕ್ಯೂಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಫ್ಲಾರಿಡಾದ ಅಟಾರ್ಜಿ ಜನರಲ್ ಆದ ನಂತರ ಮಾದಕವಸ್ತುಗಳ ಕಳ್ಳಸಾಗಣೆ ತಡೆಗೆ ಕ್ರಮ ಕೈಗೊಂಡು ವ್ಯಸನಿಗಳ ಸಾವಿನ ಪ್ರಮಾಣವನ್ನು ತಗ್ಗಿಸಿದ್ದರು' ಎಂದು ಟ್ರಂಪ್ ಹೇಳಿದ್ದಾರೆ.

'ನ್ಯಾಯಾಂಗ ಇಲಾಖೆಯನ್ನು ನನ್ನ ಮತ್ತು ರಿಪಬ್ಲಿಕನ್‌ಗಳ ವಿರುದ್ಧದ ಅಸ್ತ್ರವಾಗಿ ಇನ್ನುಮುಂದೆ ಬಳಸಲು ಸಾಧ್ಯವಿಲ್ಲ' ಎಂದು ಅವರು ಹೇಳಿದ್ದಾರೆ.



ಮೊದಲ ಟೆಸ್ಟ್‌ನ ಆರಂಭಿಕ ದಿನವೇ 17 ವಿಕೆಟ್‌ಗಳ ಪತನ • ಪದಾರ್ಪಣೆ ಪಂದ್ಯದಲ್ಲೇ ಗಮನ ಸೆಳೆದ ನಿತೀಶ್, ಹರ್ಷಿತ್

ಆಸ್ಟ್ರೇಲಿಯಾಕ್ಕೆ ಬೂಮ್ರಾ ಪಡೆ ತಿರುಗೇಟು

• ಮಧು ಜವಳಿ

ಪರ್ತ್: ಆಸ್ಟ್ರೇಲಿಯಾದಂಥ ಶ್ರೇಷ್ಠ ವೇಗದ ಪಡೆಯೆದುರು ಭಾರತದ ಬ್ಯಾಟಿಂಗ್ ಉತ್ತಮವಾಗಬೇಕಾದರೆ, ವಿರಾಟ್ ಕೊಹ್ಲಿ ತಮ್ಮ ವೈಭವದ ಆಟಕ್ಕೆ ಮರಳಬೇಕು. ಅದಾಗಲಿಲ್ಲ. ಭಾರತ 150 ರನ್ನಿಗೆ ಉರುಳಿತು. ಭಾರತದ ಬೌಲಿಂಗ್ ಪರಿಣಾಮಕಾರಿ ಎನಿಸಬೇಕಾದರೆ ಜಸ್‌ಪ್ರೀತ್ ಬೂಮ್ರಾ ಅವರು ಮಿಂಚಬೇಕು. ಅದು ಈಡೇರಿತು. ಬ್ಯಾಟಿಂಗ್‌ನಲ್ಲಿ ವಿಫಲವಾದರೂ, ಬೌಲಿಂಗ್ ಮೂಲಕ ಭಾರತ ತನ್ನ ಹಿನ್ನಡೆಯನ್ನು ಬಹುತೇಕ ಸರಿದೂಗಿಸಿಕೊಂಡಿತು.

ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯ ಮೊದಲ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ಆಸ್ಟ್ರೇಲಿಯಾ 7 ವಿಕೆಟ್‌ಗೆ 67 ರನ್ ಗಳಿಸಿದ್ದು, ಮೊದಲ ದಿನದ ಕೊನೆಗೆ ಸಂಕಷ್ಟಕ್ಕೆ ಸಿಲುಕಿದೆ. ಒಪ್ಟಸ್ ಕ್ರೀಡಾಂಗಣದಲ್ಲಿ ಮೊದಲ ದಿನವೇ 17 ವಿಕೆಟ್‌ಗಳು ಉರುಳಿದವು.

ಆಸ್ಟ್ರೇಲಿಯಾದ ವೇಗದ ದಾಳಿಯೆದುರು ಭಾರತದ ಇನಿಂಗ್ಸ್ 50 ಓವರುಗಳಲ್ಲಿ ಕೊನೆಗೊಂಡಿತು. ಜೋಶ್ ಹ್ಯಾಜಲ್‌ವುಲ್ (29ಕ್ಕೆ4), ಮಿಚೆಲ್ ಸ್ಟಾರ್ಕ್ (14ಕ್ಕೆ2), ಪ್ಯಾಟ್ ಕಮಿನ್ಸ್ (67ಕ್ಕೆ2) ಮತ್ತು ಮಿಚೆಲ್ ಮಾರ್ಷ್ (12ಕ್ಕೆ2) ಇದಕ್ಕೆ ಕಾರಣರಾದರು.

ಆದರೆ ಇದೇ ಮದ್ದನ್ನು ಪ್ರವಾಸಿ ತಂಡ ತಮಗೂ ಅರೆಯಬಹುದೆಂಬುದು ತಿಳಿಯಲು ಆತಿಥೇಯರಿಗೆ ಹೆಚ್ಚು ಸಮಯ ಹಿಡಿಯಲಿಲ್ಲ. ಬೂಮ್ರಾ (17ಕ್ಕೆ4), ಅನುಕೂಲಕರ ಪಿಚ್‌ನಲ್ಲಿ ಶ್ರೇಷ್ಠ ಮಟ್ಟದಲ್ಲಿ ಬೌಲಿಂಗ್ ಮಾಡಿದರು. ಮೊಹಮ್ಮದ್ ಸಿರಾಜ್ (17ಕ್ಕೆ2) ಕೂಡ ಹಲವು ದಿನಗಳ ನಂತರ ಲಯಕ್ಕೆ ಮರಳಿದರು. ಪದಾರ್ಪಣೆ ಮಾಡಿದ ಹರ್ಷಿತ್ ರಾಣಾ (33ಕ್ಕೆ1) ಕೂಡ ಸಾಮರ್ಥ್ಯ ತೋರಿದರು. ಆದರೆ ಅವರಲ್ಲಿ ಅನುಭವದ ಕೊರತೆಯೂ ಕಂಡಿತು. ಹೀಗಾಗಿ ಸುಲಭ ರನ್‌ಗಳನ್ನೂ ಬಿಟ್ಟುಕೊಟ್ಟರು. ಇದು ಅಲ್ಪಸ್ಕೋರುಗಳ ಪಂದ್ಯದಲ್ಲಿ ನಿರ್ಣಾಯಕ ಕೂಡ. ಔಟ್‌ಫೀಲ್ಡ್ ನಿಧಾನಗತಿಯಲ್ಲಿದ್ದುದೂ ರನ್‌ವೇಗ ಕುಂಠಿತಗೊಳಿಸಿತು.

ನಿರ್ಣಾಯಕ ಮೇಲುಗೈ ತಮಗೆ ದೊರೆತಿದೆ ಎಂದು ಯಾವ ತಂಡವೂ ಹೇಳುವಂತಿರಲಿಲ್ಲ. ಆದರೆ ಭಾರತ ಹೆಚ್ಚು ತೃಪ್ತಿಯಿಂದ ದಿನ ಮುಗಿಸಿತು. ಆಸ್ಟ್ರೇಲಿಯಾ, ಭಾರತದ ಮೊತ್ತಕ್ಕಿಂತ ಇನ್ನೂ 83 ರನ್ ಹಿಂದೆಯಿದೆ. ಅಲೆಕ್ಸ್ ಕ್ಯಾರಿ (ಔಟಾಗದೇ 19) ಜೊತೆಗೆ ಮಿಚೆಲ್ ಸ್ಟಾರ್ಕ್ (ಔಟಾಗದೇ 6) ಕ್ರೀಸ್‌ನಲ್ಲಿದ್ದಾರೆ.

ಭಾರತ ಈ ಪಂದ್ಯಕ್ಕೆ ವಾಷಿಂಗ್ಟನ್ ಸುಂದರ್ ಅವರಿಗೆ ಅವಕಾಶ ನೀಡಲು ಅನುಭವಿ ಸ್ಪಿನ್ನರ್‌ಗಳಾದ ಆರ್.ಅಶ್ವಿನ್ ಮತ್ತು ರವೀಂದ್ರ ಜಡೇಜ (ಇವರಿಬ್ಬರು 850 ವಿಕೆಟ್ ಹಂಚಿಕೊಂಡಿದ್ದಾರೆ) ಅವರನ್ನು ಕೈಬಿಟ್ಟಿತು.

ಪಿಚ್ ಬೌಲರ್‌ಗಳಿಗೆ ಹಿತಕರವಾಗಿದ್ದರೂ, ಬ್ಯಾಟರ್‌ಗಳಿಗೆ ತೀರಾ ನಿರಾಶೆ ಮೂಡಿಸುವ ರೀತಿಯಲ್ಲಿರಲಿಲ್ಲ. ಕೆ.ಎಲ್.ರಾಹುಲ್ (26, 73ಎ) ಮತ್ತು ರಿಷಭ್ ಪಂತ್ (37, 78ಎ) ಮಾತ್ರವಲ್ಲ, ಪದಾರ್ಪಣೆ ಮಾಡಿದ ನಿತೀಶ್ ರೆಡ್ಡಿ (41, 59ಎ) ಅವರು ಇಲ್ಲಿ ವಿವೇಚನೆ ಬಳಸಿದರೆ ರನ್ ಗಳಿಸುವುದು ತೀರಾ ಕಷ್ಟವೇನಲ್ಲ ಎಂದು ತೋರಿಸಿಕೊಟ್ಟರು.

ಜಾಣ್ಮೆಯಿಂದ ಬೌಲಿಂಗ್ ಮಾಡಿದರೆ ಫಲ ಸಿಕ್ಕೇಸಿಗುತ್ತದೆ ಎಂಬುದಕ್ಕೆ ಹೇಜಲ್‌ವುಡ್ ನಿದರ್ಶನವಾದರು. ಅವರು ಕರಾರುವಾಕ್ ಆಗಿದ್ದರು. ಕೊಹ್ಲಿ ಅವರ ವಿಕೆಟ್ ಕೂಡ ಅವರ ಪಾಲಾಯಿತು. ಕ್ರೀಸ್‌ನಿಂದ ಹೊರಗೆ ಇದ್ದ ಕೊಹ್ಲಿ (5, 12ಎ), ಶರವೇಗದ ಎಸೆತವನ್ನು ಬಿಡಲು ಮನಸ್ಸು ಮಾಡಿದರೂ, ಅಷ್ಟರಲ್ಲಿ ಚೆಂಡು ಬ್ಯಾಟಿಗೆ ಮುತ್ತಿಕ್ಕಿ ಮೊದಲ ಸ್ಲಿಪ್‌ನಲ್ಲಿದ್ದ ಉಸ್ಮಾನ್ ಖ್ವಾಜಾ ಕೈಸೇರಿತು.

ದೇವದತ್ತ ಪಡಿಕ್ಕಲ್ (0, 29ಎ) ಅವರು ರಕ್ಷಣಾತ್ಮಕವಾಗಲು ಹೋಗಿ ದಂಡತೆತ್ತರು. ಆಸ್ಟ್ರೇಲಿಯಾದ ಕಡೆ ಮಾರ್ನಸ್ ಲಾಬುಷೇನ್ (2, 52ಎ) ಕಥೆ ಇದಕ್ಕಿಂತ ಭಿನ್ನವಾಗಿರಲಿಲ್ಲ.

ಭಾರತವನ್ನು ಅಲ್ಪಮೊತ್ತಕ್ಕೆ ಉರುಳಿಸಿದ ನಂತರ ಆಸ್ಟ್ರೇಲಿಯಾಕ್ಕೆ ಉತ್ತಮ ಮೊತ್ತ ಗಳಿಸಲು ಸುವರ್ಣಾವಕಾಶವಿತ್ತು. ಆದರೆ ಬೂಮ್ರಾ ನೇತೃತ್ವದ ಬೌಲರ್‌ಗಳ ಪಡೆ ಇದಕ್ಕೆ ಅವಕಾಶ ನೀಡಲಿಲ್ಲ. ಹೀಗಾಗಿ ತಂಡ ದಿನದಾಟದಲ್ಲಿ ಸ್ವಲ್ಪವಾದರೂ ಮೇಲುಗೈ ಸಾಧಿಸಿತು.

ಬಾರ್ಡರ್–ಗಾವಸ್ಕರ್ ಟ್ರೋಫಿ 1996ರಲ್ಲಿ ಆರಂಭವಾದ ನಂತರ, ಮೊದಲ ಬಾರಿ ಈ ದಿಗ್ಗಜರು (ಅಲನ್ ಬಾರ್ಡರ್ ಮತ್ತು ಸುನಿಲ್ ಗಾವಸ್ಕರ್) ಟಾಸ್‌ಗೆ ಮೊದಲು ಟ್ರೋಫಿಯನ್ನು ಮೈದಾನಕ್ಕೆ ತಂದರು.



ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ –ಎಎಫ್‌ಪಿ ಚಿತ್ರಗಳು


ನಿತೀಶ್ ಕುಮಾರ್ ರೆಡ್ಡಿ –ಎಕ್ಸ್ ಚಿತ್ರ


ಜೋಶ್ ಹ್ಯಾಜಲ್‌ವುಡ್

ಸ್ಕೋರ್ ಕಾರ್ಡ್

ಭಾರತ: ಮೊದಲ ಇನಿಂಗ್ಸ್: 150 (49.4 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಮೆಕ್‌ಸ್ವೀನಿ ಬಿ ಸ್ಟಾರ್ಕ್ 0 (8ಎ)
ರಾಹುಲ್ ಸಿ ಕ್ಯಾರಿ ಬಿ ಸ್ಟಾರ್ಕ್ 26 (74ಎ, 4x3)
ಪಡಿಕ್ಕಲ್ ಸಿ ಕ್ಯಾರಿ ಬಿ ಹ್ಯಾಜಲ್‌ವುಡ್ 0 (23ಎ)
ಕೊಹ್ಲಿ ಸಿ ಖ್ವಾಜಾ ಬಿ ಹ್ಯಾಜಲ್‌ವುಡ್ 5 (12ಎ)
ರಿಷಭ್ ಸಿ ಸ್ಮಿತ್ ಬಿ ಕಮಿನ್ಸ್ 37 (78ಎ, 4x3, 6x1)
ಜುರೇಲ್ ಸಿ ಲಾಬುಷೇನ್ ಬಿ ಮಾರ್ಷ್ 11 (20ಎ, 4x2)
ವಾಷಿಂಗ್ಟನ್ ಸಿ ಕ್ಯಾರಿ ಬಿ ಮಾರ್ಷ್ 4 (15ಎ)
ನಿತೀಶ್ ಕುಮಾರ್ ಸಿ ಖ್ವಾಜಾ ಬಿ ಕಮಿನ್ಸ್ 41 (59ಎ, 4x6, 6x1)
ಹರ್ಷಿತ್ ಸಿ ಲಾಬುಷೇನ್ ಬಿ ಹ್ಯಾಜಲ್‌ವುಡ್ 7 (5ಎ, 4x1)
ಬೂಮ್ರಾ ಸಿ ಕ್ಯಾರಿ ಬಿ ಹ್ಯಾಜಲ್‌ವುಡ್ 8 (8ಎ, 6x1)
ಮೊಹಮ್ಮದ್ ಸಿರಾಜ್ ಔಟಾಗದೇ 0 (0ಎ)
ಇತರೆ: 11 (ಬೈ 4, ಲೆಗ್‌ಬೈ 1, ನೋಬಾಲ್ 4, ವೈಡ್ 2)
ವಿಕೆಟ್ ಪತನ: 1-5 (ಯಶಸ್ವಿ ಜೈಸ್ವಾಲ್, 2.1), 2-14 (ದೇವದತ್ತ ಪಡಿಕ್ಕಲ್, 10.6), 3-32 (ವಿರಾಟ್ ಕೊಹ್ಲಿ, 16.2), 4-47 (ಕೆ.ಎಲ್. ರಾಹುಲ್, 22.2), 5-59 (ಧ್ರುವ್ ಜುರೇಲ್, 27.5), 6-73 (ವಾಷಿಂಗ್ಟನ್ ಸುಂದರ್, 31.4), 7-121 (ರಿಷಭ್ ಪಂತ್, 45.5), 8-128 (ಹರ್ಷಿತ್ ರಾಣಾ, 46.4), 9-144 (ಜಸ್‌ಪ್ರೀತ್ ಬೂಮ್ರಾ, 48.6), 10-150 (ನಿತೀಶ್ ಕುಮಾರ್ ರೆಡ್ಡಿ, 49.4)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 11–3–14–2, ಜೋಶ್ ಹ್ಯಾಜಲ್‌ವುಡ್ 13–5–29–4, ಪ್ಯಾಟ್ ಕಮಿನ್ಸ್ 15.4–2–67–2, ನೇಥನ್ ಲಯನ್ 5–1–23–0, ಮಿಚೆಲ್ ಮಾರ್ಷ್ 5–1–12–2
ಆಸ್ಟ್ರೇಲಿಯಾ: 7ಕ್ಕೆ 67 (27 ಓವರ್‌ಗಳಲ್ಲಿ)
ಖ್ವಾಜಾ ಸಿ ಕೊಹ್ಲಿ ಬಿ ಬೂಮ್ರಾ 8 (19ಎ, 4x1)
ಮೆಕ್‌ಸ್ವೀನಿ ಎಲ್‌ಬಿಡಬ್ಲ್ಯು ಬಿ ಬೂಮ್ರಾ 10 (13ಎ, 4x2)
ಲಾಬುಷೇನ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 2 (52ಎ)
ಸ್ಮಿತ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (1ಎ)
ಟ್ರಾವಿಸ್ ಹೆಡ್ ಬಿ ರಾಣಾ 11 (13ಎ, 4x2)
ಮಾರ್ಷ್ ಸಿ ರಾಹುಲ್ ಬಿ ಸಿರಾಜ್ 6 (19ಎ, 4x1)
ಅಲೆಕ್ಸ್ ಕ್ಯಾರಿ ಔಟಾಗದೇ 19 (28ಎ, 4x3)
ಕಮಿನ್ಸ್ ಸಿ ಪಂತ್ ಬಿ ಬೂಮ್ರಾ 3 (5ಎ)
ಮಿಚೆಲ್ ಸ್ಟಾರ್ಕ್ ಔಟಾಗದೇ 6 (14ಎ, 4x1)
ಇತರೆ: 2 (ನೋಬಾಲ್ 2)
ವಿಕೆಟ್ ಪತನ: 1-14 (ನೇಥನ್ ಮೆಕ್‌ಸ್ವೀನಿ, 2.3), 2-19 (ಉಸ್ಮಾನ್ ಖ್ವಾಜಾ, 6.4), 3-19 (ಸ್ಟೀವನ್ ಸ್ಮಿತ್, 6.5), 4-31 (ಟ್ರಾವಿಸ್ ಹೆಡ್, 11.1), 5-38 (ಮಿಚೆಲ್ ಮಾರ್ಷ್, 16.5), 6-47 (ಮಾರ್ನಸ್ ಲಾಬುಷೇನ್, 20.6), 7-59 (ಪ್ಯಾಟ್ ಕಮಿನ್ಸ್, 24.2)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–3–17–4, ಮೊಹಮ್ಮದ್ ಸಿರಾಜ್ 9–6–17–2, ಹರ್ಷಿತ್ ರಾಣಾ 8–1–33–1

ರಾಹುಲ್ ನಾಟೌಟ್..ಔಟ್!



ಪರ್ತ್: ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಭಾರತದ ಕೆ.ಎಲ್. ರಾಹುಲ್ ಅವರನ್ನು ಯುಡಿಆರ್‌ಎಸ್‌ನಲ್ಲಿ ಔಟ್ ಎಂದು ತೀರ್ಪು ನೀಡಿದ ಮೂರನೇ ಅಂಪೈರ್ ರಿಚರ್ಡ್ ಇಲಿಂಗ್‌ವರ್ತ್ ಈಗ ಕ್ರಿಕೆಟ್ ವಲಯದ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಶುಕ್ರವಾರ ಬೆಳಿಗ್ಗೆಯ ಅವಧಿಯಲ್ಲಿ ರಾಹುಲ್ ಅವರೊಬ್ಬರೇ ಕ್ರೀಸ್‌ನಲ್ಲಿ ಗಟ್ಟಿಯಾಗಿ ನಿಂತು ಆತಿಥೇಯ ವೇಗಿಗಳನ್ನು ದಿಟ್ಟವಾಗಿ ಎದುರಿಸಿದವರು. ಅಗ್ರಕ್ರಮಾಂಕದ ಮೂವರು ಬ್ಯಾಟರ್‌ಗಳು ಬೇಗನೆ ಔಟಾದರೂ ರಾಹುಲ್ ತಾಳ್ಮೆಯಿಂದ ಆಡಿದ್ದರು. ನಾಲ್ಕನೇ ವಿಕೆಟ್‌ಗೆ ರಿಷಭ್ ಪಂತ್ ಅವರೊಂದಿಗೆ ಜೊತೆಯಾಟ ಬೆಳೆಸುವ ಹಾದಿಯಲ್ಲಿದ್ದರು. ಆದರೆ 23ನೇ ಓವರ್‌ನಲ್ಲಿ ಮಿಚೆಲ್ ಸ್ಟಾರ್ಕ್ ಹಾಕಿದ ಎಸೆತವು ಆಫ್‌ಸ್ಟಂಪ್ ಪಕ್ಕದಲ್ಲಿ ಹಾದು ಹೋಗುತ್ತಿತ್ತು. ರಾಹುಲ್ ಕಟ್ ಮಾಡಲು ಪ್ರಯತ್ನಿಸಿದರು. ಚೆಂಡು ಬ್ಯಾಟಿನ ತೀರಾ ಸಮೀಪದಿಂದ ಹಾದುಹೋಯಿತು. ಅದನ್ನು ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಕ್ಯಾಚ್ ಪಡೆದರು. ಈ ವೇಳೆ ಸಣ್ಣ ಶಬ್ದವೂ ಕೇಳಿಬಂದಿತ್ತು. ಆಸ್ಟ್ರೇಲಿಯಾದವರ ಜೋರಾದ ಮನವಿಗೆ ಆನ್‌ಫೀಲ್ಡ್ ಅಂಪೈರ್ ರಿಚರ್ಡ್ ಕೆಟಲ್‌ಬರೊ ಪ್ರತಿಕ್ರಿಯಿಸಲಿಲ್ಲ. ಆತಿಥೇಯ ನಾಯಕ ಪ್ಯಾಟ್ ಕಮಿನ್ಸ್ ಡಿಆರ್‌ಎಸ್ ಮೊರೆ ಹೋದರು.

ಮೈದಾನದಲ್ಲಿದ್ದ ದೊಡ್ಡ ಸ್ಕ್ರೀನ್‌ನಲ್ಲಿ ಚೆಂಡು ಬ್ಯಾಟ್‌ನಿಂದ ಕೂದಲೆಳೆಯ ಅಂತರದಲ್ಲಿ ಹಾದು ಹೋಗುವ ಹೊತ್ತಿನಲ್ಲಿ ರಾಹುಲ್ ಅವರ ಬ್ಯಾಟ್ ಪ್ಯಾಡ್‌ಗೆ ಉಜ್ಜಿದ ಶಬ್ದ ಉತ್ಪತ್ತಿಯಾಗಿತ್ತು. ಅದು ಸ್ನಿಕೊ ಮೀಟರ್‌ನಲ್ಲಿಯೂ ಕಂಡಿತ್ತು. ಇದರಿಂದ ನಿರಾಳವಾದ ರಾಹುಲ್ ಮರಳಿ ಗಾರ್ಡ್ ತೆಗೆದುಕೊಳ್ಳಲು ಸಿದ್ಧತೆ ನಡೆಸಿದರು.

ಆದರೆ ಬ್ರಾಡಕಾಸ್ಟಿಂಗ್ ವಿಭಾಗದವರು ನೀಡಿದ ವಿವಿಧ ಆಯಾಮಗಳ ವಿಡಿಯೊಗಳನ್ನು ಅಂಪೈರ್ ಪರಿಶೀಲನೆ ನಡೆಸಿದರು. ಆದರೆ ನಿಖರವಾಗಿ ಗುರುತಿಸಬಹುದಾದಂತಹ ಆಯಾಮದ ವಿಡಿಯೊ ಕಾಣಲಿಲ್ಲ. ಇದರಿಂದಾಗಿ ಇಲಿಂಗ್‌ವರ್ತ್ ಅವರು ಔಟ್ ನೀಡಿದರು. ರಾಹುಲ್ ಅವರು ಇದರಿಂದ ಅಸಮಾಧಾನಗೊಂಡು ಗೊಣಗಾಡುತ್ತಲೇ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದರು. 74 ಎಸೆತಗಳಲ್ಲಿ 26 ರನ್ ಗಳಿಸಿದ ಅವರ ಇನಿಂಗ್ಸ್‌ಗೆ ತೆರೆಬಿತ್ತು. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಕೆಟ್ ಅಭಿಮಾನಿಗಳು ಮತ್ತು ಮಾಜಿ ಕ್ರಿಕೆಟಿಗರ ಆಕ್ರೋಶ ಭುಗಿಲೆದ್ದಿತು.

‘ಅಂಪೈರ್ ಸರಿಯಾದ ಆಯಾಮವಿರುವ ವಿಡಿಯೊ ಕೇಳಿರಬಹುದು. ಆದರೆ ಅದನ್ನು ಕೊಟ್ಟಿಲ್ಲವೆಂದು ನನಗನಿಸುತ್ತದೆ. ಆದರೆ ಮೂರನೇ ಅಂಪೈರ್ ತಮಗೆ ಖಚಿತವಿಲ್ಲದಿದ್ದರೆ, ಫೀಲ್ಡ್ ಅಂಪೈರ್ ತೀರ್ಪನ್ನು ಅನೂರ್ಜಿತಗೊಳಿಸಬಾರದಿತ್ತು. ತಂತ್ರಜ್ಞಾನವನ್ನು ಕೆಟ್ಟದಾಗಿ ಬಳಕೆ ಮಾಡಿಕೊಂಡ ಪರಿಣಾಮ ಇದು’ ಎಂದು ಮಾಜಿ ಕ್ರಿಕೆಟಿಗ ವಾಸೀಂ ಜಾಫರ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಮ್ಯಾಥ್ಯೂ ಹೇಡನ್ ಕೂಡ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ‘ಚೆಂಡು ಚಲಿಸಿ ಹೋಗುವಾಗ ರಾಹುಲ್ ಅವರ ಬ್ಯಾಟ್ ಮತ್ತು ಪ್ಯಾಡ್ ಸಮೀಪದಲ್ಲಿರಲಿಲ್ಲ. ನಂತರದಲ್ಲಿ ಬ್ಯಾಟ್ ಪ್ಯಾಡ್‌ಗೆ ತಗುಲಿತು. ಚೆಂಡು ಬ್ಯಾಟ್ ಅಂಚಿನ ಅಲ್ಪ ಅಂತರದಲ್ಲಿದಾಟಿ ಹೋಯಿತು. ಸ್ನೀಕೊ ಮೀಟರ್ ಈ ಸದ್ದು ಗ್ರಹಿಸಿತೇ? ಬ್ಯಾಟ್ ಹೊರ ಅಂಚು ತಗುಲಿರಬಹುದೇಂದು ಸ್ನಿಕೊ ನೋಡಿದಾಗ ಅನಿಸಿತ್ತು. ಆದರೆ ಅದು ಹಾಗಾಗಿರಲಿಲ್ಲ’ ಎಂದಿದ್ದಾರೆ.

‘ಇದೇಂತಾ ತೀರ್ಪು. ಇದೇನು ತಮಾಷೆನಾ?’ ಎಂದು ಮಾಜಿ ಕ್ರಿಕೆಟಿಗ ರಾಬಿನ್ ಉತ್ತಪ್ಪ ಪ್ರತಿಕ್ರಿಯಿಸಿದ್ದಾರೆ.

ಹುಬ್ಬಳ್ಳಿ ಪೊಲೀಸರ ರಸ್ತೆ ಸುರಕ್ಷತೆ ಜಾಗೃತಿ

ರಾಹುಲ್ ಔಟಾಗಿರುವ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪರ–ವಿರೋಧ ಚರ್ಚೆ ಜೋರಾಗಿದೆ. ಆದರೆ ಈ ಸಂದರ್ಭವನ್ನು ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರೇಟ್ ರಸ್ತೆ ಸುರಕ್ಷತಾ ಜಾಗೃತಿಗಾಗಿ ಬಳಸಿಕೊಂಡಿದೆ.

‘ನಿಮಗೆ ಬ್ಯಾಟ್ ಮತ್ತು ಚೆಂಡಿನ ನಡುವಣ ಅಂತರ ಕಂಡಿಲ್ಲವೇ..!

‘ಹಾಗಿದ್ದರೆ ದಯವಿಟ್ಟು ಇವತ್ತು ರಾತ್ರಿ ರಸ್ತೆ ಮೇಲೆ ವಾಹನ ಚಾಲನೆ ಮಾಡಬೇಡಿ..’ ಎಂಬ ಸಂದೇಶವನ್ನು ಇಲಾಖೆಯು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ. ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿವೆ.

ದೇಶಿ ಟೂರ್ನಿ: ತಾರಾ ಆಟಗಾರರ ರಂಗು

ನವದೆಹಲಿ/ಇಂದೋರ್ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಮತ್ತು ವೇಗಿ ಮೊಹಮ್ಮದ್ ಶಮಿ ಅವರು ಸೇರಿದಂತೆ ಕೆಲವು ತಾರಾ ವರ್ಚಸ್ಸಿನ ಆಟಗಾರರು ಶನಿವಾರ ಆರಂಭವಾಗಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಬರೋಡಾ ತಂಡವನ್ನು ಪ್ರತಿನಿಧಿಸುತ್ತಿರುವ ಪಾಂಡ್ಯ ಅವರನ್ನು ಈಚೆಗೆ ಐಪಿಎಲ್‌ನ ಮುಂಬೈ ಇಂಡಿಯನ್ಸ್ ತಂಡವು ರಿಟೇನ್ ಮಾಡಿಕೊಂಡಿತ್ತು. ಶಮಿ ಅವರು ಗಾಯದಿಂದ ಚೇತರಿಸಿಕೊಂಡ ನಂತರ ತಮ್ಮ ದೈಹಿಕ ಕ್ಷಮತೆಯನ್ನು ಪಣಕ್ಕೊಡ್ಡಿದ್ದಾರೆ. ಅವರು ಈಚೆಗೆ ನಡೆದ ರಣಜಿ ಟ್ರೋಫಿ ಟೂರ್ನಿಯ ಮೊದಲ ಹಂತದ ಪಂದ್ಯಗಳಲ್ಲಿ ಆಡಿದ್ದರು. ಅವರು ಬಂಗಾಳ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಈ ಟೂರ್ನಿಯಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದರೆ ಆಸ್ಟ್ರೇಲಿಯಾ ವಿಮಾನವೇರಿ ಭಾರತ ತಂಡ ಸೇರಿಕೊಳ್ಳುವ ಸಾಧ್ಯತೆಯೂ ಇದೆ.


ಮೊಹಮ್ಮದ್ ಶಮಿ

ಇವರಲ್ಲದೇ ಶ್ರೇಯಸ್ ಅಯ್ಯರ್ (ಮುಂಬೈ), ಯಜುವೇಂದ್ರ ಚಾಹಲ್ (ಹರಿಯಾಣ) ಕೂಡ ಟೂರ್ನಿಯಲ್ಲಿ ಆಡಲಿದ್ದಾರೆ.

ಕರ್ನಾಟಕಕ್ಕೆ ಜಯದ ತವಕ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಬಿ ಗುಂಪಿನಲ್ಲಿ ಆಡಲಿದೆ. ಈ ಗುಂಪಿನಲ್ಲಿ ಮಯಂಕ್ ಬಳಗಕ್ಕೆ ಕಠಿಣ ಸವಾಲು ಎದುರಾಗಲಿದೆ. ಸೌರಾಷ್ಟ್ರ, ಉತ್ತರಾಖಂಡ, ತಮಿಳುನಾಡು, ತ್ರಿಪುರಾ, ಬರೋಡಾ, ಸಿಕ್ಕಿಂ ಮತ್ತು ಗುಜರಾತ್ ತಂಡಗಳು ಈ ಗುಂಪಿನಲ್ಲಿವೆ.

ಶನಿವಾರ ನಡೆಯುವ ಮೊದಲ ಪಂದ್ಯದಲ್ಲಿ ಕರ್ನಾಟಕವು ಉತ್ತರಾಖಂಡವನ್ನು ಎದುರಿಸಲಿದೆ. ಇಂದೋರಿನ ಎಮೆರಾಲ್ಡ್ ಹೈಸ್ಕೂಲು ಮೈದಾನದಲ್ಲಿ ಪಂದ್ಯ ನಡೆಯಲಿದೆ.

ಈ ಟೂರ್ನಿಯ ಇತಿಹಾಸದಲ್ಲಿ ಕರ್ನಾಟಕ ಎರಡು ಬಾರಿ ಚಾಂಪಿಯನ್ ಮತ್ತು ಒಂದು ಸಲ ರನ್ನರ್ಸ್ ಅಪ್ ಆಗಿದೆ. ತಂಡದಲ್ಲಿ ಅನುಭವಿ ಮಯಂಕ್, ಮನೀಷ್ ಪಾಂಡೆ, ಶ್ರೇಯಸ್ ಗೋಪಾಲ್ ಅವರಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ವೈಶಾಖ ವಿಜಯಕುಮಾರ್ ತಂಡಕ್ಕೆ ಮರಳಿದ್ದಾರೆ. ವಿ. ಕೌಶಿಕ್, ವಿದ್ಯಾಧರ್ ಪಾಟೀಲ ಹಾಗೂ ಎಲ್. ಮನ್ವಂತ್ ಕುಮಾರ್ ವೇಗದ ವಿಭಾಗದಲ್ಲಿದ್ದಾರೆ. ಸ್ಪಿನ್ನರ್ ಶುಭಾಂಗ್ ಹೆಗ್ಡೆ ಅವರೂ ತಂಡದಲ್ಲಿದ್ದಾರೆ. ಉತ್ತರಾಖಂಡ ತಂಡದಲ್ಲಿ ಕನ್ನಡಿಗ ರವಿಕುಮಾರ್ ಸಮರ್ಥ್ ಅವರು ಇದ್ದಾರೆ.

ಫಾಲೊಆನ್‌ಗೆ ಒಳಗಾಗಿದ್ದ ಕರ್ನಾಟಕ ತಂಡಕ್ಕೆ ಜಯ

ಚಂಡೀಗಢ: ಫಾಲೊಆನ್‌ಗೆ ಒಳಗಾಗಿದ್ದ ಕರ್ನಾಟಕ ಅಮೋಘವಾಗಿ ಪುಟಿದೆದ್ದು, ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ (19 ವರ್ಷದೊಳಗಿನವರ) ಟೂರ್ನಿ ಪಂದ್ಯದಲ್ಲಿ ಆತಿಥೇಯ ಚಂಡೀಗಢ ತಂಡವನ್ನು 53 ರನ್‌ಗಳಿಂದ ಸೋಲಿಸಿತು. ನಾಯಕ ಧೀರಜ್ ಗೌಡ (31ಕ್ಕೆ 5) ಕರ್ನಾಟಕದ ಈ ಅಮೋಘ ಜಯದಲ್ಲಿ ಮಿಂಚಿದಿರು.

ಇಲ್ಲಿನ ಸೆಕ್ಟರ್ 26 ಕ್ರಿಕೆಟ್ ಮೈದಾನದಲ್ಲಿ ನಡೆದ ನಾಲ್ಕು ದಿನಗಳ ಪಂದ್ಯದ ಮೂರನೇ ದಿನವಾದ ಗುರುವಾರ ಫಾಲೊ ಆನ್‌ಗೆ ಒಳಗಾದ ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್‌ಗೆ 312 ರನ್ ಗಳಿಸಿತ್ತು. ಅಂತಿಮ ದಿನವಾದ ಶುಕ್ರವಾರ ಆ ಮೊತ್ತಕ್ಕೆ 11 ರನ್ ಸೇರಿಸಿ 323ಕ್ಕೆ ಆಲೌಟ್ ಆಯಿತು. ಇದಕ್ಕೆ ಮೊದಲು ಚಂಡೀಗಢ ಮೊದಲ ಇನಿಂಗ್ಸ್‌ನಲ್ಲಿ 173 ರನ್ ಮುನ್ನಡೆ ಪಡೆದಿತ್ತು.

ಹೀಗಾಗಿ ಗೆಲುವಿಗೆ 150 ರನ್‌ಗಳ ಗುರಿ ಎದುರಿಸಿದ ಚಂಡೀಗಢ, ಸ್ಪಿನ್ ಆಲ್‌ರೌಂಡರ್ ಧೀರಜ್ ಗೌಡ ಅವರ ದಾಳಿಗೆ ಸಿಲುಕಿ 97 ರನ್‌ಗಳಿಗೆ ಆಲೌಟ್ ಆಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಚಂಡೀಗಢ: 272, ಕರ್ನಾಟಕ: 99; ಎರಡನೇ ಇನಿಂಗ್ಸ್: ಕರ್ನಾಟಕ (ಫಾಲೊಆನ್): 71.5 ಓವರುಗಳಲ್ಲಿ 323 (ಹಾರ್ದಿಕ್ ರಾಜ್ 44, ಮಾರ್ಕಂಡೇಯ ಪಾಂಚಾಲ್ 59ಕ್ಕೆ5); ಚಂಡೀಗಢ: 36.1 ಓವರುಗಳಲ್ಲಿ 97 (ಅಕ್ಷ್ ರಾಣಾ 26, ಇಹಿತ್ ಸಲಾರಿಯಾ 36; ಸಮರ್ಥ್ ಎನ್ 10ಕ್ಕೆ2, ಧೀರಜ್ ಗೌಡ 31ಕ್ಕೆ5).

ಮುಂದಿನ ಐಪಿಎಲ್ ಮಾರ್ಚ್ 14ರಿಂದ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಮಾರ್ಚ್ 14 ರಿಂದ ಮೇ 25ರವರೆಗೆ ನಡೆಯಲಿದೆ. ಈ ಬಗ್ಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಫ್ರಾಂಚೈಸಿಗಳಿಗೆ ಮಾಹಿತಿ ನೀಡಿದ್ದು, ವಿರಳ ಎಂಬಂತೆ 2026 ಮತ್ತು 2027ರ ಆವೃತ್ತಿಯ ದಿನಾಂಕವನ್ನೂ ಬಲು ಬೇಗನೇ ಪ್ರಕಟಿಸಿದೆ.

ಸೌದಿ ಅರೇಬಿಯಾದ ಜೆದ್ದಾದಲ್ಲಿ ಇದೇ ಭಾನುವಾರ ಮತ್ತು ಸೋಮವಾರ ನಡೆಯಲಿರುವ ಮೆಗಾ ಆಕ್ಷನ್‌ಗೆ ಇಂಗ್ಲೆಂಡ್‌ನ ವೇಗದ ಬೌಲರ್ ಜೋಫ್ರಾ ಆರ್ಚರ್, ಭಾರತ ಸಂಜಾತ ಅಮೆರಿಕದ ಬೌಲರ್ ಸೌರಭ್ ನೇತ್ರಾವಲ್ಕರ್ ಮತ್ತು ಮುಂಬೈನ ಭರವಸೆಯ ವಿಕೆಟ್ ಕೀಪರ್ –ಬ್ಯಾಟರ್ ಹಾರ್ದಿಕ್ ತಮೋರೆ ಅವರ ಹೆಸರನ್ನು ಬಿಡ್‌ಗೆ ಒಳಗಾಗುವ ಆಟಗಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲೂ ಬಿಸಿಸಿಐ ನಿರ್ಧರಿಸಿದೆ.

ಆಟಗಾರರ ಬಿಡ್‌ಗೆ ಯೋಜನೆ ರೂಪಿಸಲು ಫ್ರಾಂಚೈಸಿಗಳಿಗೆ ಅನುಕೂಲ ಕಲ್ಪಿಸಿಕೊಡಲು ಮುಂದಿನ ಮೂರು ಐಪಿಎಲ್ ಋತುಗಳ ದಿನಾಂಕಗಳನ್ನು ಒಂದೇ ಸಾರಿ ಪ್ರಕಟಿಸಲಾಗಿದೆ ಎಂದು ಫ್ರಾಂಚೈಸಿಗಳಿಗೆ ರವಾನಿಸಿರುವ ಸಂದೇಶದಲ್ಲಿ ತಿಳಿಸಲಾಗಿದೆ.

2026 ರ ಐಪಿಎಲ್ ಮಾರ್ಚ್ 15 ರಿಂದ ಆರಂಭವಾಗಲಿದ್ದು, ಫೈನಲ್ ಪಂದ್ಯವನ್ನು ಮೇ 31ರಂದು ನಿಗದಿಪಡಿಸಲಾಗಿದೆ. 2027ರ ಐಪಿಎಲ್ ಮಾರ್ಚ್ 14ರಂದು ಆರಂಭವಾಗಲಿದ್ದು, ಮೇ 30ರವರೆಗೆ ನಡೆಯಲಿದೆ. ಮೂರೂ ಆವೃತ್ತಿಗಳ ಫೈನಲ್ ಪಂದ್ಯಗಳಿಗೆ ನಿಗದಿಗೊಳಿಸಿದ ದಿನಾಂಕ ಭಾನುವಾರ ಬರಲಿದೆ. ಐಪಿಎಲ್ ಪಂದ್ಯಗಳ ಸಂಖ್ಯೆ ಹೆಚ್ಚಿಸಲೂ ಮುಂದಾಗಿದೆ. ಇದರಿಂದ ಹತ್ತೂವರೆ ವಾರಗಳ ಕಾಲ ಪಂದ್ಯಗಳು ನಡೆಯಲು ಅನುವಾಗುತ್ತದೆ.

‘ದಕ್ಷಿಣದ ತಂಡಗಳಿಗೆ ಉತ್ತರದ ಪೆಟ್ಟು’

ಮಂಗಳೂರು: ರಾಜಸ್ಥಾನದ ಜುಂಜುನು ಜಿಲ್ಲೆಯ ಜೆಜೆಟಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಕಬಡ್ಡಿ ಟೂರ್ನಿಯಲ್ಲಿ ದಕ್ಷಿಣ ಭಾರತದ ವಿವಿಗಳಿಗೆ ಅನ್ಯಾಯ ಮಾಡಲಾಗಿದ್ದು ಕೋಚ್ ಮೇಲೆ ಹಲ್ಲೆ ನಡೆದಿದೆ ಎಂದು ದೂರಲಾಗಿದೆ. ಹಲ್ಲೆ ನಡೆಸಿದ ಮತ್ತು ಗದರಿಸುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ನ.20ರಂದು ಆರಂಭಗೊಂಡ ಟೂರ್ನಿ 24ರ ವರೆಗೆ ನಡೆಯಲಿದೆ. 16 ತಂಡಗಳು ಪಾಲ್ಗೊಂಡಿರುವ ಟೂರ್ನಿಯಲ್ಲಿ ದಕ್ಷಿಣ ವಲಯದಿಂದ ಮಂಗಳೂರು ವಿವಿ, ಮೈಸೂರು ವಿವಿ, ಚೆನ್ನೈನ ಎಸ್‌ಆರ್‌ಎಂ ಮತ್ತು ವೆಲ್ಸ್ ವಿವಿಗಳು ಪಾಲ್ಗೊಳ್ಳುತ್ತಿವೆ.

ಕಳೆದ ಬಾರಿಯ ಚಾಂಪಿಯನ್ ಮಂಗಳೂರು ವಿವಿ ಸೇರಿ ಎಲ್ಲ ನಾಲ್ಕೂ ವಿವಿಗಳು ನಾಕೌಟ್ ಹಂತ ಪ್ರವೇಶಿಸದೆ ಹೊರಬಿದ್ದಿವೆ. ‘ರೆಫರಿಗಳು ಉತ್ತರದ, ವಿಶೇಷವಾಗಿ ಆತಿಥೇಯ ವಿವಿ ಪರವಾಗಿ ಏಕಪಕ್ಷೀಯ ತೀರ್ಪು ನೀಡಿರುವುದೇ ದಕ್ಷಿಣದ ತಂಡಗಳ ಸೋಲಿಗೆ ಕಾರಣ’ ಎಂದು ಕೋಚ್‌ಗಳು ಮತ್ತು ವ್ಯವಸ್ಥಾಪಕರು ದೂರಿದ್ದಾರೆ.

ಕಲಬುರಗಿ ಪುರುಷರ ಐಟಿಎಫ್ ಟೂರ್ನಿ

ಚಾಪೆಲ್‌ಗೆ ಸಾಟಿಯಾಗದ ಕರಣ್

• ಮಲ್ಲಪ್ಪ ಪಾರೇಗಾಂವ

ಕಲಬುರಗಿ: ಚುಮುಚುಮು ಚಳಿ ಸರಿದು ಸೂರ್ಯನ ಪ್ರತಾಪ ಏರುವ ಹೊತ್ತು ಕರಣ್‌ಸಿಂಗ್ ಅವರ ಗೆಲುವಿನ ಆಸೆ ದೂರ ಸರಿಯಿತು. ನಾಲ್ಕನೇ ಶ್ರೇಯಾಂಕದ ಭಾರತದ ಆಟಗಾರ ಅಮೆರಿಕದ ನಿಕ್ ಚಾಪೆಲ್ ಎದುರು ಸೋತು ಕಲಬುರಗಿ ಓಪನ್ ಐಟಿಎಫ್ ಟೆನಿಸ್ ಟೂರ್ನಿಯಿಂದ ಹೊರಬಿದ್ದರು.

ಇಲ್ಲಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಟೂರ್ನಿಯ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಕರಣ್ 5–7, 2–6ರಿಂದ 6ನೇ ಶ್ರೇಯಾಂಕದ ನಿಕ್ ಚಾಪೆಲ್ ಎದುರು ಎಡವಿದರು. ಈ ಮೂಲಕ ಕರಣ್ ವಿರುದ್ಧ ಮುಂಬೈ ಐಟಿಎಫ್ ಟೂರ್ನಿಯ ಸೋಲಿನ ಸೇಡನ್ನು ಚಾಪೆಲ್ ತೀರಿಸಿಕೊಂಡರು.

ಮುಂಬೈ ಐಟಿಎಫ್ ಟೂರ್ನಿಯಲ್ಲಿ ಸೆಮಿಫೈನಲ್‌ಗೇರಿದ್ದ ಕರಣ್, ಈ ಪಂದ್ಯದಲ್ಲಿ ಕೆಲವು ಉತ್ತಮ ಡ್ರಾಪ್ ಶಾಟ್‌ಗಳನ್ನು ಹಾಕಿದರೂ ನೆಟ್ಸ್‌ಸಮೀಪದ ಆಟದಲ್ಲಿ ಪಾಯಿಂಟ್ ಹೆಕ್ಕುವಲ್ಲಿ ವೈಫಲ್ಯ ಅನುಭವಿಸಿದರು. ಜತೆಗೆ ಒತ್ತಡಕ್ಕೆ ಒಳಗಾದಂತೆ ಕಂಡ ಅವರು, ಮೂರು ಬಾರಿ ಡಬಲ್‌ಫಾಲ್ಟ್‌ಗಳನ್ನೂ ಮಾಡಿದರು. ಇದರಿಂದಾಗಿ ಎದುರಾಳಿಗೆ ಲಾಭವಾಯಿತು.

ಕರಣ್ ಆರಂಭದ ಸೆಟ್‌ನ ಮೊದಲೆರಡು ಗೇಮ್‌ಗಳನ್ನು ಸುಲಭವಾಗಿ ತಮ್ಮದಾಗಿಸಿಕೊಂಡು ಮುನ್ನಡೆ ಸಾಧಿಸಿದರು. ಆದರೆ, 3, 4ನೇ ಗೇಮ್‌ಗಳಲ್ಲಿ ತಿರುಗೇಟು ನೀಡಿದ ಚಾಪೆಲ್ 2–2ರಿಂದ ಸಮಬಲ ಸಾಧಿಸಿದರು. ನಂತರವೂ ಇಬ್ಬರ ನಡುವೆ 3–3, 4–4, 5–5ರಿಂದ ಸಮಬಲದ ಹೋರಾಟ ಕಂಡುಬಂತು. ಕೊನೆಯಲ್ಲಿ ಕರಣ್ ಸಿಂಗ್ ಎಸಗಿದ ತಪ್ಪುಗಳ ಲಾಭ ಎತ್ತಿದ ಚಾಪೆಲ್, 7–5ರಿಂದ ಸೆಟ್ ವಶಪಡಿಸಿಕೊಂಡರು.

ಎರಡನೇ ಸೆಟ್‌ನ ಆರಂಭದಲ್ಲಿ 2–2ರಿಂದ ಸಮಬಲದ ಹೋರಾಟ ನಡೆಯಿತು. 5ನೇ ಗೇಮ್ ಅನ್ನು ತಮ್ಮದಾಗಿಸಿಕೊಂಡ ಚಾಪೆಲ್ 3–2ರಿಂದ ಮುನ್ನಡೆ ಸಾಧಿಸಿದರು. 6ನೇ ಗೇಮ್‌ನಲ್ಲಿ ಡಬಲ್ ಫಾಲ್ಟ್ ಮೂಲಕ ಮತ್ತೊಂದು ಗೇಮ್ ಬಿಟ್ಟು ಕೊಟ್ಟಿದ್ದರಿಂದ 2–4ರಿಂದ ಹಿನ್ನಡೆ ಅನುಭವಿಸಿದರು. ನಂತರವೂ ನೆಟ್ಸ್‌ನಲ್ಲಿ ಪಾಯಿಂಟ್ ಗಳಿಸುವ ಕರಣ್ ಯತ್ನ ಫಲಿಸಲಿಲ್ಲ. ಈ ಗೆಲುವಿನೊಂದಿಗೆ ಚಾಪೆಲ್, ಸೆಮಿಫೈನಲ್‌ಗೇರಿದರು.



ನಿಕ್ ಚಾಪೆಲ್ ಆಟದ ವೈಖರಿ
ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಭುವನೇಶ್ವರ ಐಟಿಎಫ್ ಟೂರ್ನಿಯಲ್ಲಿ ನಾಲ್ಕರ ಘಟ್ಟ ತಲುಪಿದ್ದ ಚಾಪೆಲ್, ಇಲ್ಲಿಯೂ ಪ್ರಶಸ್ತಿ ಜಯದ ವಿಶ್ವಾಸ ವೃದ್ಧಿಸಿಕೊಂಡರು. ಸೆಮಿಯಲ್ಲಿ ಅವರು ರಷ್ಯಾದ ಬಾಗ್ದಾನ್ ಬಾಬ್‌ರೋವ್ ಅವರನ್ನು ಎದುರಿಸಲಿದ್ದಾರೆ.

ಆರ್ಯನ್ ಕನಸು ಭಗ್ನ: 19 ವರ್ಷದ ಪ್ರತಿಭೆ, ಭಾರತದ ಆರ್ಯನ್ ಷಾ ಅವರ ಸೆಮಿ ಕನಸೂ ಕೈಗೂಡಲಿಲ್ಲ. ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಬಾಬ್‌ರೋವ್ 7–6, 6–3ರಿಂದ ಆರ್ಯನ್ ಅವರಿಗೆ ಸೋಲುಣಿಸಿದರು.

ಅಗ್ರ ಶ್ರೇಯಾಂಕದ ಖುಮೋಯುನ್ ಸುಲ್ತಾನೋವ್ (ಉಜ್ಬೇಕಿಸ್ತಾನ) ಗೆಲುವಿನ ಓಟ ಮುಂದುವರಿಸಿದರು. ಅವರು 6–2, 6–3ರಿಂದ ರಷ್ಯಾದ ಮ್ಯಾಕ್ಸಿಂ ಝುಕೋವ್‌ರನ್ನು ಪರಾಭವಗೊಳಿಸಿ ಸೆಮಿ ಪ್ರವೇಶಿಸಿದರು. ಅಲ್ಲಿ ಅವರು ಭಾರತದ ದೇವ್ ಜೇವಿಯಾ ಅವರನ್ನು ಎದುರಿಸಲಿದ್ದಾರೆ. ಎಂಟರಘಟ್ಟದ ಇನ್ನೊಂದು ಹಣಾಹಣಿಯಲ್ಲಿ ಸಿದ್ಧಾರ್ಥ್ ರಾವತ್ ಅನಾರೋಗ್ಯದಿಂದಾಗಿ ದೂರ ಉಳಿದರು. ಈ ಪಂದ್ಯದಲ್ಲಿ 1–0 ಗೇಮ್‌ನಿಂದ ಮುಂದಿದ್ದ ಜೇವಿಯಾ ನಾಲ್ಕರ ಘಟ್ಟ ಪ್ರವೇಶಿಸಿದರು.

ಡಬಲ್ಸ್ ಫೈನಲ್ ಹಣಾಹಣಿ ಇಂದು: ಡಬಲ್ಸ್ ವಿಭಾಗದ ಫೈನಲ್ ಹಣಾಹಣಿ ಶನಿವಾರ ನಡೆಯಲಿದ್ದು, ರಷ್ಯಾ ಇಗೋರ್ ಅಗಾಫೋನೊವ್–ಬಾಗ್ದಾನ್ ಬಾಬ್‌ರೋವ್ ಹಾಗೂ ನಿಕ್ ಚಾಪೆಲ್–ನಿತಿನ್ ಕುಮಾರ್ ಸಿನ್ಹಾ ಜೋಡಿಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಪ್ರೊ ಕಬಡ್ಡಿ: ಯೋಧಾಸ್‌ಗೆ ಜಯ

ನೊಯ್ಡಾ: ದ್ವಿತೀಯಾರ್ಧದಲ್ಲಿ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಯು.ಪಿ. ಯೋಧಾಸ್ ತಂಡ ಪ್ರೊಕಬಡ್ಡಿ ಲೀಗ್ ಪಂದ್ಯದಲ್ಲಿ 16 ಅಂಕಗಳಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿ ಟೂರ್ನಿಯಲ್ಲಿ ಐದನೇ ಜಯ ದಾಖಲಿಸಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ದಿನದ ಮೊದಲ ಪಂದ್ಯದಲ್ಲಿ ಯೋಧಾಸ್ 40-24 ಅಂಕಗಳಿಂದ ತಲೈವಾಸ್ ತಂಡವನ್ನು ಸೋಲಿಸಿತು. ವಿರಾಮದ ವೇಳೆ ಸ್ಕೋರ್ 13–13ರಲ್ಲಿ ಸಮನಾಗಿತ್ತು.

ದಿನದ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ದಬಾಂಗ್ ತಂಡವು 35–21ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿತು.

ಬೆಂಗಳೂರು ರೇಸ್

ಆಲ್ಡ್‌ಗೇಟ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಟರ್ಫ್ ಕ್ಲಬ್ ಕ್ಲಬ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ಡ್‌ಗೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೀ ದಿ ಲೈಟ್ 6, ಗ್ಲೋರಿಯಸ್‌ನೆಸ್ 4, ಡೆವೇಟ್ 3
2ನೇ ರೇಸ್: ಪವರ್ ಆಫ್ ಬ್ಯೂಟಿ 1, ಫೆಲಿಸ 3, ಮಾರ್ಥ 4
3ನೇ ರೇಸ್: ಮಾರ್ಟಿನೊ 7, ಮೆಹ್ರ 8, ಡೇಸ್‌ಡೇಟ್ 5
4ನೇ ರೇಸ್: ಕ್ವೀನ್ ಆಫ್ ಕಿವ್ 1, ಮಾಂಟೇರಿಯೊ 4, ಕ್ಯಾಟ್ ವಿಸ್ಕರ್ಸ್ 3
5ನೇ ರೇಶ್: ರಾಂಕ್ವಲಿನೊ 1, ಭರತ್ 6, ಆಗಸ್ಟ್ 3
6ನೇ ರೇಸ್: ಆಲ್ಡ್‌ಗೇಟ್ 2, ಆಸ್ಕೊವಾಲ್ 3, ಯುಕನ್ 1
7ನೇ ರೇಸ್: ವಿವಾಲ್ಡೊ 3, ನೆವರ್ ಗೀವ್ ಇನ್ 4, ಟ್ರಿಪಿಟಾಕ 2
8ನೇ ರೇಸ್: ಡಾನ್ ಕಾರ್ಲೋಸ್ 3, ಲಾಕ್‌ಹೀಡ್ 9, ಮ್ಯಾಜಿಕಲ್ ಬೇ 7

ಅತ್ಯುತ್ತಮ ಬೆಟ್: ಸೀ ದಿ ಲೈಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲ ಟೆಸ್ಟ್‌ಗೆ ಸುವರ್ಣ ಸಂಭ್ರಮ

ಸ್ಟ್ಯಾಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರ ಹೆಸರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಕೆಲವು ಸ್ಟ್ಯಾಂಡ್‌ಗಳಿಗೆ ಶೀಘ್ರದಲ್ಲಿಯೇ ಕರ್ನಾಟಕದ ದಿಗ್ಗಜ ಕ್ರಿಕೆಟಿಗರ ಹೆಸರುಗಳನ್ನು ನೀಡಿ, ಗೌರವಿಸುವತ್ತ ರಾಜ್ಯ ಕ್ರಿಕೆಟ್ ಸಂಸ್ಥೆಯು ಒಲವು ತೋರಿದೆ ಎನ್ನಲಾಗಿದೆ.

ಇಲ್ಲಿ ಮೊದಲ ಟೆಸ್ಟ್ ಪಂದ್ಯ ನಡೆದು (1974ರ ನವೆಂಬರ್ 22 ರಿಂದ 27) ಶುಕ್ರವಾರಕ್ಕೆ 50 ವರ್ಷ ತುಂಬಿದೆ. ಈ ಸಂದರ್ಭದಲ್ಲಿ; ಭಾರತ ತಂಡವನ್ನು ಪ್ರತಿನಿಧಿಸಿ ಅಮೋಘ ಸಾಧನೆ ಮಾಡಿರುವ ರಾಜ್ಯ ದಿಗ್ಗಜ ಆಟಗಾರರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡುವ ಕುರಿತು ಗಂಭೀರ ಚರ್ಚೆ ನಡೆದಿದೆ ಎನ್ನಲಾಗಿದೆ. ಆ ಟೆಸ್ಟ್ ಪಂದ್ಯದಲ್ಲಿಯೂ ಆಡಿದ್ದ ಎರ್ರಪಳ್ಳಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ಬಿ.ಎಸ್. ಚಂದ್ರಶೇಖರ್ ಮತ್ತು ಬ್ರಿಜೇಶ್ ಪಟೇಲ್ ಅವರ ಹೆಸರುಗಳನ್ನು ಕೆಲವು ಸ್ಟ್ಯಾಂಡ್‌ಗಳಿಗೆ ಇಡಬೇಕು. ಅವರಲ್ಲದೇ ಸೈಯದ್ ಕಿರ್ಮಾನಿ, ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್ ಮತ್ತು ವೆಂಕಟೇಶ್ ಪ್ರಸಾದ್ ಹೆಸರುಗಳನ್ನು ಇಡಲು ಕೂಡ ಈಚೆಗೆ ನಡೆದ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.


ಚಿನ್ನಸ್ವಾಮಿ ಕ್ರೀಡಾಂಗಣ –ಪ್ರಜಾವಾಣಿ ಸಂಗ್ರಹ ಚಿತ್ರ

‘ಭಾರತದ ಕ್ರಿಕೆಟ್ ಬೆಳವಣಿಗೆ ಮತ್ತು ಕರ್ನಾಟಕಕ್ಕೆ ಕ್ರಿಕೆಟ್ ಪರಂಪರೆಯನ್ನು ಕಟ್ಟಿಕೊಟ್ಟ ಖ್ಯಾತನಾಮ ಆಟಗಾರರಿಗೆ ಗೌರವ ಸಲ್ಲಿಸಲು ಈ ಕುರಿತು ಚಿಂತನೆ ನಡೆಸಲಾಗಿದೆ. ಈ ಬಗ್ಗೆ ಚರ್ಚೆಗಳೂ ನಡೆದಿವೆ. ಇನ್ನೂ ಅಂತಿಮ ನಿರ್ಧಾರವಾಗಿಲ್ಲ’ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ಕೆಲ ತಿಂಗಳ ಹಿಂದೆ ಇತಿಹಾಸಕಾರ ಮತ್ತು ಲೇಖಕ ರಾಮಚಂದ್ರ ಗುಹಾ ಅವರು ಚಿನ್ನಸ್ವಾಮಿ ಕ್ರೀಡಾಂಗಣದ ದ್ವಾರಗಳು ಅಥವಾ ಸ್ಟ್ಯಾಂಡ್‌ಗಳಿಗೆ ರಾಜ್ಯದ ಖ್ಯಾತನಾಮ ಕ್ರಿಕೆಟಿಗರ ಹೆಸರುಗಳನ್ನು ಇಡಬೇಕು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಆ ಸಂದರ್ಭದಲ್ಲಿ ಸಿದ್ಧರಾಮಯ್ಯ ಅವರೂ ಕೆಎಸ್‌ಸಿಎ ಅಧ್ಯಕ್ಷರಿಗೆ ಪತ್ರ ಬರೆದು, ರಾಜ್ಯಕ್ಕೆ ಕೀರ್ತಿ ತಂದ ಮಹನೀಯ ಕ್ರಿಕೆಟಿಗರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಬೇಕು ಎಂದು ಮನವಿ ಮಾಡಿದ್ದರು.

‘ರಾಮಚಂದ್ರ ಗುಹಾ ಅವರು ಮಾಡಿರುವ ಮನವಿಯಲ್ಲಿ ಶ್ರೇಷ್ಠ ಅಂಶಗಳಿವೆ. ಜಿ.ಆರ್. ವಿಶ್ವನಾಥ್, ಇ.ಎ.ಎಸ್. ಪ್ರಸನ್ನ ಹಾಗೂ ಬಿ.ಎಸ್. ಚಂದ್ರಶೇಖರ್ ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಬೇಕೆಂದು ಮನವಿ ಮಾಡುತ್ತೇನೆ. ಇದರಿಂದ ಮುಂದಿನ ಪೀಳಿಗೆಯ ಆಟಗಾರರಿಗೆ ಪ್ರೇರಣೆ ಲಭಿಸುತ್ತದೆ’ ಎಂದು ಸಿದ್ಧರಾಮಯ್ಯ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದರು.

‘1974ರಲ್ಲಿ ಕರ್ನಾಟಕ ತಂಡವು ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತ್ತು. ಸತತ 15 ಬಾರಿ ರಣಜಿ ಚಾಂಪಿಯನ್ ಆಗಿದ್ದ ಮುಂಬೈ ತಂಡದ ಪಾರಮ್ಯಕ್ಕೆ ಕರ್ನಾಟಕ ತಡೆಯೊಡ್ಡಿದ್ದು ಐತಿಹಾಸಿಕ ಸಾಧನೆ. ಆ ವಿಜಯಕ್ಕೆ ಈಗ 50 ವರ್ಷಗಳು ತುಂಬಿರುವ ಸಂಭ್ರಮ. ಶ್ರೇಷ್ಠ ಬ್ಯಾಟರ್ ವಿಶ್ವನಾಥ್, ಸ್ಪಿನ್ ಅವಳಿಗಳಾದ ಪ್ರಸನ್ನ ಮತ್ತು ಚಂದ್ರಶೇಖರ್ ರಾಜ್ಯ ಮತ್ತು ದೇಶದ ಕ್ರಿಕೆಟ್‌ಗೆ ನೀಡಿರುವ ಕೊಡುಗೆ ಅಮೋಘವಾದದ್ದು. ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಲು ಕ್ರಮ ಕೈಗೊಳ್ಳಬೇಕು’ ಎಂದು ಗುಹಾ ಅವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ವಿವರಿಸಿದ್ದರು.


ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಚಿರಾಗ್ ಶೆಟ್ಟಿ (ಎಡ) ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಆಟದ ವೈಖರಿ –ಎಎಫ್‌ಪಿ ಚಿತ್ರ

ಸಾತ್ವಿಕ್–ಚಿರಾಗ್ ಜೋಡಿ ಸೆಮಿಗೆ

ಶೆನ್‌ಝೆನ್ (ಚೀನಾ), (ಪಿಟಿಐ): ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕದ ಕಿಮ್ ಅಸ್ಟ್ರುಪ್ ಮತ್ತು ಆಂಡರ್ಸ್ ಸ್ಕಾರಪ್ ರಾಸ್‌ಮುಸ್ಸೆನ್ ಅವರಿಗೆ ಆಘಾತ ನೀಡಿ ಸೆಮಿಫೈನಲ್ ಪ್ರವೇಶಿಸಿದರು.

ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಮೊದಲ ಬಾರಿ ಕಣಕ್ಕೆ ಇಳಿದಿರುವ ಭಾರತದ ಜೋಡಿಯು ಶುಕ್ರವಾರ ಪುರುಷರ ಡಬಲ್ಸ್‌ನ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ 21-16, 21-19ರಿಂದ ಡೆನ್ಮಾರ್ಕ್ ಆಟಗಾರರನ್ನು ಹಿಮ್ಮೆಟ್ಟಿಸಿತು.

ಕಳೆದ ಆವೃತ್ತಿಯಲ್ಲಿ ಫೈನಲ್ ತಲುಪಿದ್ದ ಭಾರತದ ಆಟಗಾರರು, ನಾಲ್ಕರ ಘಟ್ಟದ ಹಣಾಹಣಿಯಲ್ಲಿ ದಕ್ಷಿಣ ಕೊರಿಯಾದ ಜಿನ್ ಯೋಂಗ್ ಮತ್ತು ಸಿಯೊ ಸೆಯುಂಗ್ ಜೇ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಕಣದಲ್ಲಿ ಉಳಿದಿದ್ದ ಭಾರತದ ಏಕೈಕ ಸ್ಪರ್ಧಿ ಲಕ್ಷ್ಯ ಸೇನ್ ಅವರೂ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದರು. ಅವರು 18–21, 15–21ರಿಂದ ಮೂರನೇ ಶ್ರೇಯಾಂಕದ ಆಂಡರ್ಸ್ ಆಂಟೊನ್‌ಸೆನ್ (ಡೆನ್ಮಾರ್ಕ್) ಅವರಿಗೆ ಮಣಿದರು.